3

ಮುದ್ದುರಾಮನ ಅರಿವು

ಕೆ. ಸಿ. ಶಿವಪ್ಪ



ಕೆ. ಸಿ. ಶಿವಪ್ಪ

ಹುಟ್ಟಿದ್ದು (26.7.1937) ಚಾಮರಾಜನಗರ ಜಿಲ್ಲೆಯ ಕಾಗಲವಾಡಿಯಲ್ಲಿ. ಚಾಮರಾಜನಗರ, ಮೈಸೂರಿನಲ್ಲಿ ವಿದ್ಯಾಭ್ಯಾಸ. ಸರ್ಕಾರಿ ತರಬೇತಿ ಮಹಾವಿದ್ಯಾಲಯ (ಮೈಸೂರು), ಕೇಂದ್ರ ಚರ್ಮಸಂಶೋಧನಾಲಯ (ಚೆನ್ನೈ), ಬೆಂಗಳೂರು ವಿಶ್ವವಿದ್ಯಾಲಯ, ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಸಚಿವಾಲಯ (ವಿಧಾನಸೌಧ), ಜೆಎಸ್‌ಎಸ್ ಮಹಾವಿದ್ಯಾಪೀಠ ಮುಂತಾದೆಡೆಗಳಲ್ಲಿ ಸೇವೆ.

ರಾಗರತಿ, ಅನುರಾಗ, ರಾಧಾಮಾಧವ, ಚಿತ್ತಭಿತ್ತಿ, ಚಿತ್ತವೃತ್ತಿ, ಚಿತ್ರಾಂಬರ, ಚೆಂಬೆಳಕು, ಚಿದಾನಂದ, ಚೆಲುವೆ, ಚಂದ್ರಿಕೆ, ಚಾರುಲತೆ, ಚಿತ್ರಪತ್ರ (ಕವನಸಂಕಲನಗಳು). ಕೆಸಿಎಸ್ ಸಮಗ್ರಕಾವ್ಯ (ಸಂಪುಟ 1: ನೆನಪು ಮಂದಾರ; ಸಂಪುಟ 2: ಚೈತ್ರ ಚೈತನ್ಯ). ಮುದ್ದುರಾಮನ ಮನಸು, ಮುದ್ದುರಾಮನ ಬದುಕು-ಬೆಳಕು, ಮುದ್ದುರಾಮನ ಅರಿವು, ಮುದ್ದುರಾಮನ ನಲಿವು (ಚೌಪದಿಗಳ ಸಂಕಲನ). ಬದುಕಿಗೊಂದು ಭರವಸೆ, ಚಿತ್ತಚಿತ್ತಾರ (ವ್ಯಕ್ತಿತ್ವ ವಿಕಸನ). ಮೌನಸ್ಪಂದನ, ಚಿತ್ತಪರಿಪಾಕ (ಚಿಂತನ ಬಿಡಿನುಡಿಸಂಚಯ). ಜೀವಸತ್ವಗಳು, ಬೆಡಗಿನ ಬಾಟಿಕ್, ಭೂಮಿ, ಶುಕ್ರದೆಸೆ (ಅನುವಾದ). ಅರವಿಂದ ದರ್ಶನ, ವಂದನಾ, ವಿಶ್ವಧರ್ಮ ದರ್ಶನ ಸಂಪುಟ 2, ರಾಜೇಂದ್ರ ಚಿತ್ರಸಂಪುಟ, ರಾಜೇಂದ್ರ ನುಡಿನಮನ, ರಾಜೇಂದ್ರ ಕವನಕುಸುಮ (ಸಂಪಾದನೆ). ಬಾಳಬಣ್ಣ, ಪಂಚತಂತ್ರದ ಕತೆಗಳು, ವಿನಯ ಕನ್ನಡ ಭಾರತಿ (ಇತರೆ), ವಚನ ದರ್ಶನ, ವಚನ ಸೂಕ್ತಿ ಸಂಚಯ – ಹೀಗೆ ಹಲವು ಕೃತಿಗಳನ್ನು ಪ್ರಕಟಿಸಿದ್ದಾರೆ, ಸಂಪಾದಿಸಿದ್ದಾರೆ. ಇಂಗ್ಲಿಷಿನಲ್ಲಿಯೂ ಹಲವು ಕೃತಿಗಳು ಪ್ರಕಟಗೊಂಡಿವೆ.

ಡಿ.ವಿ.ಜಿ. ಮುಕ್ತಕ ಸಾಹಿತ್ಯ ಪ್ರಶಸ್ತಿ, ಕುಲಪತಿ ಕೆ.ಎಂ.ಮುನ್ಷಿ ಸನ್ಮಾನ, ರಮಣಶ್ರೀ ಶರಣ ಪ್ರಶಸ್ತಿ, ಬಸವ ವೇದಿಕೆಯ ವಚನಸಾಹಿತ್ಯಶ್ರೀ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಸುವರ್ಣ ಗೌರವ ಪ್ರಶಸ್ತಿ, ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಹಲಸಂಗಿ ಗೆಳೆಯರ ಪ್ರತಿಷ್ಠಾನ ಪ್ರಶಸ್ತಿ, ದಶಮಾನೋತ್ಸವ ಹೊಯ್ಸಳ ಪ್ರಶಸ್ತಿ, ಭಾರತ ಸರ್ಕಾರದ ಎಕ್ಸೆಲೆನ್ಸ್ ಇನ್ ಪ್ರಿಂಟಿಂಗ್ ಅವಾರ್ಡ್(ಬೆಂವಿವಿ ಪ್ರಕಟಣೆಗಳಿಗೆ), ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ದಸರಾ ಕವಿಗೋಷ್ಠಿಗಳ ಅಧ್ಯಕ್ಷತೆ, ಚಾಮರಾಜನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಾಹಿತ್ಯ ಶ್ರೀ ಪ್ರಶಸ್ತಿ ಮುಂತಾದ ಗೌರವಗಳು ಸಂದಿವೆ.

ಬೆಂಗಳೂರ ದಕ್ಷಿಣ ರೋಟರಿ ಕ್ಲಬ್‌ನ ಅಧ್ಯಕ್ಷರು, ಭಾರತೀಯ ವಿದ್ಯಾಭವನದ ಗೌ. ಕಾರ್ಯದರ್ಶಿ, 'ಪ್ರಸಾದ', 'ಶರಣಪಥ', 'ಜಶಿರಾ', 'ನಾವು-ನೀವು', 'ಮಲ್ಲಿಗೆ' ಮೊದಲಾದ ನಿಯತಕಾಲಿಕೆಗಳ ಪ್ರಧಾನ ಸಂಪಾದಕತ್ವ, ಹತ್ತಾರು ದನಿಸುರಳಿ-ಸಿ.ಡಿ.ಗಳ ರಚಯಿತರು. ಅಮೆರಿಕಾ, ಯೂರೋಪ್ ರಾಷ್ಟ್ರಗಳು, ಮೆಕ್ಸಿಕೊ, ಸಿಂಗಪುರ್, ಇಂಡೋನೇಷ್ಯ ಮುಂತಾದ ದೇಶಗಳ ಪ್ರವಾಸ. ಸದ್ಯ ಮೈಸೂರಿನಲ್ಲಿ ನೆಲೆಸಿದ್ದಾರೆ.

ಮುದ್ದುರಾಮನ ಅರಿವು

999 ಚೌಪದಿಗಳ ಸಂಕಲನ

ಕೆ. ಸಿ. ಶಿವಪ್ಪ

ಅಭಿನವ

17/18-2, ಮೊದಲನೆಯ ಮುಖ್ಯರಸ್ತೆ, ಮಾರೇನಹಳ್ಳಿ
ವಿಜಯನಗರ, ಬೆಂಗಳೂರು 560 040

MUDDURAMANA ARIVU

Collection of poems
by

K. C. Shivappa
1706, 2nd Main, 'F' Block
Dattagalli 3rd Stage,
Kanakadasa Nagara, Mysuru-560033.
Email: shivakagal99@gmail.com

Published by
Abhinava, 17/18-2, 1st Main,
Marenahalli, Vijayanagara,
Bangaluru 560040.
Ph: 9448804905, 082-23505825.
E-mail: abhinavaravi@gmail.com

ISBN : 978-81-944761-6-0

Book Size : 1/12 Demmy

Paper used : 70 gsm white maplitho

Pages : 244 + xii = 256 Rs. 170/-

ಮೊದಲ ಮುದ್ರಣ 2020
ರಕ್ಷಾಪುಟ ವಿನ್ಯಾಸ - ಕಲೆ: ಪ್ರಕಾಶ್ ಚಿಕ್ಕಪಾಳ್ಯ
ಬೆಲೆ: ರೂ. ಒಂದು ನೂರಾ ಎಪ್ಪತ್ತು ರೂಪಾಯಿಗಳು
ಮುದ್ರಣ : ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು

ಉತ್ತರ ಕರ್ನಾಟಕದಲ್ಲಿ
'ಮುದ್ದುರಾಮ' ಸ್ವಾಮಿಜಿ ಎಂದೇ
ಜನಮಾನಸದಲ್ಲಿ
ಚಿರಪರಿಚಿತರಾಗಿರುವ
ಅರಿವಿನ ದಾಸೋಹದಲ್ಲಿ
ನಿರತರಾಗಿರುವ
ಪೂಜ್ಯ ಶ್ರೀ ಮಲ್ಲಯ್ಯ ಸ್ವಾಮಿಗಳು
(ಶ್ರೀ ಶಿವಾನಂದ ಮಠ, ಘೋಡಗೇರಿ)
ಅವರಿಗೆ.



ಅರಿಕೆ ಮಾತು

ನನ್ನ ಮನದಾಳದನಿಸಿಕೆಗಳು ತಂತಾವೆ ಅಕ್ಷರ ರೂಪದಲ್ಲಿ ಆಕೃತಿ ಪಡೆದ ನುಡಿಚಿತ್ರಗಳು ಇಲ್ಲಿರುವ ಚೌಪದಿಗಳು. ಎಂದೊ ಕಂಡಿದ್ದು ಕೇಳಿದ್ದು, ಎಲ್ಲೊ ಓದಿದ್ದು ಅರಿತದ್ದು ಜೀವನಾನುಭವದ ಅಂಗವಾಗಿ ಬರಹದಲ್ಲಿ ಒಡಮೂಡಿದೆ. ಕಳೆದೆರಡು ದಶಕಗಳ ಅವಧಿಯಲ್ಲಿ ನನ್ನ ಊಹೆಗೂ ನಿಲುಕದಷ್ಟು ಪ್ರಮಾಣದಲ್ಲಿ ರಚಿತವಾದ ಈ ಚೌಪದಿಗಳು ನನಗೇ ಅಚ್ಚರಿಯ ಸಂಗತಿಯಾಗಿದೆ. ಸುಮಾರು ಐದು ಸಾವಿರ ಗಂಟೆಗಳಷ್ಟು ಸಮಯವನ್ನು ಈ ಕಾರ್ಯ ಅಪೇಕ್ಷಿಸಿದೆ ಎನ್ನಬಹುದು. ತತ್ಪರಿಣಾಮವೆಂದರೆ ನನಗೆ ದೊರೆತ ಆತ್ಮಸಂತೋಷ; ನನ್ನ ಬದುಕಿಗೆ ಕೂಡಿ ಬಂದ ದೇವಪ್ರಸಾದ ಹಾಗೂ ಕಾಲಕಟಾಕ್ಷ.

ಬರೆದ ಚೌಪದಿಗಳ ಸಂಖ್ಯೆಯೇನೊ ಸುಮಾರು ಇಪ್ಪತ್ತೈದು ಸಾವಿರ ದಾಟಿತು. ಆದರೆ, ಇವನ್ನೆಲ್ಲ ವಿಂಗಡಿಸಿ, ಕೃತಿರೂಪದಲ್ಲಿ ಪ್ರಕಟಿಸುವ ಕೆಲಸ ಸುಲಭವೆಂದೆನಿಸಲಿಲ್ಲ. ನನ್ನ 82ರ ಇಳಿವಯಸ್ಸು ಹಾಗೂ ಶಾರೀರಿಕ ಆಯಾಸ ಪ್ರಕಟಣೆಯ ಪ್ರಗತಿಗೆ ಕೊಂಚ ಅಡ್ಡಿ ಅಡೆತಡೆ ತಂದಿರುವುದಂತೂ ನಿಜ. ಇಂಥ ಇಕ್ಕಟ್ಟಿನ ಒತ್ತಡದ ಹೊತ್ತಿನಲ್ಲಿ ಪ್ರೀತಿಯಿಂದ ಸಹಾಯಹಸ್ತ ಚಾಚಿ ನನ್ನ ನೆರವಿಗೆ ನಿಂತ ಮಿತ್ರರೆಂದರೆ ಪ್ರೊ. ನೀಲಗಿರಿ ತಳವಾರ ಹಾಗೂ ಶ್ರೀ ಆರ್.ಎ. ಚೇತನ್ ರಾಂ. ಈ ಕಾರ್ಯಪೂರ್ತಿಯಲ್ಲಿ ನನ್ನೊಡನೆ ಎರಡು ವಾರಗಳ ಕಾಲ ಹಗಲಿರುಳು ದುಡಿದಾತ ಪ್ರತಿಭಾವಂತ ತರುಣ ಕೆ. ಸಿ. ಲೋಹಿತ್. ಇವರೆಲ್ಲರ

ಆತ್ಮೀಯತೆಯ ಕುರುಹಾಗಿ ಈ ಹೊತ್ತಿಗೆ ಬೆಳಕು ಕಾಣುತ್ತಲಿದೆ. ಇದೆಲ್ಲ ಕಣ್ಣಿಗೆ ಕಾಣದ ಅಪರೂಪದ ಶಕ್ತಿಯ ಪ್ರಭಾವ ಅಷ್ಟೆ!

2003ರಲ್ಲಿ ಪ್ರಕಟವಾದ 'ಮುದ್ದುರಾಮನ ಮನಸು' ಏಳು ಬಾರಿ ಮರುಮುದ್ರಿತವಾಗಿ ಓದುಗರ ಮೆಚ್ಚುಗೆ ಗಳಿಸಿದೆ. ಬರೆದವನ ಜೀವಿತ ಕಾಲದಲ್ಲಿ ಕೃತಿಗೆ ದೊರೆತ ಈ ಪ್ರತಿಕ್ರಿಯೆಗೆ ನಾನು ಆಭಾರಿಯಾಗಿದ್ದೇನೆ. 'ಮುದ್ದುರಾಮನ ಬದುಕು-ಬೆಳಕು' 2012ರಲ್ಲಿ ಬೆಳಕು ಕಂಡಿತು. ಈಗ ಮತ್ತೆರಡು ಸಂಕಲನಗಳು – 'ಮುದ್ದುರಾಮನ ಅರಿವು' ಹಾಗೂ 'ಮುದ್ದುರಾಮನ ನಲಿವು' ಸಹೃದಯಿ ಓದುಗ ಬಂಧುಗಳ ಕೈಸೇರುತ್ತಿವೆ. ಜುಲೈ 2014 ರಿಂದ ನವೆಂಬರ್ 2015ರ ಅವಧಿಯಲ್ಲಿ ರಚಿಸಿದ ಆಯ್ದ ಚೌಪದಿಗಳು ಈ ಎರಡು ಸಂಕಲನಗಳಲ್ಲಿ ಸೇರಿವೆ. ಬರೆದದ್ದು ಸಾರ್ಥಕ ವಾಯಿತೆನಿಸುವ ಸುಂದರ ಕ್ಷಣಗಳನ್ನು ದಯಪಾಲಿಸಿಸುತ್ತಿರುವ ವಾಚಕವೃಂದಕ್ಕೆ ನಾನು ಸದಾ ಋಣಿ.

ಮೊದಲಿನಂತೆ ಈ ಎರಡು ಹೊತ್ತಿಗೆಗಳನ್ನು ಪ್ರಕಟಿಸುತ್ತಿರುವ 'ಅಭಿನವ'ದ ಉತ್ಸಾಹಿ ಮಿತ್ರ ರವಿಕುಮಾರ್ ಅವರ ಒತ್ತಾಸೆ-ಒತ್ತಾಯ, ಮಿಗಿಲಾಗಿ ಸ್ನೇಹಮಯ ಅಂತಃಕರಣ ಯಾವ ಲೇಖಕನಿಗೆ ಸಂತೋಷ ತರುವಂತಹ ವಿಷಯ. ಅಭಿನವ ಬಳಗದ ಪಿ. ಚಂದ್ರಿಕಾ, ಕೃಷ್ಣ ಚೆಂಗಡಿ ಅವರಿಗೂ ನನ್ನ ವಂದನೆಗಳು.

ಅಕ್ಷರ ಜೋಡಣೆಯಲ್ಲಿ ನೆರವಾದ ಸಂತೋಷ್, ವಿಜಯಶ್ರೀ, ರೇಣುಕಾ ಹಾಗೂ ಪುಟವಿನ್ಯಾಸದಲ್ಲಿ ಅತ್ಯಂತ ಪ್ರೀತಿಯಿಂದ ಸಕಾಲದಲ್ಲಿ ಸಹಕರಿಸಿದ ಸಿ. ಸುಬ್ರಹ್ಮಣ್ಯ ಅವರಿಗೂ, ರಕ್ಷಾಪುಟ ವಿನ್ಯಾಸದಲ್ಲಿ ನೆರವಿತ್ತ ಕಲಾವಿದ ಪ್ರಕಾಶ್ ಚಿಕ್ಕಪಾಳ್ಯ ಅವರಿಗೂ ನನ್ನ ಧನ್ಯವಾದಗಳು.

ಕೆ. ಸಿ. ಶಿವಪ್ಪ

ಮೈಸೂರು
ಡಿಸೆಂಬರ್ 20, 2019

ನುಡಿವ ಬೆಡಗು

'ಕನಕ ಸೂಜಿಯ ಚುಚ್ಚಿ ನೋವಾಗದೆನ್ನುವುದೆ?' 'ಬಂಗಾರ ತಟ್ಟೆಯಲಿ ಉಣಬಹುದು. ಬಂಗಾರದ ಅಕ್ಕಿಯನು ಉಣಬಹುದೆ?' ಮುಂತಾದ ಸಾಲುಗಳನ್ನು ಓದುವಾಗ ಶಿವಪ್ಪನವರಿಗೆ ಇರಬಹುದಾದ ವಚನಗಳ ಓದಿನ ವಿಸ್ತಾರವೂ, ಉಪನಿಷತ್ತು ಪುರಾಣಗಳ ಬಗೆಗಿನ ಮಮತೆಯೂ ಅರಿವಾಗುತ್ತದೆ. ಕಿರಿದರಲ್ಲಿ ಹಿರಿಯದನ್ನು ಕಾಣಬಹುದೆನ್ನುವ ವಿಚಾರಕ್ಕೆ ಇಲ್ಲಿಯ ಚೌಪದಿಗಳು ಸಾಕ್ಷಿ. ಇವುಗಳು ನಾಲ್ಕು ಸಾಲುಗಳಲ್ಲಿದ್ದರೂ, ಅವುಗಳ ಚಿಂತನೆ ನಾಲ್ಕು ಲೋಕಗಳನ್ನು ದಾಟುವಷ್ಟು ವಿಸ್ತಾರವಾಗಿರುವಂಥವು. ಕಾಲ-ದೇಶಗಳ ಪರಿವೆಯನ್ನು ಬಿಟ್ಟು ಮನೋಹೃದಯವನ್ನು, ಚಿದಾಕಾಶವನ್ನು, ಬೆಳಕಿನ ಲೋಕವನ್ನು ತೆರೆದು ತೋರಿಸುವಷ್ಟು ವಿಸ್ತಾರವಾಗಿವೆ. 'ಕಥೆ ಪಿರಿದಾದೊಡೆಂ' ಎಂಬ ಕವಿವಾಕ್ಯ ಇಲ್ಲಿ ನೆನಪಾಗುತ್ತದೆ. ಮರಳಿನ ಕಣದಲ್ಲಿ ವಿಶ್ವವನ್ನು ನೋಡಬಹುದು ಎಂಬ ಋಷಿವಾಕ್ಯ ಅರಿವಿಗೆ ಬರುತ್ತದೆ.

ಇಂಥ ಕವಿತೆಗಳನ್ನು ಪ್ರಕಟಿಸಲು ಅನುಮತಿ ನೀಡಿದ ಕೆ.ಸಿ. ಶಿವಪ್ಪನವರಿಗೆ, ಸಹಾಯ ಮಾಡಿದ ನೀಲಗಿರಿ ತಳವಾರ, ಚೇತನ್ ರಾಂ, ರಾಜ ಅವರಿಗೆ ಮತ್ತು ಪುಟವಿನ್ಯಾಸ ಮಾಡಿದ ಸುಬ್ರಹ್ಮಣ್ಯ, ಮುದ್ರಿಸಿದ ಲಕ್ಷ್ಮೀ ಮುದ್ರಣಾಲಯದ ಮಂಜು ಮತ್ತು ಸಿಬ್ಬಂದಿ ವರ್ಗದವರಿಗೆ ಧನ್ಯವಾದಗಳು.

ನ. ರವಿಕುಮಾರ
ಅಭಿನವದ ಪರವಾಗಿ

ಪರಿವಿಡಿ



1

ತಿರುಳ ತಿಳುವುದೆ ಅರಿವು

ಜ್ಞಾನಕ್ಕೆ ಸಮನಾದುದಾವುದಿದೆ ಜಗದಲ್ಲಿ?
ಬಾಳಿನುನ್ನತಿಗೆ ಅರಿವು ಬೇಕೇ ಬೇಕು.
ಬಳಸದೀ ತಿಳುವಳಿಕೆ ಕಡಲತೀರದ ದೋಣಿ;
ನೀರಲಿದ್ದರೆ ನಾವೆ – ಮುದ್ದುರಾಮ

ಹಿರಿಗಡಲ ದಾಟಲಿಕೆ ಕಿರುದೋಣಿಯನ್ನೇರಿ
ಹೊರಟ ಅಂಬಿಗನ ಮನ ಎಂತಿಹುದೊ ಏನೊ!
ಗುರಿ ಏನೊ ಅತಿ ಹಿರಿದು; ಸಂಕಲ್ಪವೂ ಹಿರಿದು;
ಅರಿವು–ನಡೆ ಸಂಗಾತಿ – ಮುದ್ದುರಾಮ 1

ಬಳಸಿ ಮತಿಸಟ್ಟುಗವ, ಭಾವಪಾಕವನೆರೆದು
ಬಡಿಸು ಸಂತರ್ಪಣೆಯ ಹಸಿದ ತಟ್ಟೆಯಲಿ.
ಪ್ರೀತಿ ತಂಪೆಲ್ಲೆಲ್ಲೊ ಇದೆ ಅಲ್ಲಿ ಸಜ್ಜನಿಕೆ;
ಅರಿವು ಜೀವನದೀಕ್ಷೆ – ಮುದ್ದುರಾಮ 2

ಬರೆದು ಮಲಗಿದರೇನು? ಮಲಗಿ ಬರೆದರೆ ಏನು?
ರಚನೆ ಹೇಗಿದೆ ಎನುವ ವಿಷಯ ಪ್ರಸ್ತುತವೊ!
ಸತ್ವ ಕಂಪಿಗೆ ಹೊರತು ಹೂ ಬಿರಿದ ಪರಿಗಲ್ಲ;
ತಿರುಳ ತಿಳಿವುದೆ ಅರಿವು – ಮುದ್ದುರಾಮ 3

ಬಿರಿವ ಹೂವಿನಲಿಲ್ಲ ಹೆಜ್ಜೆ ಸಪ್ಪಳ ಇನಿತು;
ಸುರಿವ ಮಳೆಯಲ್ಲಿಲ್ಲ ಕೊಡುವ ಅಭಿಮಾನ.
ಉರಿವ ಅಹಮಿಕೆ ಏಕೆ ಈ ಮನುಜನೆದೆಯಲ್ಲಿ?
ಅರಿವಿನಲಿ ಮೌನವಿದೆ – ಮುದ್ದುರಾಮ 4

ಧನದಾಸೆ ಹಿಂಗಿದಡೆ, ಬಯಕೆ ಸುಖ ಕಂದಿದಡೆ
ರೋಷಸೆಲೆ ಬತ್ತಿದಡೆ ಆತ ನಿಸ್ಸೀಮ.
'ತನ್ನ ಕೆರಹಿನ ಧ್ಯಾನ' ತರದು ದೇವನ ಜ್ಞಾನ;
ಅರಿವು ಸುಖದಾಧಾರ – ಮುದ್ದುರಾಮ 5

ನಿನ್ನ ನೀ ಅರಿಯಲಿಕೆ ವಿದ್ಯೆ ಸಾಧನ ಅಷ್ಟೆ;
ಮಾಹಿತಿಯ ಗಾಳಿಯಲಿ ತೂರಿಹೋಗದಿರು.
ಸಮಚಿತ್ತ ದೊರಕದಿರೆ ಆ ವಿದ್ಯೆ ಕಲಿತೇನು?
ಅರಿವು ಒಳವಿಜ್ಞಾನ – ಮುದ್ದುರಾಮ 6

ಚಪಲತೆಯ ಕರಣಗಳ ವ್ಯಸನ ನೂರೆಂಟಿರಲು
ಹಾತೊರೆಯುವುದೆ ಮನಸು ಪರಮ ಉನ್ನತಿಗೆ?
ಇಂದ್ರಿಯಕೆ ಆಳಾದ ಜೀವಕೆಲ್ಲಿದೆ ಬೆಳಕು?
ಆಚಾರವೇ ತಿಳಿವು – ಮುದ್ದುರಾಮ 7

ಉಣಬಹುದು ನಗುತ ನೀ ಬಂಗಾರ ತಟ್ಟೆಯಲಿ;
ಉಣಲು ಸಾಧ್ಯವೆ ನಿನಗೆ ಬಂಗಾರವನ್ನ?
ಸಿರಿಯೊಂದು ಸಾಧನವೊ! ಅದೆ ಬಾಳ ಗುರಿಯಲ್ಲ.
ಬರಲಿ ಬದುಕಿಗೆ ಅರಿವು – ಮುದ್ದುರಾಮ 8

ನೀ ಇಂದ್ರ ನೀ ಚಂದ್ರ ಎನುತ ತರುವರು ಮಾಲೆ;
ಈ ಮಾಲೆ ನಿನಗಲ್ಲ, ನಿನ್ನ ಗದ್ದುಗೆಗೆ.
ಹೊಗಳಿಕೆಗೆ ಕಿವುಡಾಗು, ತೆಗಳಿಕೆಗೆ ಕುರುಡಾಗು;
ಅರಿ ಗಟ್ಟಿ ಪುರುಳ ನೀ – ಮುದ್ದುರಾಮ 9

ಒಂದೊಂದು ವೃತ್ತಿಗಿದೆ ಅದರದರ ಕುಶಲಕಲೆ;
ಮೈಗೂಡಿಸಿಕೊ ಇಂಥ ಚಾತುರ್ಯ ಪರಿಯ.
ಕಲಿಯಲಿಕೆ ಪರಿಸರದಿ ಇದೆ ಎಷ್ಟೊ ನಾವೀನ್ಯ;
ಹಿರಿದು ಅರಿವು ದಿಗಂತ – ಮುದ್ದುರಾಮ 10

ಒಂಟಿಕಾಲಿನ ಬಲದಿ ನಿಂತ ಮಾತ್ರಕ್ಕೇನು
ಕೊಕ್ಕರೆಗೆ ದೊರಕುವುದೆ ತೇಜ ತಪಸಿನದು?
ದಕ್ಕುವುದೆ ಜಿಪುಣನಿಗೆ ಕರ್ಣದಾನದ ಗರಿಮೆ?
ಇದೆ ಹಿರಿಮೆ ಮಾಟದಲಿ – ಮುದ್ದುರಾಮ 11

ನೀ ಬರೆವ ಕಾಗದದ ಬಗೆ ಯಾವುದೇ ಇರಲಿ;
ಏನ ನೀ ಬರೆದಿರುವೆ ಅದುವೆ ಅತಿ ಮುಖ್ಯ.
ಮಣ್ಣ ಮಡಕೆಯಲಿಟ್ಟ ಹಾಲು ರುಚಿಸದೆ ಇಹುದೆ?
ತಿರುಳಿಗಷ್ಟೇ ಗರಿಮೆ – ಮುದ್ದುರಾಮ 12

ಅಚ್ಚುಕಟ್ಟೆಲ್ಲಿದೆಯೊ ಅಲ್ಲಿಲ್ಲ ಇಕ್ಕಟ್ಟು;
ಚಿತ್ರ ಸೌಂದರ್ಯಕ್ಕೆ ಇರಲಿ ಚೌಕಟ್ಟು.
ಒಟ್ಟಂದ ಗಿಟ್ಟಲಿಕೆ ಬೇಕು ಸರಿ ನುಡಿಗಟ್ಟು;
ಗರಿಮೆ ಗೆಲುವಿನ ಗುಟ್ಟು – ಮುದ್ದುರಾಮ 13

ಹೆಪ್ಪನೆರೆದರೆ ಬಳಿಕ ನೊರೆಹಾಲು ಮೊಸರಾಗಿ,
ನವನೀತ ತಾನಾಗಿ, ಘೃತವಾಗದಿಹುದೆ?
ಸತ್ವ ಇದ್ದಲ್ಲೆಲ್ಲ ಇಹುದು ಫಲದಾಯಾಮ;
ಘನತೆ ರೂಪವೆ ಹೀಗೆ! – ಮುದ್ದುರಾಮ 14

ಇಹವಿರಲಿ ಪರವಿರಲಿ, ಮರೆವಿರಲಿ ಅರಿವಿರಲಿ
ಘನತೆ ಒಡಮೂಡದಿರೆ ಪರಮ ಕುರುಹೆಲ್ಲಿ?
ಘನರೂಪದಲ್ಲೊಂದು ಸರಳತೆಯ ರೇಖೆಯಿದೆ;
ಕಂಗೆಡಿಸದಿರು ಇರವ – ಮುದ್ದುರಾಮ 15

ಇರುವುದನು ಕಡೆಗಣಿಸಿ, ಮತ್ತೊಂದ ಹಪಹಪಿಸಿ
ಇರದುದರತ್ತ ತುಡಿತ ನಮ್ಮದು ಏಕೊ!
ಕರಗಿ ಹೋಗುವ ಮರಳ ಗೋಪುರವೆ ಗುರಿ ನಮದು;
ಅರಿವು ಮರೀಚಿಕೆಯೇಂ? – ಮುದ್ದುರಾಮ 16

ಮಣ್ಣ ಮುಟ್ಟದೆ ಗಡಿಗೆ ಮಾಡುವನೆ ಕುಂಬಾರ?
ತೊಗಲಿರದೆ ಮಾಡುವನೆ ತಿದಿಯ ಚಮ್ಮಾರ?
ಕಿಡಿಯನೊತ್ತದೆ ಅಲಗ ಮಾಡುವನೆ ಕಮ್ಮಾರ?
ಕ್ರಿಯೆಯೆ ಜೀವನಸಾರ – ಮುದ್ದುರಾಮ 17

ವಿಪರೀತ ಲೋಲುಪ್ತಿ ರಕ್ತಿ ಕಡೆ ಎಳೆವಂತೆ
ತರುವುದತಿ ಸಂತಾಪ ಅನಗತ್ಯ ಉಕ್ತಿ.
ಮನ ನಿಯಂತ್ರಣಕೊಂದು ಬೇಕು ಅತಿಶಯ ಯುಕ್ತಿ;
ತನ್ನರಿವೆ ಶಕ್ತಿಯೋ! – ಮುದ್ದುರಾಮ 18

ನಿನ್ನ ನೀ ರಕ್ಷಿಸಿಕೊ ನಡೆದೊಳಿತ ಹಾದಿಯಲಿ;
ಜಾಣತನ ತಪ್ಪಲ್ಲ, ಕುಹಕತನ ಕೇಡು.
ಹುಲಿ ಮುಂದೆ ತಾನಾಗಿ ನಿಂತು ತುತ್ತಾಗದಿರು;
ಸುವಿವೇಕವೇ ಅರಿವು – ಮುದ್ದುರಾಮ 19

ಅರಿವು ನಯನವ ಮುಚ್ಚಿ ಬದುಕು ಕಪ್ಪೆನ್ನುವುದೆ?
ಹಳೆಯ ಬುತ್ತಿಯ ಬಿಚ್ಚಿ ತಂಗಳೆನ್ನುವುದೆ?
ಕನಕ ಸೂಜಿಯ ಚುಚ್ಚಿ ನೋವಾಗದೆನ್ನುವುದೆ?
ವಾಲು ಎಚ್ಚರ ನಡೆಗೆ – ಮುದ್ದುರಾಮ 20

ತುರುಕದಿರು ಚಿತ್ತದಲಿ ತಿರುಳಿರದ ಸಂಗತಿಯ;
ಕಸದ ಬುಟ್ಟಿಯ ತೆರದಿ ಬಳಸದಿರು ಮನವ.
ಎಷ್ಟೆ ಮಾಹಿತಿಮೊತ್ತ ತೆರೆಯದರಿವಿನ ಕದವ;
ಅರಿ ವಿವೇಕದ ಪರಿಯ – ಮುದ್ದುರಾಮ 21

ಸರಿಯಾವುದೆನುವುದರ ಪ್ರಜ್ಞೆಯಿದೆ ನಮ್ಮಲ್ಲಿ;
ಸುಳಿಯ ಬಿಡದಿರು ಒಳಗೆ ಪಾಪದೋಷಗಳ.
ಮಣೆಹಾಕಿದರೆ ಇವಕೆ ನಿನ್ನ ನುಂಗದೆ ಬಿಡವು;
ಕಟ್ಟೆಚ್ಚರವೆ ಲೇಸು – ಮುದ್ದುರಾಮ 22

ಹುತ್ತದಲಿ ಮನೆ ಮಾಡಿ ಇದೆಯೊ ಇಲ್ಲವೊ ಹಾವು!
ಚೆಲ್ಲಾಟವಾಡುತ್ತ ಕೈ ಚಾಚುವೇಕೆ?
ವಿಷದ ಇರುವಿಕೆ ಅರಿತು ದೂರವಿರುವುದೆ ಲೇಸು;
ಒಳಿತು ಎಚ್ಚರದಿಂದ – ಮುದ್ದುರಾಮ 23

ಹುತ್ತಕ್ಕೆ ಕೈಕೊಟ್ಟು, ಹಾವು ಕಚ್ಚಿತು ಎನುತ
ಹಾರಾಡಿ ಬೊಬ್ಬಿಡುವ ರೀತಿ ಸರಿಯಲ್ಲ,
ಧುಮುಕಿ ಬಾವಿಯ ಒಳಗೆ ಸತ್ತೆನೆಂದರೆ ಹೇಗೆ?
ಎಚ್ಚರವೆ ನಿರ್ಣಯವೊ! – ಮುದ್ದುರಾಮ 24

ಬಿರುಗಾಳಿ ಬೀಸಿನಲಿ ಕೊಡೆಯ ತೆರೆಯುವುದೇಕೆ?
ಕಡಲಿನಬ್ಬರದಿ ದೋಣಿ ಇಳಿಸುವುದೇಕೆ?
ಚಡಪಡಿಕೆ ಜಾಲದಲಿ ಸಿಲುಕಿ ನರಳುವುದೇಕೆ?
ಎಚ್ಚರವೆ ಸುವಿವೇಕ – ಮುದ್ದುರಾಮ 25

ಚೆಂದ ಗೊಂಬೆಗೆ ಯಾರೆ ಜೀವ ತುಂಬಲುಬಹುದೆ?
ಆನೆಕಲ್ಲನು ಬಳಸಿ ಮನೆ ಕಟ್ಟಬಹುದೆ?
ಒಡೆದ ಮಡಕೆಯ ಬಳಸಿ ಅನ್ನ ಬೇಯಿಸಬಹುದೆ?
ಸಾಧ್ಯವಾಗದ್ದೆಷ್ಟೊ! – ಮುದ್ದುರಾಮ 26

ಹರಿವ ತೊರೆ ಜಲರಭಸ ತಡೆಯಬಲ್ಲೆಯ ನೀನು?
ಆಗಸದ ಸೆಳೆಮಿಂಚ ಸೆರೆಹಿಡಿಯುವೇನು?
ಕಡಲತೆರೆ ಸಪ್ಪಳವ ಅದುಮಬಲ್ಲೆಯ ತಾಕಿ?
ಸಿಗದು ಹಿಡಿತಕೆ ಎಷ್ಟೊ! – ಮುದ್ದುರಾಮ 27

ಎಲ್ಲಿ ಸಂದಿಗ್ಧತೆಯೊ ಅಲ್ಲಿದೆ ಕುರುಕ್ಷೇತ್ರ;
ತಿಳಿಮನದ ಸುಪ್ರಭೆಗೆ ಗೀತೆ ಚಂದ್ರಿಕೆಯೊ!
ಸಮಚಿತ್ತವರ್ಧನೆಗೆ ಅದುವೆ ಪ್ರಜ್ಞಾದೀಪ;
ಗಿರಿಧಾರಿವಾಣಿ ಅರಿ – ಮುದ್ದುರಾಮ 28

ಚಂದನದ ತುಂಡೊಂದ ಕೆತ್ತಿದರೆ ಅದು ಮೂರ್ತಿ;
ಹೂವ ಅದರಡಿಯಿಟ್ಟರದುವೆ ಅರ್ಪಣೆಯೊ!
ಕೌಶಲದ ಬಲದಿಂದ ಸೌಂದರ್ಯದಭಿಷೇಕ;
ಮತಿ ಶಕ್ತಿಸಂಚಾರ – ಮುದ್ದುರಾಮ 29

ಅಂದದ್ದು, ಕಂಡದ್ದು, ಚಿತ್ರಿಸಿದ ರೂಪಗಳು
ಬಿಂಬಿತವೊ ಅರೆಚಣದಿ ಜಗದ ಕೈಯಲ್ಲಿ!
ಎಂಥ ತಾಂತ್ರಿಕ ಜ್ಞಾನ! ಏನು ಮುನ್ನಡೆಯಯ್ಯ!
ಬೆರಗು ಜಂಗಮವಾಣಿ – ಮುದ್ದುರಾಮ 30

ಇಲ್ಲ ಅಂತರ್ಜಾಲ ಇಂದಿನೀ ಸವಲತ್ತು
ಸಂಪರ್ಕಸೌಕರ್ಯ ಶತಕಗಳ ಹಿಂದೆ.
ಆದರಂದಿತ್ತು ಏಕಾಗ್ರತೆಯ ಏಕಾಂತ;
ಬಗೆ ಬೇರೆ, ದನಿ ಭಿನ್ನ – ಮುದ್ದುರಾಮ 31

ಕೂಡಿ ಬಂದರೆ ಪ್ರಾಸ ವ್ಯಾಸನಾಗುವೆ ಏನು?
ಗಂಧರ್ವ ನೀನಲ್ಲ ಹಾಡಿದಷ್ಟಕ್ಕೆ.
ಗಗನದಲಿ ಓಡಾಡಿ ನಾ ಹಕ್ಕಿ ಎನ್ನದಿರು;
ಮಿತಿಯನರಿವುದೆ ಜಾಣ್ಮೆ – ಮುದ್ದುರಾಮ 32

ಮೊಗದಿ ಕಣ್ಣಿದೆ ಎಂದು ಹಿಂದೆ ನೋಡುವೆ ಎಂತು?
ಕರದಿ ಬಲೆಯಿದೆ ಎಂದು ಹುಲಿಯ ಪಿಡಿಯುವೆಯ?
ಬೊಗಸೆಯಲಿ ಕಡಲ ಇಡಿ ಜಲ ತುಂಬುವಾಸೆ ಬಿಡು;
ಮಿತಿ ಅರಿತರಿದೆ ಒಳಿತು – ಮುದ್ದುರಾಮ 33

ತನು ಹಗುರವಾಗುತ್ತ ಹಾರುತ್ತ ಮೇಲೇರಿ
ನಭದಿ ತಾನೊಂದು ತಾರೆಯಾಗುವ ಕನಸು.
ಈ ದೇಹ ಘನದಲ್ಲಿ ಲೀನವಾದರೆ ಗರಿಮೆ;
ಗುರಿಗೆ ತನು ಮಾಧ್ಯಮವೊ! – ಮುದ್ದುರಾಮ 34

ಕೆಂಡವನೆ ಸೋಂಕದಿರೆ ಒಲೆ ತಾನೆ ಉರಿಯುವುದೆ?
ಬೇಕು ಕಟ್ಟಿಗೆಗೊಂದು ಅಗ್ನಿ ಸಹವಾಸ.
ಬೇಯಿಸದ ಭಟ್ಟನಿಗೆ ಸಟ್ಟುಗದ ಹಂಗೇಕೆ?
ಪಾಕವೆಂದರೆ ಸಾರ – ಮುದ್ದುರಾಮ 35

ತಪ್ಪೆಂದು ತೋರಿದುದ ಸರಿಪಡಿಸುವುದೆ ಲೇಸು;
ತಿದ್ದದಿರೆ ಪಥ ಮರೆತ ಕಾಡು ಘನಘೋರ.
ತಪ್ಪೆಸಗುತಿರೆ ಮತ್ತೆ ತೀರ ದುಸ್ತರ ಬದುಕು;
ಅನುಭವವೆ ಹೆದ್ದಾರಿ – ಮುದ್ದುರಾಮ 36

ಅಂಕುಡೊಂಕನೆ ಕಂಡು ವಕ್ರವಾಗುವೆ ಏಕೆ?
ಮಿದುಳ ತಿರುಳನು ಬಳಸಿ ತೆರೆಯೊ ಒಳಗಣ್ಣ!
ಇಡಿಬಾಳನೊಪ್ಪದಿರೆ ನೀನು ಗಾಳದ ಮೀನು;
ಬುದ್ಧಿಯಿಂದಲೆ ಸಿದ್ಧಿ – ಮುದ್ದುರಾಮ 37

ಕನಸು ನನಸಾಗಲಿಕೆ ಬೇಕು ದೃಢನಿರ್ಧಾರ
ತನ್ನಿಚ್ಛೆಯಿಂದ ಮೊಗ್ಗು ಹೂವಾಗುವಂತೆ
ಚಾರಿತ್ರ್ಯನಿರ್ಮಾಣ ದೂರದೃಷ್ಟಿಯ ಫಲವೊ!
ಹೂವಾಗು ಹಣ್ಣಾಗು – ಮುದ್ದುರಾಮ 38

ಜನನ ಸಂಭ್ರಮ ಬಳಿಕ ಸಾವಿನಲಿ ಅವಸಾನ;
ನಡುವೆ ಈ ಜೀವಿತದ ಬತ್ತಲೆಯ ನೋಟ.
ಮುಡಿಗೆ ಮಲ್ಲಿಗೆ ಎಂತೊ ಅಂತೆ ಕಂಬನಿ ಕಣ್ಗೆ;
ಎಲ್ಲ ಬಲ್ಲವರಿಲ್ಲ! – ಮುದ್ದುರಾಮ 39

***

ಅಧ್ಯಯನಶೀಲತೆಗೆ ಮೀಸಲಿದ್ದರೆ ಬಾಲ್ಯ
ಬೆಳಗದಿರುವುದೆ ಬಾಳು ಮುಂಬರುವ ದಿನದಿ?
'ಚಿಕ್ಕಂದಿನ ವಿದ್ಯೆ ಪೊರಗು' ಎಂಬ ನುಡಿ ಸತ್ಯ;
ವಿದ್ಯೆ ಆಲಂಬನವೊ! – ಮುದ್ದುರಾಮ 40

ವಿದ್ಯೆಯಿಂದಲೆ ಉಕ್ತಿ, ವಿದ್ಯೆಯಿಂದಲೆ ಶಕ್ತಿ;
ತೆರೆದು ಅಕ್ಷರಧಾಮ ಕಲಿಸು ಸಂಸ್ಕೃತಿಯ.
ಸಭ್ಯತೆಯ ಜೀವನಕೆ ವಿದ್ಯೆಯೇ ಅಡಿಗಲ್ಲು;
ವಿದ್ಯೆಯೇ ಚೈತನ್ಯ – ಮುದ್ದುರಾಮ 41

ಅರಿವಿನಾಗರ ಒಂದು ಸಂಸ್ಕೃತಿಯ ತವರೂರು;
ವಿದ್ಯೆ ಒಡಗೂಡಿದರೆ ಇದೆ ಅಲ್ಲಿ ಕರುಣೆ.
ಕಲಿಕೆಯಲಿ ಜೀವಿತದ ಸಾರಸರ್ವಸ್ವವಿದೆ;
ಹಿರಿದು ಅಕ್ಷರಧಾಮ – ಮುದ್ದುರಾಮ 42

ಚಣಚಣದಿ ಗಳಿಸುತಿರೆ ಆಸ್ಥೆಯಲಿ ಅದು ವಿದ್ಯೆ;
ಕಣಕಣದಿ ಸಂಗ್ರಹಿಸಿದರದುವೆ ಸಂಪತ್ತು.
ಮಮತೆ ಅಹಮಿಕೆ ಜಳ್ಳ ತೂರಿದರೆ ಅದು ಅರಿವು;
ತನ್ನನರಿತರೆ ಮೋಕ್ಷ – ಮುದ್ದುರಾಮ 43

ಬೀಜದಿಂ ಸಸಿ ಎಂತೊ, ರುಚಿ ಅಂತೆ ಫಲದಿಂದ;
ವಿದ್ಯೆ ಅಕ್ಷರದಿಂದ, ಬಾಳು ಉಸಿರಿಂದ.
ಮೊಸರಿಂದ ನವನೀತ, ನಡೆಯಿಂದ ಉತ್ಥಾನ;
ಚೈತನ್ಯ ಅರಿವಿಂದ – ಮುದ್ದುರಾಮ 44

ಕಲಿತು ಸಂಗೀತವನು ಸಾಧನೆಯ ಬಿಟ್ಟರದು
ನೆಲದಲಿ ಬೈಚಿಟ್ಟು ಹಣವ ಮರೆತಂತೆ.
ಮುಚ್ಚಿದರೆ ಕದ ಕಿಟಕಿ ಬೆಳಕೆಲ್ಲಿ ಕೋಣೆಯಲಿ?
ಕಲಿಕೆ ಧ್ಯಾನದ ಫಲವೊ! – ಮುದ್ದುರಾಮ 45

ಗಾಳಿಗೋಪುರ ರಚಿಸಿ ಮಲಗಬಲ್ಲೆಯ ಅಲ್ಲಿ?
ನಡೆಸಬಲ್ಲೆಯ ರಚಿಸಿ ದೋಣಿ ತಿರೆ ಮೇಲೆ?
ಕಾಗದದ ಹೂ ರಚಿಸಿ ಪಡೆಯಬಲ್ಲೆಯ ಕಂಪ?
ಅರಿ ರಚನೆ ಕೌತುಕವ – ಮುದ್ದುರಾಮ 46

ಹೆಗಲ ಮೇಲಿನ ಚೀಲ, ವಾಗ್ಮಿತೆಯ ನಾಜೂಕು,
ನೂರು ಉದ್ಧೃತ ಮಾತು ತರದು ಶಾಸ್ತ್ರಿತನ.
ಬೇಕದಕೆ ವಿದ್ವತ್ತು ತಳಸ್ಪರ್ಶಿ ಅಧ್ಯಯನ;
ಶಾಸ್ತ್ರಮನನವೆ ತಿಳಿವು – ಮುದ್ದುರಾಮ 47

ಹೆಬ್ಬೆಟ್ಟನೊತ್ತುವುದೆ ಕಗ್ಗಂಟು ಉನ್ನತಿಗೆ;
ಕಲಿಯದಿರೆ ಅಕ್ಷರವ ಬರದೆ ಮುಗ್ಗಟ್ಟು?
ಓದುತಿರು ಹೊತ್ತಿಗೆಯ, ಕಲಿಯುತಿರು ಗಣಿತವನು;
ಸಾಕ್ಷರತೆ ಆದ್ಯತೆಯೊ! – ಮುದ್ದುರಾಮ 48

ಆಗ ಬಂದದ್ದೆಷ್ಟು? ಈಗ ಹೋದದ್ದೆಷ್ಟು?
ಇನ್ನು ಉಳಿದದ್ದೆಷ್ಟು? ಲೆಕ್ಕ ಸರಿಯಿರಲಿ.
ವರಮಾನ ವೆಚ್ಚದಲಿ ನಿಗವಿರಲಿ ಅನವರತ;
ಗಣಿತ ಅರಿತರೆ ಒಳಿತು – ಮುದ್ದುರಾಮ 49

ಒಲೆ ಮೇಲೆ ಹಂಡೆಯಲಿ ಕಾಯಿಸುತ್ತಿರೆ ನೀರ
ಬಳಸಿ ಅದ ನೀನು ಮೀಯುವುದು ಯಾವಾಗ?
ಬಲೆ ಬೀಸಿ ತೂಕಡಿಸೆ ಮೀನ ಹಿಡಿಯುವೆ ಹೇಗೆ?
ಕಲಿ ಬಳಕೆನ್ನೈಪುಣ್ಯ – ಮುದ್ದುರಾಮ 50

ಸೂರ್ಯೋದಯಕೆ ಮುಂಚೆ ಅರಳಿ ನಿಂತಿದೆ ಹೂವು
ಅರ್ಪಣೆಯ ಭಾವದಲಿ ಅವನ ಸ್ವಾಗತಕೆ.
ಸಾಕಿನ್ನು ಈ ನಿದ್ದೆ; ಎದ್ದೇಳು ನೀ ಬೇಗ;
ಅಣಿಯಾಗು ಪ್ರಾರ್ಥನೆಗೆ – ಮುದ್ದುರಾಮ 51

***

ಈಶಮಂದಿರದಲ್ಲಿ ಮಲಿನವೇ ಕಣ್‌ಬೆಳಕು?
ಶಿವಧ್ಯಾನ ನೆಲೆಯಲ್ಲಿ ಶಬ್ದ ಸೂತಕವೆ?
ಶರಣ ನುಡಿಗಡಣದಲಿ 'ಮಾತೆ ಜ್ಯೋತಿರ್ಲಿಂಗ';
ಅರಿವೆ ನಿಜಗುಣ ಶೀಲ – ಮುದ್ದುರಾಮ 52

ತುಟಿಯ ತೆರೆದರೆ ಸಂತ ಅದುವೆ ಭಾವತರಂಗ;
ಅದು ನಿಜದ ಸಿರಿಹೊನಲು, ಅದೆ ಬುದ್ಧವಾಣಿ.
ಸಮತೆ ಸರಳತೆಗದುವೆ ಚೆಲುಚಿತ್ರದಾವರಣ;
ಆ ಮಾತೆ ನಿಬ್ಬೆರಗು – ಮುದ್ದುರಾಮ 53

ಅತಿ ಹೆಚ್ಚು ಮಾತಿಂದ ತಪ್ಪಾಗುವಿಕೆ ಅಧಿಕ;
ಒಣಹರಟೆ ಇದ್ದಲ್ಲಿ ಕೂಡುವುದು ಕಷ್ಟ.
ಮಿತಗೊಳಿಸಿ ಸಂವಾದ ವಾಲು ಮೌನದ ಕಡೆಗೆ;
ಮಿತಮಾತು ಹಿತಧಾತು – ಮುದ್ದುರಾಮ 54

ಬಿಟ್ಟ ಬಾಣದ ತೆರದಿ ಒಮ್ಮೆ ಆಡಿದ ಮಾತು
ಏಕಮುಖ ಸಂಚಾರ ಬೀದಿನಡೆಯಂತೆ.
ತುಟಿ ಬಿಟ್ಟ ನುಡಿಯನ್ನು ಮರು ಹಿಂಪಡೆಯಲಾದೀತೆ?
ನುಡಿಸಂಯಮವೆ ಮೇಲ್ಮೆ – ಮುದ್ದುರಾಮ 55

ಅಂಬೊಂದು ನಾಟಿದರೆ ತೆಗೆದು ಬದುಕಲುಬಹುದು;
ಸರ್ಪ ಕಚ್ಚಿದರದನು ಗುಣಪಡಿಸಬಹುದು.
ಪಡೆದ ಸಾಲವನೆಲ್ಲ ಮತ್ತೆ ತೀರಿಸಬಹುದು;
ಹಿಂಪಡೆಯುವೆಯ ನುಡಿಯ? – ಮುದ್ದುರಾಮ 56

ಎಲ್ಲಿ ಯಾರೊಡನೆ ತಾ ಹೇಗೆ ಯಾವುದನೆಷ್ಟು
ನುಡಿಯಬಲ್ಲಾತನಿಗೆ ನೋವೆನುವುದಿಲ್ಲ.
ವಾದ ಹಿತಮಿತವಿದ್ದು ನಮ್ರತೆಗೆ ಒರಗಿರಲಿ;
ಮಾತು ಜೀವನಧಾತು – ಮುದ್ದುರಾಮ 57

ಹೇಳಿದುದನೇ ಮತ್ತೆ ತಿರುತಿರುಗಿ ಒದರುತ್ತ
ಶತ್ರುವಾಗುವೆ ಏಕೆ ಮಂದಿನೆಮ್ಮದಿಗೆ?
ಹದವರಿತ ಮಾತಿಂದ ಮಂಗಳದ ಮುನ್ನಡೆಯೊ!
ನುಡಿ ಕಡಿಮೆ, ಸುಖ ಅಧಿಕ – ಮುದ್ದುರಾಮ 58

ಅಡ್ಡದಾರಿಯ ಹಿಡಿದ ಅಬ್ಬರದ ಮಾತುಕತೆ
ನೀರಿರದ ನದಿಯಲ್ಲಿ ಮುಳುಗಿ ಮಿಂದಂತೆ.
ನುಡಿಗರ್ಥ ತುಂಬಿರಲಿ; ಬೇಡ ಬರಿ ಯಾಂತ್ರಿಕತೆ.
ಪದ ಬೊಂತೆ ಮಾಡದಿರು – ಮುದ್ದುರಾಮ 59

ತೂಕ ತಪ್ಪಿದ ಮಾತು, ಆಯ ತಪ್ಪಿದ ನಡಿಗೆ
ಕರೆದ ನೊರೆಹಾಲಿನಲಿ ಹುಳಿ ಹಿಂಡಿದಂತೆ.
ಮಾತಿನಲಿ ನಯವಿರಲಿ, ನಡಿಗೆಯಲಿ ಲಯವಿರಲಿ;
ನುಡಿಗೆ ನಡೆ ಬೆಲೆ ತರಲಿ – ಮುದ್ದುರಾಮ 60

ಇನಿತು ಎಚ್ಚರವಿರದೆ ಏನೇನೊ ಮಾತಾಡಿ
ಈಡಾಗದಿರು ನಗೆಗೆ ಜನರೆದುರಿನಲ್ಲಿ.
ತುಟಿ ಬಿಟ್ಟ ನುಡಿಯೊಂದು ಬಿಟ್ಟ ಬಾಣದ ಬಗೆಯೊ!
ನುಡಿಯದಿರು ಯೋಚಿಸದೆ – ಮುದ್ದುರಾಮ 61

ನುಡಿಯ ರಂಜಕರಿಂದ ಮಾತಿಗತಿ ಅಪಮೌಲ್ಯ
ಮಾಣಿಕ್ಯ ಗುಲಗಂಜಿಯಾದ ಪರಿಯಲ್ಲಿ.
ಹುಲ್ಲುಕಡ್ಡಿಯನೇಕೆ ಕೌಸ್ತುಭಕೆ ಹೋಲಿಪರೊ!
ನುಡಿಯಲೆಚ್ಚರವಿರಲಿ – ಮುದ್ದುರಾಮ 62

ಯಾರೊ ತಮ್ಮನಿಸಿಕೆಯ ಮುಂದಿಡುತಲಿರುವಾಗ
ನಡುವೆ ತಲೆಹಾಕುವುದು ಸಭ್ಯತನವಲ್ಲ.
ಸರದಿ ಬಂದಾಗಷ್ಟೆ ಮಾತಾಡುವುದು ಲೇಸು;
ಮಧ್ಯೆ ಬಾಯ್ತೆರೆಯದಿರು – ಮುದ್ದುರಾಮ 63

ಮನಕೆ ಒಪ್ಪದ ವಿಷಯ ವಿಷಮತೆಯ ತಂದಾಗ
ದುಡುಕಿ ಮಾತಾಡಿದರೆ ಕಷ್ಟ ನೂರಾರು.
ಶಾಂತವಿರದಿರೆ ಚಿತ್ತ ಆಪತ್ತು ನುಗ್ಗುವುದೊ!
ನುಡಿ ನಿಯಂತ್ರಣ ಮಿಗಿಲು – ಮುದ್ದುರಾಮ 64

ಈ ಜಗದ ಆಚೆಯಲಿ ಏನೆ ಜರುಗಲಿ ವಿಷಯ
ಈಚೆ ಜಗ ತಿಳಿವುದದ ನಿಮಿಷಾರ್ಧದಲ್ಲಿ.
ಏನು ಮಾಹಿತಿ ಜ್ಞಾನ! ಏನದರ ವಿಸ್ತಾರ!
ಪುಟ್ಟ ಹಳ್ಳಿಯೊ ವಿಶ್ವ! – ಮುದ್ದುರಾಮ 65

***

ಮಾಗದಿರೆ ಅದು ಹಣ್ಣೆ? ರಸ ತಂದರದು ಫಲವೊ!
ಹುಳಿ ಸಿಹಿಯ ಮಾರ್ಪಾಡು ಈ ಜಗದ ಚೋದ್ಯ!
ಅನುಭವದ ನವ ಪಲುಕು ಕಾಲನಾದದ ಬೆರಗು!
ಹೊಸಹೊಸತು ಜೀವಲಯ! – ಮುದ್ದುರಾಮ 66

ಅನುಭವದ ನವನೀತ ಅರಿವಿನುರಿಯಲಿ ಕಾದು
ತಿಳಿದುಪ್ಪವಾದಾಗ ಅದುವೆ ಅನುಭಾವ.
ಚಾರು ಚಿಂತನ ಬೆರಗು ಅಂತರಂಗದ ಬೆಳಗು;
ಅನುಭಾವ ಎದೆದೀಪ್ತಿ – ಮುದ್ದುರಾಮ 67

ತೋರಿಕೆಯ ಸೋಗನ್ನೆ ಶಿವಧ್ಯಾನವೆನ್ನುವುದೆ?
ಲೀನತೆಯ ಉತ್ತುಂಗ ಶಿಖರ ಅನುಭಾವ.
ಬೀದಿಸರಕಿನ ಜೊತೆಗೆ ಮಾಣಿಕದ ಹೋಲಿಕೆಯೆ?
ಎಣಿಕೆ, ಬಿಡುಬಿಡು, ಸಲ್ಲ! – ಮುದ್ದುರಾಮ 68

ರವಿಗಿಲ್ಲ ಮುಳುಗುದಯ; ಇನ್ನು ಹಗಲಿರುಳೆಲ್ಲಿ?
ಎಚ್ಚೆತ್ತ ಚಿತ್ತದಲಿ ನಲಿವುನೋವಿದೆಯೆ?
ವಿಭಜಿಸುವ ಭರದಲ್ಲಿ ಒಳದನಿಯ ಕುರುಹಿಲ್ಲ;
ಒಮ್ಮನಸೆ ಅನುಭೂತಿ – ಮುದ್ದುರಾಮ 69

ತನು ದೂರವಾಗಲಿಕೆ ಬೇಕು ಜ್ಯೋತಿಯ ನಂಟು;
ಭವ ನಾಸ್ತಿಯಾಗಲಿಕೆ ಬೇಕು ಅನುಭಾವ.
ಮಾಯೆ ಕಡೆಗಾಣಲಿಕೆ ಬೇಕು ಅರಿವಿನ ವಚನ;
ಸನ್ಮತಿಯೆ ಗುರುತನವೊ! – ಮುದ್ದುರಾಮ 70

ನನದೆನುವ ನಾನತ್ವ, ಅಹಮಿಕೆಯ ಅತಿರೇಕ
ಎಲ್ಲೆ ಮೀರಿದರಂದೆ ಪತನ ಪ್ರಾರಂಭ.
ದಾಟಿ ಲಕ್ಷ್ಮಣರೇಖೆ ಕೊರಗನಪ್ಪುವುದೇಕೆ?
ಅರಿವು ದಿವ್ಯತೆದೀಪ – ಮುದ್ದುರಾಮ 71

ನನದೆನುವ ಪರೆ ಹರಿದು ಮನಸು ತಿಳಿಯಾದಾಗ
ಮಿಂಚುವುದು ಮಹದರಿವು; ಅದು ಭಾವತ್ಯಾಗ.
ಬಣ್ಣಗೆಡುವುದು ಎಲ್ಲ ವಸ್ತು ಏಕಾಏಕಿ;
ಜ್ಞಾನಸಂಚಯ ಮಿಗಿಲು – ಮುದ್ದುರಾಮ 72

ಸೊಟ್ಟಗಾದರೆ ದೃಷ್ಟಿ ವಿಷಮವಾಗದೆ ಸೃಷ್ಟಿ?
ನಮಗೆ ನಷ್ಟ ಅಪಾರ ಕಣ್ಣುರಿತದಿಂದ.
ಚೆಲುವಿರಲಿ ಒಳನೋಟ ಸೌಂದರ್ಯ ಸ್ಪಂದನೆಗೆ;
ನಯನ ನೋಟದ ನಲಿವು – ಮುದ್ದುರಾಮ 73

ಸಡಲಿದರೆ ನಿರ್ಬಂಧ ಸಾರಸುಖ ಸ್ವಾರಸ್ಯ;
ಕೂಡಿದರೆ ಪರಮಾರ್ಥ ಕೈವಲ್ಯದೃಷ್ಟಿ.
ಮಿಂಚಿದರೆ ಪರತತ್ವ, ಮಾಸಿದರೆ ನಾನತ್ವ;
ಮೂಡಿ ಒಲಿದರೆ ಚಿತ್ರ – ಮುದ್ದುರಾಮ 74

ಪರಮಾರ್ಥ ಸಾಧನೆಗೆ ಮೌನದೊಳಮನೆ ಗಮನ;
ಲೋಕ ಸಾಂಪ್ರತಿಗಾಗಿ ಕಣ್ಣುಮುಚ್ಚಾಲೆ.
ಕಡಲ ತೀರದಿ ನಿಂತು ನೋಡುತಿರೆ ಸೌಂದರ್ಯ;
ಊರ್ಧ್ವಮುಖಿಯಾಗಂತೆ – ಮುದ್ದುರಾಮ 75

ರೂಪರುಚಿ ಗಂಧ ದನಿ ಆವರಿಸಿ ಅಡಿಗಡಿಗೆ
ಅಂತರಂಗದಲಿಲ್ಲ ಹರುಷ ಸದ್ಭಾವ.
ರಂಜನೆಯ ವೇಷದಲಿ ಸಹಜತೆಯ ಸುಳಿವಿಲ್ಲ;
ಪರಮಾರ್ಥ ಬರಿಗನಸೆ? – ಮುದ್ದುರಾಮ 76

ಹೊರಗು ನೋಟಕೆ ಕಾಣ್ವ ಬರಿಹಣತೆಯೇ ಬೆಳಕೆ?
ನೋಡು ನೋಡಲ್ಲಿ; ಈ ಮಾತು ನಿಜವಲ್ಲ.
ಬತ್ತಿ ಜೊತೆಜೊತೆ ಎಣ್ಣೆ ಇಲ್ಲದಿರೆ ಬೆಳಕೆಲ್ಲಿ?
ಮತಿಪ್ರತೀಕವೆ ದೀಪ! – ಮುದ್ದುರಾಮ 77

ಹಣತೆಯಿದೆ, ತೈಲವಿದೆ, ಬತ್ತಿಯಿದೆ, ಕಡ್ಡಿಯಿದೆ;
ಕಡ್ಡಿ ಗೀರದಿರೆ ದೀಪ ಹಚ್ಚುವುದೆಂತು?
ಒಂದರಿಂದಿನ್ನೊಂದು ದೀಪಗಳ ಸರಮಾಲೆ;
ನಿತ್ಯ ತುಂತುರು ದೀಪ್ತಿ – ಮುದ್ದುರಾಮ 78

ಬೆಳಕತ್ತ ಮೊಗಮಾಡಿ ಧೀಶಕ್ತಿ ಬೇಡದಿರೆ
ಚೈತನ್ಯವೆಲ್ಲಿಹುದೊ ತಮದ ದೇಹದಲಿ?
ಭಯದ ಕಂದಕ ದಾಟಿ ನಿಂತರಿದೆ ಸಾಫಲ್ಯ;
ಸತ್ವಪುಂಜವೊ ಜ್ಯೋತಿ! – ಮುದ್ದುರಾಮ 79

ಆಸೆ ಆಮಿಷದಿಂದ ತಾಮಸದ ಆವರಣ;
ನಿಜಪಥವ ಅರಿತವರಿಗಾವ ಭಯವಿಲ್ಲ.
ಶುದ್ಧತೆಯ ಬದಿಯಲ್ಲಿ ನಿಶ್ಚಿಂತ ಹರುಷವಿದೆ;
ಲೇಸು ಬೆಳಕಿನ ಹಾದಿ – ಮುದ್ದುರಾಮ 80

ಕಾಯಕಲ್ಲದೆ ಬೇನೆ ಆತ್ಮನಾವರಿಸುವುದೆ?
ರೋಗವಲ್ಲದೆ ಮೈಗೆ ಮನಕಿದೆಯೆ ನೋವು?
ಅಹಮಿಕೆಯ ರಾಹಿತ್ಯ ಬೆಳಕಿನೆಡೆ ಸಂಚಾರ;
ತಮದಂತ್ಯವೇ ಜ್ಯೋತಿ! – ಮುದ್ದುರಾಮ 81

ವಿಷಯ ಹಿಂಗದೆ ಬರಿದೆ ತಲೆ ಬೋಳಾದರೇನು?
ಅಡ್ಡನಡೆಯಿದ್ದು ತೊಟ್ಟರೇಂ ಪಾದುಕೆಯ?
ಪಕ್ವವಾಗದೆ ಮನಸು ತೊಟ್ಟರೇಂ ಕಾಷಾಯ?
ಸುಲಭವೇ ಸಾಧುತನ? – ಮುದ್ದುರಾಮ 82

ಹೊದ್ದು ಕಾಷಾಯವನು ಸಂತನಾಗುವೆ ಏನು?
ಬೇಕದಕೆ ಚಿತ್ತದಲಿ ಬೆತ್ತಲೆಯ ಭಾವ.
ನಿರ್ಲಿಪ್ತ ನೆಲೆಯಿಂದ ಜಂಗಮತೆ ಪಲ್ಲವಿತ;
ತನ್ನರಿವೆ ಈಶತ್ವ – ಮುದ್ದುರಾಮ 83

ತಿಳಿವಿಗತಿ ಹೊರತಾದ ಬರಿ ಬರಡು ಮಾತಿಂದ
ದಿವ್ಯ ನಿಶ್ಚಯವೆಲ್ಲಿ? ಸುಖದ ಪಥವೆಲ್ಲಿ?
ಚಿನ್ಮಯತೆ ಹೊದೆಯಲಿಕೆ ಬೇಕು ನಿಜಸಂಧಾನ;
ಇದೆ ಎಲ್ಲ ನಮ್ಮೊಳಗೆ – ಮುದ್ದುರಾಮ 84

ತಂಗಾಳಿ ತಂಪಿರಲು ತಳಮಳದ ತಪವೇಕೆ?
ತಳಿರು ತುಂತರು ಇರಲು ತನಿಗೆಂಡವೇಕೆ?
ತಂಗದಿರ ತಣಿಪಿರಲು ತಮ್ಮಟೆಯ ತತಿಯೇಕೆ?
ತಾದಾತ್ಮ್ಯ ತಾರಿಕೆಯೊ! – ಮುದ್ದುರಾಮ 85

ಒಳಮನದ ಪರಿಧಿಯಲಿ ಸ್ವಾತಂತ್ರ್ಯ ಗರಿಗೆದರಿ
ನಿರ್ಬಂಧವಿಲ್ಲದಿರೆ ಅದುವೆ ದಿವ್ಯತೆಯೊ!
ವ್ಯಾಮೋಹ ಎಂದಿರದೊ ಪ್ರಜ್ಞೆ ಬೆಳಗುವುದಂದು;
ಬಯಕೆಬಿಡುಗಡೆ ಬೆಳಕು – ಮುದ್ದುರಾಮ 86

ಮನನ ಎದೆಹೊಕ್ಕಾಗ ಚಿತ್ರ ಬದಲಾಗುತ್ತ
ಏಕತ್ರವಾಗುವುದು ಪರಮಪದದೃಷ್ಟಿ.
ನಡೆವ ನವ ತಿರುವಿನಲಿ ಚಿಂತನೆಯ ನೋಟವಿದೆ;
ಶರಣೆನ್ನು ಐಕ್ಯತೆಗೆ – ಮುದ್ದುರಾಮ 87

ಈ ಅರಿವುಸಾಗರದ ಮುಂದೆ ನೀ ಕಿರುಹನಿಯೊ!
ಜ್ಞಾನಗಿರಿ ತಪ್ಪಲಲಿ ನೀ ಹುಲ್ಲಿನೆಸಳೊ!
ಬಾನತ್ತ ಮೊಗಮಾಡಿ ನಿಂತರಿದೆ ಘನಜ್ಯೋತಿ;
ನೀ ತಿರೆಯ ಕಿರಣದಲೆ – ಮುದ್ದುರಾಮ 88

ಗುರಿ ಮೊದಲು ಅಸ್ಪಷ್ಟ; ಬಳಿಕ ನಿಶ್ಚಿತ ರೂಪ.
ಎಷ್ಟೊಂದು ಅರಸಾಟ ಇದರ ಬೆನ್ನೇರಿ!
ಸಾಧನೆಯ ಶಿಖರದಲಿ ನಿಂತಾಗ ಬರಿ ಶೂನ್ಯ;
ಜಗವೇಕೊ ತಬ್ಬಿಬ್ಬು! – ಮುದ್ದುರಾಮ 89

ಲತೆಹೂಗೆ ಸೀಮೆಯಿದೆ; ತಳದ ಬೇರಿಗೆ ಇದೆಯೆ?
ಸಾಗರಕೆ ಎಲ್ಲೆಯಿದೆ; ಹರಿವ ತೊರೆಗಿದೆಯೆ?
ತನುವಿಗಿದೆ ದನಿಮೇರೆ; ಬಯಲ ಗಾಳಿಗೆ ಇದೆಯೆ?
ಪರಿಧಿ ಶೂನ್ಯಕೆ ಇದೆಯೆ? – ಮುದ್ದುರಾಮ 90

ಪರಿಧಿಗೊಂದಿರಬೇಕು ತನ್ನದೇ ನಿಜಕೇಂದ್ರ;
ಕೇಂದ್ರ ಸುತ್ತಿಹುದು ನೂರು ವೃತ್ತಾಕಾರ.
ಎಷ್ಟಿರಲಿ ಆಕಾರ ಕೇಂದ್ರದೊಡನಿರಬೇಕು;
ಕೇಂದ್ರ ಮರೆತರೆ ಶೂನ್ಯ – ಮುದ್ದುರಾಮ 91

ಸೊನ್ನೆ ಕಲ್ಪನೆ ಎಂಥ ಘನಮನದ ದರ್ಶನವೊ!
ಎಂಥ ಸೀಮಾತೀತ ಅಪರಿಮಿತ ನಿಲುವೊ!
ಈ ಅನಂತತೆ ಭಾವ ಅತಿ ಪಾರದರ್ಶಕವೊ!
ಪ್ರತಿಭೆ ಮಹಿಮಾನ್ವಿತವೊ! – ಮುದ್ದುರಾಮ 92

ವಸ್ತುವಿನಲಿನ್ನೊಂದು ಭ್ರಾಂತಿಯಲಿ ಕಂಡಾಗ
ಅದುವೆ ಆರೋಪ; ಅದವಿದ್ಯೆ, ಅಜ್ಞಾನ.
ಆಗು ಶಬ್ದಾತೀತ, ರೂಪಸ್ಪರ್ಶಾತೀತ;
ಬ್ರಹ್ಮವೆಂದರೆ ಶೂನ್ಯ – ಮುದ್ದುರಾಮ 93

ಇತ್ತ ಬರುವುದಕಾವ ಕ್ಲುಪ್ತ ಕಾರಣವಿದೆಯೆ?
ಇಲ್ಲಿ ಸುಳಿಯುವ ಮುನ್ನ ಎಲ್ಲಿದ್ದೆ ನೀನು?
ಯಾವ ರೂಪದಿ ಮತ್ತೆ ಮಾಯವಾಗುವೆ ಅತ್ತ?
ಆತ್ಮನರಿವು ಅದೆಂತು? – ಮುದ್ದುರಾಮ 94

ಹೊರಗ ನೋಡುವ ತೆರದಿ ಕಾಣಬಾರದೆ ಒಳಗ?
ರಕ್ತಿ ಜೊತೆಗೆ ವಿರಕ್ತಿ ಕೂಡಿದರೆ ತತ್ವ
ನೊಗದೆರಡು ಎತ್ತಂತೆ ಇರಲಿ ಇಹಪರ ಮಿಲನ;
ಯೋಗ ಎಂದರೆ ಇಷ್ಟೆ! – ಮುದ್ದುರಾಮ 95

ನಾ ಬೇರೆ ನೀ ಬೇರೆ ಎಂದಾಗ ಇಮ್ಮನವೊ!
ನಾನು ನೀನಾದಾಗ ಎದೆ ಬಡಿತವಿಲ್ಲ.
ಸರಿತೆ ಕಡಲಾದಾಗ ಭಿನ್ನತೆಯ ಜಲವೆಲ್ಲಿ?
ಮಿಲನ ಬಯಲಿನ ಯಾನ – ಮುದ್ದುರಾಮ 96

ಯಾರೊ ಬಂದರು ಮೆಲ್ಲ; ಏಕೆ ಬಂದರೋ ಕಾಣೆ.
ತೆರಳುತಿಹರೆತ್ತಲೋ ಮುನ್ನ ಬಂದವರು.
ಏಕಿಹರು ಜನರಿಲ್ಲಿ? ಇವರ ಪಾತ್ರಗಳೇನು?
ನಾನಾರು? ಯಾರು ನಾ? – ಮುದ್ದುರಾಮ 97

ಮಣ್ಣಿನಲೊ ಬೆಂಕಿಯಲೊ ಗಾಳಿಜಲ ಬಯಲಲ್ಲೊ
ಯಾವ ರೂಪದಲೇನೊ! ಅದರ ಅರಿವಿಲ್ಲ.
ಕೂಡುವುದು ಈ ಜೀವ ನಿನ್ನ ಇನ್ನೊಂದು ದಿನ;
ಅಂದು ನಾನೇ ನೀನು! – ಮುದ್ದುರಾಮ 98

ಊರ ದಾರಿಯ ತೋರಿ ದೂರ ತಿಳಿಸಲಿಕಾಗಿ
ಇದೆ ಒಂದು ಕೈಗಂಬ ಪಯಣ ನೆಲೆಯಾಗಿ.
ಮರೆತು ಎತ್ತಲೊ ಚಲಿಸಿ ದೂರದಿರು ದಿಕ್ಸೂಚಿ;
ಅರಿ ಭವ್ಯ ಸ್ತಂಭಗಳ – ಮುದ್ದುರಾಮ 99

***

ನಿನಗೆ ತೋಚಿದ್ದಷ್ಟೆ ಸತ್ಯವೆಂದೇನಲ್ಲ;
ಒಂದೊಂದು ಆಯಾಮಕೊಂದು ದೃಷ್ಟಿಯಿದೆ.
ವಿಷಮತೆಯ ನೋಟದಲಿ ನಿಜದ ದರ್ಶನವೆಲ್ಲಿ?
ಅರಿ ನಿತ್ಯ ವಿಸ್ತಾರ – ಮುದ್ದುರಾಮ 100

ಸಿದ್ಧಿಗೊಂದಿದೆ ಕೊಂಡಿ; ಅದುವೆ ಇಚ್ಛಾಶಕ್ತಿ.
ಕ್ರಿಯೆ ರೂಪ ತಾಳಲಿಕೆ ಬೇಕು ಧೀಶಕ್ತಿ.
ಕಾರ್ಯಗತಿಗಿದೆ ಎಲ್ಲೊ ಸಂಕಲ್ಪ ಸಂಬಂಧ;
ಋಜತೆ ಸ್ಫುರಿಸಲಿ ಮನದಿ – ಮುದ್ದುರಾಮ 101

ಬಣ್ಣ ಎಷ್ಟಿದ್ದೇನು? ಒಂದೆ ಕಿರಣದ ಕಾಂತಿ.
ನಾಮ ನೂರಿದ್ದೇನು? ಒಬ್ಬನೇ ದೈವ.
ದಾರಿ ಎಷ್ಟೇ ಇರಲಿ; ಒಂದೆ ಗಮ್ಯಸ್ಥಾನ.
ಸತ್ಯ ಒಂದೇ ಜಗದಿ! – ಮುದ್ದುರಾಮ 102

ಊಟ ಆಟ ವಿಹಾರ ಇದ್ದದ್ದೆ ದಿನದಿನದಿ;
ಸತ್ಯ ಶೋಧನೆಯಿಂದ ಬಾಳ ಪರಮಾರ್ಥ.
ಯಾವ ತೇಪೆಯ ಕುಂಚ ಚಿತ್ರಿಸಿದೆ ಪೂರ್ಣತೆಯ?
ದಿಟದರಿವೆ ಜಗಯಾತ್ರೆ – ಮುದ್ದುರಾಮ 103

ಸತ್ಯಶೋಧನೆಗಾಗಿ ಈ ಜ್ಞಾನ ವಿಜ್ಞಾನ.
ಧರ್ಮ ಮೊಗಮಾಡಿದರೆ ದಿವ್ಯತೆಯ ಕಡೆಗೆ
ವಿಜ್ಞಾನ ಒರಳುವುದು ತಥ್ಯಾಂಶ ನೆಲೆಯತ್ತ.
ಮುಖ್ಯ ಮತಿಉತ್ಥಾನ – ಮುದ್ದುರಾಮ 104

ಕೇಳಿ ಬರುತಿದೆ ಕಿವಿಗೆ ಬಾಂದಳದ ಪಿಸುಮಾತು;
ಅಲ್ಲಿ ನಿಟ್ಟುಸಿರಿಲ್ಲ, ದಿಗಿಲೆಂಬುದಿಲ್ಲ.
ಇಬ್ಬನಿಯ ಚಿತ್ರದಲಿ ಇದೆ ಕಿರಣ, ಇದೆ ಬೆರಗು;
ಪುಳಕ ಸತ್ಯವಿಲಾಸ – ಮುದ್ದುರಾಮ 105

ಹೂ ಮತಾಪನು ಇಂದು ಹಚ್ಚಿ ನಲಿಯುವ ಮುನ್ನ
ನೆನೆ ಅದರ ಹಿಂದಿರುವ ಬೆವರ ಬಿಂದುಗಳ.
ಬೆಳಕಸಿರಿ ಎಂದರದು ಬರಿ ಸದ್ದು ಮೋಜಲ್ಲ;
ದಿಟದ ಅರಿವೇ ದೀಪ! – ಮುದ್ದುರಾಮ 106

ಯಾವ ನಿರ್ಣಯದಲ್ಲಿ ಎಷ್ಟಧಿಕವೋ ಕರುಣೆ
ಅಷ್ಟಷ್ಟು ಘನತರವೊ ಅಂಥ ತೀರ್ಮಾನ.
ಬರಿ ತರ್ಕ ವ್ಯಾಕರಣ ತರದಪೇಕ್ಷಿತ ಸುಖವ;
ಮಾನವೀಯತೆ ಮೊದಲು – ಮುದ್ದುರಾಮ 107

ಅರಿತನಿತ್ಯತೆ ಏಕೆ ಗುಡಿಗಟ್ಟಿ ಬಳಲುವರೊ
ಒಲೆಬೂದಿಯಲಿ ಶುನಕ ಬಿದ್ದೊರಳ್ವಂತೆ?
ಅರಿವು ಕಣ್ದೆರೆಯದಿರೆ ಯಾವುದೆಷ್ಟಿದ್ದೇನು?
ಅರಿ ಜಗದ ದುಃಖಕತೆ – ಮುದ್ದುರಾಮ 108

ಸೋಲುಗೆಲುವನು ಕುರಿತು, ಸಮಯಪಾಲನೆ ಕುರಿತು
ವ್ಯಕ್ತಿ ವಿಕಸನ ಕುರಿತು ಎಷ್ಟು ಕೈಪಿಡಿಯೊ!
ತನ್ನ ತಾ ಅರಿಯಲಿಕೆ ದಿಕ್ಸೂಚಿ ಏಕಿಲ್ಲ?
ಆತ್ಮಪರಿಚಯ ಕಷ್ಟ – ಮುದ್ದುರಾಮ 109

ಸತ್ತ ಹೆಣ ಮೇಲೆದ್ದು ನಿಜಕತೆಯ ತಿಳಿಸಿದರೆ
ದನಿಯನೆತ್ತುವ ಮುನ್ನ ಕೊಲ್ಲುವರು ಮತ್ತೆ.
ಸತ್ಯಸಂಗತಿ ಎಷ್ಟೊ ಕಡಲಾಳದಲಿ ಲೀನ;
ಆತ್ಮಶೋಧನೆ ಸೊನ್ನೆ – ಮುದ್ದುರಾಮ 110

ವಿಷಯಕೇಂದ್ರವ ಬಿಟ್ಟು, ಪರಿಧಿಯಲಿ ಸುತ್ತಾಡಿ
ಏಕೆ ಕಚ್ಚಾಡುವರೊ? ಬರಿದೆ ಬೊಗಳುವರೊ?
ಮೌನಬೇರನು ಕೊರೆದು ನುಡಿಲತೆಯ ಹೊಗಳುವರೊ!
ಬುದ್ಧಿಗೇನಾಯ್ತಿಲ್ಲಿ? – ಮುದ್ದುರಾಮ 111

ಆತ್ಮಸಾಕ್ಷಿಯ ಮುಂದೆ ಇಲ್ಲ ಯಾವುದೆ ಸೋಗು;
ತಪ್ಪನೊಪ್ಪುವ ಗುಣವೆ ದಿವ್ಯ ಲಕ್ಷಣವೊ!
ಕೇಡು ಹಿಂದೋಡುವುದು ಕಂಡು ಒಳಿತಿನ ಮೊಗವ;
ಮಿಗಿಲು ಪಶ್ಚಾತ್ತಾಪ – ಮುದ್ದುರಾಮ 112

ಮುಗಿಲ ಮಾರಿಯ ಹಾಗೆ ಸದ್ದು ಮಳೆ ಬೀಳುತಿರೆ
ಮನೆ ಮನದಲೆಲ್ಲಿದೆಯೊ ನೀರವತೆ ಶಾಂತಿ?
ಗದ್ದಲವ ಹೊರಹಾಕಿ ಸ್ವಾಗತಿಸು ನಿಶ್ಯಬ್ದ;
ಮೌನಧಾರಣೆ ಮಿಗಿಲು – ಮುದ್ದುರಾಮ 113

ಆಚಾರ ಅಡಿಗಲ್ಲು; ಜಾರಿದರೆ ಪಾತಾಳ.
ನೂರು ಪ್ರಾಯಶ್ಚಿತ್ತ ತರದು ಹಿರಿಯತನ.
ಕಪಟತನ ಸುಳಿದಲ್ಲಿ ಪಾವಿತ್ರ್ಯ ಪೊಳ್ಳುತನ;
ಜಾಲಿಮರ ಚಂದನವೆ? – ಮುದ್ದುರಾಮ 114

ಹೊಸತು ನಿಜಸಂಗತಿಯ ಮುಖಾಮುಖಿಯಲಿ ನೀ
ಸರಿಪಡಿಸಿಕೋ ನಿನ್ನ ತಪ್ಪು ನಿರ್ಧಾರ.
ಹಾಲು ಬಿಳುಪೆಂದೆನಲು ಈಗ ನಾಚಿಕೆ ಏಕೆ?
ದ್ವಿಮುಖವಲ್ಲವೊ ಸತ್ಯ! – ಮುದ್ದುರಾಮ 115

ಎಂದೊ ಮುಂದೊಂದು ದಿನ ಮಾಯೆತೆರೆ ಕೆಳಬಿದ್ದು
ಸತ್ಯದರ್ಶನದಿಂದ ಉದಿಸುವುದು ಅರಿವು.
ತನ್ನ ತಾ ಅರಿಯಲಿಕೆ ಅದೆ ದಾರಿ, ತೋರ್ಗಂಬ;
ಗುರುವೆಂದರೀ ಅರಿವು – ಮುದ್ದುರಾಮ 116

ಸಂಭ್ರಮದ ಸಾಮೋದ ಯಾರಿಗೆಷ್ಟೋ ಅಷ್ಟೆ;
ಬೊಗಸೆಯಷ್ಟೇ ನೀರು ಕಡಿಮೆ ಹೆಚ್ಚಿಲ್ಲ.
ಚಂದನದ ತನಿಕಂಪು ಅವರವರ ಸೌಭಾಗ್ಯ;
ಎಲ್ಲ ನಿಶ್ಚಿತ ಮೊದಲೆ – ಮುದ್ದುರಾಮ 117

ಯಾವ ಹಕ್ಕಿ ಅದೆಂತು ಬಳಿ ಬಂದು ಕೂರುವುದೊ!
ಯಾವ ವರದಿಂದ ಪದ ಕವನವಾಗುವುದೊ!
ಯಾವ ಮೂರುತಿಗೆಂದು ಕರ್ಪೂರದಾರತಿಯೊ!
ಯಾವ ಮಳೆಹನಿ ಎಲ್ಲೊ! – ಮುದ್ದುರಾಮ 118

ಎಲ್ಲಿ ವಿಚಾರದ ದೀಕ್ಷೆ ಅಲ್ಲಿ ತೃಪ್ತಿಯ ಬೆಳಕು;
ಆ ಮಹಾಮನೆಯ ಮರೆಹೊಕ್ಕು ಬದುಕು ನೀ.
ನಡೆಯದಿರೆ ನೀ ಕುಂಟ; ಅರಿಯದಿರೆ ನೀ ಹೆಳವ.
ಅಂಧನಾಗುವೆ ಏಕೆ? – ಮುದ್ದುರಾಮ 119

ಇಷ್ಟೊಂದು ಮತಿಯಿದ್ದು, ಶಂಕರನ ಅರಿವಿದ್ದು
ಮನುಜ ಜಾರುವನೇಕೊ ಇಳಿಜಾರಿನಲ್ಲಿ!
ಮರವಿನಲಿ ಬದುಕಿದೆಯೆ? ಬದುಕೆ ಮರವಿನ ನೆರಳೆ?
ಬೆಳಕಾಗದೇ ಬಾಳು? – ಮುದ್ದುರಾಮ 120

ಸಾಧುವಾಗಿದ್ದಾಗ ನಿನ್ನ ಇಚ್ಛಾಶಕ್ತಿ
ನನಸಾಗಲಿಕೆ ಅದಕೆ ಇದೆ ದೈವಕರುಣೆ.
ಭಾವಶುದ್ಧತೆಯಿಂದ ಹಸಿರಾಗದೇ ಕನಸು?
ಒಲಿಯೊ ಚಿಂತನೆ ಮಡಿಗೆ! – ಮುದ್ದುರಾಮ 121

ಬೆರಳ ತೋರಿದರಲ್ಲಿ ಕ್ಷೇಮಸೂಚನೆಯಿರಲಿ;
ಪರಿಹಾರದಂಕಿತದ ಮುದ್ರೆ ಅಲ್ಲಿರಲಿ.
ಬರಿ ತಪ್ಪು ಬಯ್ದಾಟ ಅಲ್ಲಿ ಸುಳಿಯದೆ ಇರಲಿ;
ಅರಿವು ಮನೆಮಾಡಿರಲಿ – ಮುದ್ದುರಾಮ 122

ಕೇಳಿ ಭಗವದ್ಗೀತೆ ಪಾರ್ಥ ಸಂಯಮಿಯಾದ;
ತೋರಿ ಕೊಡುಗೆಯ ಗರಿಮೆ ಶಿಬಿ ಧನ್ಯನಾದ.
ನೀಡಿ ವಸ್ತ್ರವ ಸ್ತ್ರೀಗೆ ಶಾಮ ಶ್ರೀನಿಧಿಯಾದ;
ಸ್ತುತಿಸಿ ಹನುಮನೆ ಆದ – ಮುದ್ದುರಾಮ 123

ಇಲ್ಲಿ ಕಂಡದ್ದಿಷ್ಟು; ಕೇಳಿದುದು ಒಂದಿಷ್ಟು;
ನೆನೆದು ತಿಳಿದದ್ದಿಷ್ಟು; ಭಾವಿಸಿದುದಿಷ್ಟು.
ಕಾಣದೆಯೆ ಕೇಳದೆಯೆ ನೆನೆಯದಿರುವುದದೆಷ್ಟೊ!
ಅಲ್ಲಿ ಇನ್ನೇನಿದೆಯೊ! – ಮುದ್ದುರಾಮ 124

ಬಾಳಿನಲಿ ಈ ಮತಿಗೆ ನಿಲುಕದಿರುವುದದೆಷ್ಟೊ!
ನಿಲುಕಿದಷ್ಟರಲಿ ರೂಪತಳೆದದ್ದೆಷ್ಟೊ!
ಆ ರೂಪ ಅರಿವಿನಲಿ ಅರಗಿ ನಿಂತದ್ದೆಷ್ಟೊ!
ದೊರೆತಷ್ಟೆ ನಮದಷ್ಟೆ – ಮುದ್ದುರಾಮ 125

ಅಂಟಿದಂಟದ ತೆರದ ಕಮಲದೆಲೆಯಂತೆಮ್ಮ
ಬಾಳಿರಲಿ ಎಂಬಾಸೆ ನಿಜವಾಗದೇಕೊ!
ಮುಂದೊಂದು ಜನುಮದಲಿ ಆದರಾದೀತೇನೊ!
ನೆನೆಯೋಣ ದೈವವನು – ಮುದ್ದುರಾಮ 126

□



2
ದೈವಕೃಪೆಗೆಣೆಯುಂಟೆ?

ಅಂಬರಕೆ ಬೋದಿಗೆಯ ಕೊಟ್ಟು ನಿಲಿಸಿದರಾರೊ!
ಸಕಲ ತರುಲತೆಗೆ ಬೇರನಿತ್ತವರಾರೊ!
ಹಾಲಿನಲಿ ಮೊಸರು ಬೆಣ್ಣೆಯ ಇರಿಸಿದವರಾರೊ!
ನಿತ್ಯ ಸತ್ಯವದಾರೊ! – ಮುದ್ದುರಾಮ

ದಾರಿ ತೋರುವವನವನು ನೀ ಅಲೆದು ಕುಸಿದಾಗ;
ಕುಳ್ಳಿರಿಸಿ ತೆಪ್ಪದಲಿ ಒಯ್ಯುವನು ಅತ್ತ.
ನಿಗಮಗೋಚರ ಮಹಿಮ ಜ್ಯೋತಿಚಂದ್ರಿಕೆ ಅವನೆ!
ದೇವ ಜಗದಾಧಾರ – ಮುದ್ದುರಾಮ 127

ಯಾರ ದನಿಯಲಿ ಹೇಗೆ ಜೇನ ತುಂಬುವನವನೊ!
ಯಾವ ಹೂವಲಿ ಹೇಗೆ ಚೆಲುವ ತೂರುವನೊ!
ಯಾರ ಮನದಲಿ ಹೇಗೆ ಕಲ್ಪನೆಯ ಮೂಡಿಪನೊ!
ಕುಶಲ ಕೋವಿದ ದೇವ – ಮುದ್ದುರಾಮ 128

ನೀ ಕುರುಡನಾದಾಗ ಯಾರೊ ಕೈಹಿಡಿಯುವರೊ!
ಮೂಗನಾದಾಗ ಸನ್ನೆ ಮಾಡುವರಾರೊ!
ನೀ ಕಿವುಡನಾದಾಗ ಯಾರೊ ಬಳಿ ನಿಲ್ಲುವರೊ!
ದೇವ ದುರ್ಬಲಪ್ರೇಮಿ – ಮುದ್ದುರಾಮ 129

ನಿಷ್ಠೆ ನಂಬಿಕೆಯಲ್ಲಿ ಕೊರತೆ ಇನಿತಿಲ್ಲದಿರೆ
ನಮ್ಮ ಹುಯ್ಯಲ ಕೇಳಿ ದಾರಿ ತೋರುವನೊ!
ಮನ ಲೀನವಾದಲ್ಲಿ ಕಾಯುವನು ಬರಸೆಳೆದು;
ಶಿವ ಭಕುತಿಸಂಪ್ರೀತ – ಮುದ್ದುರಾಮ 130

ಇಲ್ಲೊಂದು ಚೆಂಬೆಳಕು, ಅಲ್ಲೊಂದು ಘನತತ್ವ!
ಆನಂದ ಸಂಸ್ಥಿತಿಯ ಉಪಮಿಸುವುದೆಂತು?
ಅದುವೆ ಭಾಸ್ಕರ 'ಕಿರಣ ಅಗ್ರ ಪಟಲದ ಬೆಳಗು'!
ದೇವ ಭಾವಾತೀತ – ಮುದ್ದುರಾಮ 131

ಹಿರಿದಾದ ಈ ವಸುಧೆ ಒಡೆಯ ನೀನೇನಲ್ಲ;
ಜಗದ ಗುತ್ತಿಗೆಯ ಪಡೆದು ಬಂದವನಲ್ಲ.
ಕತ್ತಲೆಯ ಗರ್ಭದಿಂದೆಂತು ಉದಿಸಿತು ಬೆಳಕು!
ದೇವ ನಿರ್ಮಲ ದೀಪ – ಮುದ್ದುರಾಮ 132

ತೋರುತ್ತ ವಿಸ್ತಾರ ಇವನಗೋಚರನೊ!
ಒಣಬೀಜದಿಂದೆಂಥ ಹೆಮ್ಮರವ ತೋರುವನೊ!
ಅಭಯಕರ ಘನಮಹಿಮ ಪರಮಪದ ಅಗಣಿತನೊ!
ದೇವ ಈ ಜಗಕರ್ತ! – ಮುದ್ದುರಾಮ 133

ಭಾವ ಬದಲಾದಂತೆ ರೂಪ ಪಡೆವುದು ರಚನೆ;
ಆ ರಚನೆ ಅತಿ ರಮ್ಯ ಸ್ಫೂರ್ತಿ ದೆಸೆಯಿಂದ.
ಸ್ಫೂರ್ತಿ ಒಲಿಯುವುದೆಮಗೆ ದೈವಾನುಗ್ರಹದಿಂದ;
ದೈವ ಪರಮಾರಾಧ್ಯ – ಮುದ್ದುರಾಮ 134

ಜಗವ ರಕ್ಷಿಪ ದೇವ ಅರಿತಿಹನು ಸೂಕ್ಷ್ಮವನು;
ಅಗಜೆ ರಮಣನ ಸೃಷ್ಟಿ ವಿಸ್ಮಯಾತೀತ.
ಖಗಮಿಗಕೆ ಮನುಕುಲಕೆ ಉಸಿರಿತ್ತು ಪೊರೆಯುವನೊ!
ಭಗವಂತ ಅಪ್ರತಿಮ – ಮುದ್ದುರಾಮ 135

ಎಳೆಯುದುರಿ ಮತ್ತಲ್ಲಿ ತಳಿರು ಸುಳಿಯುವುದೆಂತು?
ಹಳತು ಮರೆಯಾಗಿ ಹೊಸತು ಉದಿಸುವುದೆಂತು?
ಹೊತ್ತಾರೆ ಬಣ್ಣದಲಿ ಸಂಜೆ ಮಾರ್ಪಾಡೆಂತು?
ಭಗವಂತ ನಿರ್ಲಿಪ್ತ – ಮುದ್ದುರಾಮ 136

ಅವನಿಚ್ಛೆ ಏನಿದೆಯೊ ಅಂತೆ ಆಡುವನವನು;
ತೊಟ್ಟಿಲನು ತೂಗುವನು, ಮಸಣಕೊಯ್ಯುವನು.
ತೋರುತ್ತ ಬಹುಚಿತ್ರ ನಗಿಸುವನು, ಅಳಿಸುವನು;
ಸೂತ್ರಧಾರನೊ ದೇವ! – ಮುದ್ದುರಾಮ 137

ಒಡವೆ ವಸ್ತುವನೆಲ್ಲ ಒತ್ತಯಿಡಬಹುದಯ್ಯ!
ಭಕುತಿಭಾವವ ಹೇಗೆ ಗಿರವಿ ಇಡಬಲ್ಲೆ?
ಆತ್ಮಶಕ್ತಿಯ ಮುಂದೆ ಯಾವ ನಿಧಿ ನಿಂತೀತು?
ನಿತ್ಯ ಬಲ್ಲಿದ ದೇವ – ಮುದ್ದುರಾಮ 138

ಕೆರೆಯಲ್ಲಿ ಎಷ್ಟು ಸಲ ಮುಳುಮುಳುಗಿ ಎದ್ದರೇಂ?
ಕಡಲ ಮೀನನ್ನ ಶಿವಭಕ್ತನೆನಬಹುದೆ?
ಆಸೆ ಆಮಿಷ ರೋಷ ವಿಷಮರಹಿತನೊ ಭಕ್ತ!
ದೇವನರಿದವ ಕುಲಜ – ಮುದ್ದುರಾಮ 139

ನುಡಿರಂಜಕರ ನೋಡಿ ನಗದಿರುವನೇ ದೇವ?
ಭಕ್ತಿಪಥವರಿಯದಿರೆ ಒಲಿಯುವನೆ ದೇವ?
ಮದದಾನೆ ಏರಿದವರತ್ತ ಸುಳಿವನೆ ದೇವ?
ಶರಣಬಾಂಧವ ದೇವ – ಮುದ್ದುರಾಮ 140

ಶಬರಿ ಪ್ರೀತಿಯ ಪರಿಗೆ ರಾಮದರ್ಶನಭಾಗ್ಯ;
ನರಸಿಂಹ ಪ್ರತ್ಯಕ್ಷ ಪ್ರಹ್ಲಾದಮೊರೆಗೆ.
ಕೇಳಿ ದ್ರೌಪದಿ ಅಳಲ ಸತತ ಅಂಬರಕೊಡುಗೆ;
ದೀನಜನಬಂಧು ಹರಿ – ಮುದ್ದುರಾಮ 141

ಭಕುತಿಜಲದಲಿ ಮಿಂದು ನಂಬಿದವರನು ದೇವ
ಇಂಬಿಟ್ಟುಕೊಳ್ಳುವನೊ ಕಮಲದೆದೆಯಲ್ಲಿ!
ಮೆಲ್ಲಮೆಲ್ಲನೆ ತನ್ನ ಮನದೆರೆದು ತೋರುವನೊ!
ಹಿರಿದೊ ಪ್ರಭುಕಾರುಣ್ಯ! – ಮುದ್ದುರಾಮ 142

ಹರಿ ಮುಂದೆ ನೀ ನಿಂತು ತೋಡಿಕೋ ಸಂಕಟವ;
ಬಿನ್ನೈಸಿ ಬೇಗುದಿಯ ಬೇಡು ಸೆರಗೊಡ್ಡಿ.
ಸುರಿಸಿ ಕಂಬನಿಧಾರೆ ಪಾದತಳದಲಿ ಒರಗು;
ವರದದಾತನೊ ದೇವ! – ಮುದ್ದುರಾಮ 143

ಹುಸಿ ಪೂಜೆಯಿಂದಾರು ಸತ್ಯ ಬೆಳಗಿದರಯ್ಯ?
ನುಡಿಗಡಣದಿಂದಾರು ದಿಟ ಕಂಡರಯ್ಯ?
ಕಿರಿದು ಮನದಿಂದಾರು ಮಹತಿ ಗಳಿಸಿದರಯ್ಯ?
ನೀನೆ ತವನಿಧಿ ಅಯ್ಯ! – ಮುದ್ದುರಾಮ 144

ನೆಲದ ಮರೆ ಕನಕ ನೀ, ಮುಗಿಲಮರೆ ಸೆಳೆಮಿಂಚು;
ತೆನೆಯ ರಸರುಚಿ ನೀನು, ನನೆಕಂಪೊ ನೀನು!
ನೀ ನಿರಾಕಾರ, ನೀ ಚೈತನ್ಯ ಪರುಷಮಣಿ;
ಜಗದೊಡೆಯ ನೀ ಈಶ – ಮುದ್ದುರಾಮ 145

ಸ್ವಾತಿ ಮುತ್ತಾಗಲಿಕೆ ನೀನೆರೆವೆ ಕರುಣೆಹನಿ;
ತೃಷೆ ತಣಿಸಲಿಕೆ ನೀನೆ ತರುವೆ ಜಲಧಾರೆ.
ರಚಿತ ಚಿತ್ರಕೆ ನಿಜದಿ ನೀ ಅನಾಮಿಕ ಕುಂಚ;
ಗುರುವೆ ನೀ ಅವಿನಾಶಿ! – ಮುದ್ದುರಾಮ 146

ಬೆತ್ತಲೆಯ ಜನರಲ್ಲಿ ಬಟ್ಟೆಯನು ಬೇಡುವುದೆ?
ತಿರುಕನೆದುರಲಿ ನಿಂತು ದೇಹಿ ಎನ್ನುವುದೆ?
ಬೇಡುವೊಡೆ ಬೇಡು ಆ ಪರಮ ಕರುಣಾಕರನ;
ಕೊಡುವ ಒಡೆಯನೊ ದೇವ! – ಮುದ್ದುರಾಮ 147

***

ಹಿಡಿದ ಸಟ್ಟುಗ ಭೀಮ; ಗೆಜ್ಜೆ ಕಟ್ಟಿದ ಪಾರ್ಥ.
ಮಾರುವೇಷದಿ ನಿಂತ ಬಾಗಿ ಧರ್ಮಸುತ.
ಗೋವಳಿಗರಂತಾದರೊ ನಕುಲ ಸಹದೇವ.
ಕೃಷ್ಣಲೀಲೆಯೆ ಲೀಲೆ! – ಮುದ್ದುರಾಮ 148

ಜಂಜಾಟ ಬೀದಿಯಲಿ ಮುಗ್ಗರಿಸಿ ನಿಂತಾಗ
ಬೆಳಗಿ ಅಂತರ್ಜ್ಯೋತಿ ದಾರಿ ತೋರುವುದು.
ಮರಹು ತಾ ಹಿಂದಾಗಿ ಮುಂದಾಗುವುದು ಅರಿವು;
ದೈವಚಾಲನೆ ಕಾಲ – ಮುದ್ದುರಾಮ 149

ಬರುವ ಕಾಲಕೆ ಬಂದು ನಿಲ್ಲುವುದು ಎದುರಲ್ಲಿ;
ಯಾವ ಸಂಶಯವಿಲ್ಲ ಈ ನಿಲುವಿನಲ್ಲಿ.
ಹರಿದು ಬೆಳಕಿನ ಕಿರಣ ಕತ್ತಲೆನುವುದೆ ಇಲ್ಲ;
ಲೀಲಾವಿಲಾಸ ತಿಳಿ – ಮುದ್ದುರಾಮ 150

ಬೋಳುಮರ ಚಿಗುರುವುದು, ಹೂ ಹೊತ್ತು ನಲಿಯುವುದು;
ಬರಿದಾದ ಎದೆಯಲ್ಲಿ ಪ್ರೀತಿ ಕೊನರುವುದು.
ಮುನಿದೆರಡು ಜೀವದಲಿ ಒಲವು ಕವಲೊಡೆಯುವುದು;
ಮುಗುಳುನಗೆ ಅವನ ದಯೆ – ಮುದ್ದುರಾಮ 151

ಅವನೊಲುಮೆ ಮಳೆ ಸುರಿಯೆ ಬಾಳಕೆರೆ ಸುಂದರವೊ!
ದೈವ ಮುನಿದರೆ ಆಗ ಭಾವ ಅತಿ ಬರಡೊ!
ಕೃಪೆ ಅವನದಿರೆ ನಮಗೆ ಬಾಳು ಸೊಗಸಿನ ಬೀಡೊ!
ಕರುಣೆ ದೇವನ ಕಣ್ಣೊ! – ಮುದ್ದುರಾಮ 152

ಮನುಜಮನದಲ್ಲೆಂತು ಸಂಕಲ್ಪ ಮೊಳೆಯುವುದೊ!
ಮೀರಿ ಸಂದಿಗ್ಧತೆಯ ಅರಳಿ ನಿಲ್ಲುವುದೊ!
ಫಲಭರಿತ ತರುವಂತೆ ಸವಿರುಚಿಯ ನೀಡುವುದೊ!
ಅಸಮಾನ್ಯ ದೈವಕೃಪೆ – ಮುದ್ದುರಾಮ 153

ಬಾನಾಗಿ ಬೆಳಕಾಗಿ, ಹೂವಾಗಿ ಕಂಪಾಗಿ
ಕಡಲಾಗಿ ಅಲೆಯಾಗಿ ದೇವನಿಹನಿಲ್ಲಿ.
ಯಾವ ರೂಪದಿ ಎಂತು ಬರುವನೋ ಕಣ್ಮುಂದೆ!
ಬೆರಗು ಅಮರತೆ ಸತ್ವ – ಮುದ್ದುರಾಮ 154

ನಿನ್ನ ಪಾರಾಯಣದ ಕೃತಿ ಯಾವುದೇ ಇರಲಿ
ಪರಮ ನಂಬಿಕೆಯೊಂದೆ ಘನಸತ್ಯವಿಲ್ಲಿ.
ಕಣ್ಣಪ್ಪ ಕಣ್ಣಲ್ಲಿ ಕಲ್ಲೆ ಪೂಜಾವಸ್ತು;
ದೇವನಿಹನೆಲ್ಲೆಲ್ಲು – ಮುದ್ದುರಾಮ 155

ಗುಡಿಸಿಲಿನ ಹಣತೆಗಿಂತಧಿಕ ಬೆಳಕನ್ನೇನು
ನೀಡಿ ಪ್ರಜ್ವಲಿಸುವುದೆ ಅರಮನೆಯ ಸೊಡರು?
ಜಲ ಬೆಳಕು ಗಾಳಿ ಗುಣ ಒಂದೆ ತಾ ಎಲ್ಲಿರಲಿ;
ದೈವಕೊಡುಗೆ ಅನನ್ಯ – ಮುದ್ದುರಾಮ 156

ಬಳ್ಳಿಗಂಟಿದ ಹೂವು ಕಳಚಿ ಬೀಳುವುದೊಮ್ಮೆ;
ತೀರ ಅಪ್ಪುವ ಅಲೆಗೆ ಇದೆ ಅಂತ್ಯ ಒಮ್ಮೆ.
ಈ ಇಳೆಯ ಮನುಜನಿಗೆ ಎಂಥ ಆಶಾಪಾಶ!
ನಿರ್ಮೋಹ ದೈವಕೃಪೆ! – ಮುದ್ದುರಾಮ 157

ಮರೆತು ಹೊರಗಣ ಮಾತ ನೆನೆಯೊ ಒಳಗಣ ದನಿಯ!
ಅರಿ ಸಾರಸಂಪದವ ಗುರುಕರುಣೆಯಿಂದ.
ಮತಿವಿಕೃತಿಯಿಂದಾರು ಪರಮಪದ ಗಳಿಸಿದರೊ?
ನಿರ್ವಾಣ ದೇವದಯೆ – ಮುದ್ದುರಾಮ 158

ಮಂಕಡರಿತೆನುವಾಗ ಹೊಸತೇನೊ ಹೊಳೆಯುವುದು;
ಪದ ಕೂಡಿ ಆ ಕವನ ಗಾಯನಕೆ ಸಿದ್ಧ.
ಅಂಜನದ ರೂಪದಲಿ ಕಣ್ಗೆ ನವನಿಧಿ ಕಾಣ್ಕೆ;
ದೈವಕೃಪೆಯೇ ಹೀಗೆ! – ಮುದ್ದುರಾಮ 159

ತೆರೆಯುವುದು ಒಮ್ಮೆಲೇ ಮುಚ್ಚಿದ್ದ ಗವಿಯ ಕದ;
ಅತ್ತ ತೇಲುವುದು ಒಡನೊಡನೆ ಕರಿಮುಗಿಲು.
ಆಗ ಶುಭ್ರಾಕಾಶ! ಎಂಥ ಚಿತ್ತೋಲ್ಲಾಸ!
ಹರಿಲೀಲೆಯೇ ಹೀಗೆ! – ಮುದ್ದುರಾಮ 160

ಅವನ ದಯೆ ಇರುವನಕ ಬಿಡದು ತನುವನು ಉಸಿರು;
ಕರಗುವುದು ಕಷ್ಟ ಹಿಮ ನೀರಾಗುವಂತೆ.
ಬುದ್ಧಿ ಜಾಗೃತವಿದ್ದು ಹಗುರ ಬಾಳಿನ ಭಾರ;
ದೈವಕೃಪೆಗೆಣೆಯುಂಟೆ? – ಮುದ್ದುರಾಮ 161

ಹೊಳೆದದ್ದು ಪದವಾಗಿ ಅದುವೆ ಅಕ್ಷರಪಂಕ್ತಿ;
ಚಿತ್ತಾಗದಿದ್ದರದು ಈಶ್ವರನ ಕರುಣೆ!
ಅವನೆಣಿಕೆ ಎಂತಿಹುದೊ ಅಂತೆ ಸಾಲಿನ ಗಣನೆ!
ಕೃತಿಪ್ರಾಪ್ತಿ ಕೌತುಕವೊ! – ಮುದ್ದುರಾಮ 162

ಗುರುಚರಣ ಸ್ಪರ್ಶದಲಿ, ಭಯಭಕ್ತಿಸೇವೆಯಲಿ
ಇದೆ ವಿದ್ಯೆ ಸಂಪ್ರಾಪ್ತಿ, ವಿನಯ ಸಂಸ್ಕಾರ.
ಗುರುಶಿಷ್ಯ ಸಂಬಂಧ ನದಿಕಡಲ ಅನುಬಂಧ;
ಗುರು ದೇವನಭಯ ವರ – ಮುದ್ದುರಾಮ 163

ಗುಡಿದೀಪ ಸಾಲುಗಳ ಅಗ್ನಿಮುಖವೆನ್ನುವರೆ?
ಕರ್ಪೂರದಾರತಿಯ ಬೆಂಕಿ ಎನ್ನುವರೆ?
ಹೋಮಕುಂಡವ ಕಂಡು ಕಿಡಿ ಕಾಂಡವೆನ್ನುವರೆ?
ಮಹತಿಸನ್ನಿಧಿ ಜ್ಯೋತಿ – ಮುದ್ದುರಾಮ 164

ಬಸುರಿ ತಿಂದರೆ ಅನ್ನ ಒಡಲ ಮಗು ತೇಗುವುದು;
ಗಾಳಿ ಬೀಸಿದರಲ್ಲಿ ಹೂ ನಗುವುದಿಲ್ಲಿ.
ಯಾರೊ ನೆನೆದರೆ ಎಲ್ಲೊ ವಾಣಿ ಮೊಳಗುವುದಿಲ್ಲಿ!
ಯಾವ ಸನ್ನಿಧಿ ಸುಖವೊ! – ಮುದ್ದುರಾಮ 165

ಕಲ್ಲು ದೇವರೆ ಅಲ್ಲ; ಶಿಲೆಯಲಿಹನೋ ದೇವ!
ಸ್ವೀಕೃತಿಯ ನೆಲೆಯಂತೆ ಇದೆ ನಿರಾಕರಣೆ.
ಸಾಕಾರದಂಚಿನಲಿ ಇರದುದರ ಸ್ಪರ್ಶವಿದೆ;
ಅರಸುವಿಕೆ ಅನಿವಾರ್ಯ – ಮುದ್ದುರಾಮ 166

ಈ ಜಗದ ನಾಟಕದ ದೃಶ್ಯ ಒಂದೊಂದಕ್ಕೆ
ನಕ್ಷೆಯೊಂದಿರಬೇಕು ಸಿದ್ಧರೂಪದಲಿ.
ಏಕಾಗದೋ ಮುನ್ನ ಅದರ ಅನುಭವವೆಮಗೆ!
ಇದು ದೈವಕೀಟಲೆಯೆ? – ಮುದ್ದುರಾಮ 167

ತುಟಿ ತೆರೆದು ಹಾಡುತಿಹೆ; ಆ ನಾದ ನಿನದಲ್ಲ.
ಕಣ್ತೆರೆದು ಕಾಣುತಿಹೆ; ದೃಶ್ಯ ನಿನದಲ್ಲ.
ಬಾಯ್ತೆರೆದು ಉಣ್ಣುತಿಹೆ; ರುಚಿಭಾವ ನಿನದಲ್ಲ.
ನಿನ್ನದಿನ್ನೇನಯ್ಯ? – ಮುದ್ದುರಾಮ 168

ಬಾಂದಳದ ಹರವಿನಲಿ ಮಿನುಗಿದರೆ ನಕ್ಷತ್ರ;
ಸಾಗರದ ತೆರೆ ಮೇಲೆ ಸಾಗಿದರೆ ನಾವೆ.
ಕಾಣದವನಿಹನಲ್ಲಿ; ಮನುಜ ನಾವಿಕನಿಲ್ಲಿ;
ಗೊಂಬೆ ಆಡಿಸಿದಂತೆ – ಮುದ್ದುರಾಮ 169

ದೇವಸನ್ನಿಧಿಯಲ್ಲಿ ಧ್ಯಾನಸ್ಥನಾಗಿ ನೀ
ಬಯಸದೆಯೆ ಪರಿಣಾಮ ಸಲಿಸಭೀಷ್ಟವನು.
ಒಳಿತಿದ್ದರೀ ಭಾವ ಕೈಗೂಡುವುದು ಕಾರ್ಯ;
'ತಥಾಸ್ತು' ಶಿವವರವೊ! – ಮುದ್ದುರಾಮ 170

ಎಚ್ಚೆತ್ತ ಭಾವದಲಿ ದೈವಾಂಶ ಪ್ರಜ್ಞೆಯಿದೆ,
ಅನುಭಾವದೆತ್ತರದ ಅಮೃತ ಸ್ಪರ್ಶವಿದೆ,
ಅಮರತೆಯ ಸನ್ನೆಯಿದೆ ಆ ದಿವ್ಯ ಬೆಳಕಲ್ಲಿ;
ಧ್ಯಾನ ಜೀವನಜ್ಯೋತಿ – ಮುದ್ದುರಾಮ 171

ದೂರದೂರದಲೆಲ್ಲೊ ಕಣ್ಗೆ ಕಾಣದೆ ಇಹನೆ?
ಸಾಮೀಪ್ಯದಲ್ಲಿಹನೊ ಕೂಗಳತೆಯಲ್ಲಿ!
ನೇಹ ದರುಶನ ತವಕ ನಿಜ ಕಾಣ್ಕೆಗಡಿಗಲ್ಲು;
ಧ್ಯಾನ ದೇವನ ವರವೊ! – ಮುದ್ದುರಾಮ 172

ಕಣ್ಣಿದ್ದು ತೆರೆಯದೆಯೆ, ಮಿಟುಕಿಸದೆ ರೆಪ್ಪೆಯನು
ಒಳಮನದ ಆಲಯದಿ ನೆರೆದರದು ಧ್ಯಾನ.
ಚಿಂತನೆಯ ಬದಿಯಲ್ಲಿ ಇಲ್ಲ ರೂಪವಿಕಾರ;
ಭಾವ ದೇವಾಭಿಮುಖ – ಮುದ್ದುರಾಮ 173

ಸಿದ್ಧಪುರುಷರು ಯಾರೊ ಅವರ ಮನ ನಿರ್ಮಲವೊ!
ಅಲ್ಲಿಲ್ಲ ಕರುಬುತನ ಪೈಪೋಟಿ ಕದನ.
ತರ್ಕಬದ್ಧತೆ, ಸ್ಫುಟತೆ, ಚೊಕ್ಕತನ ಇದೆ ಅಲ್ಲಿ;
ದೈವಬಲ ಬೆಂಬಲವೊ! – ಮುದ್ದುರಾಮ 174

ಕಾಯಕತ್ತಲೆ ಕಳೆವ, ಮನದ ಮೈಲಿಗೆ ತೊಳೆವ
ಗುರುಮೂರ್ತಿಯಿಂದ ಭಾವಸೂತಕವಿಲ್ಲ.
ತೆನೆಗಟ್ಟಿ ನಿರ್ಮಲತೆ ನಿಶ್ಚಿಂತ ಅನುಭೂತಿ;
ಗುರುವಚನ ದಿಕ್ಸೂಚಿ – ಮುದ್ದುರಾಮ 175

ಸಲಹುವನು ಕೃಪೆಯಿಂದ ಪರಲೋಕದೂರನನು;
ತೋರುವನು ಬಟ್ಟೆಯನು ಹೊಲಬುಗೆಟ್ಟವಗೆ.
ಅವನೊಲಿದರೀ ಬರಡು ಹಸಿರುನೆಲವಾಗುವುದೊ!
ಶ್ರೀಪಾದ ವರದ ಗಣಿ – ಮುದ್ದುರಾಮ 176

ಶ್ರೀಗಂಧ ಲೇಪಿಸುತ, ಮಾಡಿ ಪುಷ್ಪಾರ್ಚನೆಯ
ಎಷ್ಟು ಪೂಜಿಸಿ ಏನು ದಯವಿಲ್ಲದನಕ?
ಕರಣಶುದ್ಧಿಯೆ ಭಕುತಿ, ಆಚಾರ ನೈವೇದ್ಯ;
ಶ್ರೀಚರಣ ಸುಜ್ಞಾನ – ಮುದ್ದುರಾಮ 177

ಪರಹಿತದ ಮಾಳ್ಕೆಯಲಿ ಇರಲಿ ಕರುಣೆಯ ಕಾಣ್ಕೆ;
ನಿಷ್ಕಾಮದೆಸಕದಲಿ ಇದೆ ದೈವಪ್ರಜ್ಞೆ.
ಉಪಕಾರದೊಡಲಲ್ಲಿ ಇದೆ ವಿನಯ ಭಾವಸಿರಿ;
ಕೈವಲ್ಯದನಿ ಕೊಡುಗೆ – ಮುದ್ದುರಾಮ 178

ಯಾರೊ ಬರೆಸಿದರೆನುವ ವಿನಯ ಕೂಡಿರುವನಕ
ಬರಿದಾಗದೋ ನಿನ್ನ ರಚನೆ ಮಸಿಕುಡಿಕೆ.
ನಮ್ರತೆಯ ಬದಿಯಲ್ಲಿ ದಿವ್ಯತೆಯ ದೀಪವಿದೆ;
ದೀನನೆಂದವ ಧನ್ಯ – ಮುದ್ದುರಾಮ 179

ಕಣ್ಣಳತೆ ನಿನದೆಷ್ಟೊ ಅಷ್ಟೆ ದರ್ಶನ ನಿನಗೆ;
ಬೊಗಸೆ ಗಾತ್ರವದೆಷ್ಟೊ ಅಷ್ಟೆ ಕಡಲಜಲ.
ಕೃತಕರ್ಮ ಎಷ್ಟೆಷ್ಟೊ ಅಷ್ಟೆ ಮನುಜನ ಪ್ರಾಪ್ತಿ;
ದೊರೆತಷ್ಟೆ ಹರಿಕರುಣೆ – ಮುದ್ದುರಾಮ 180

ಇದೆ ಬಯಲು ಇದೆ ಬೆಳಗು; ಇದೆ ಮರಹು ಇದೆ ಅರಿವು.
ನೋಡಿದಷ್ಟಿದೆ ಕಣ್ಗೆ ಕಡಲ ವಿಸ್ತಾರ.
ಇದ್ದು ಇಲ್ಲದ ತೆರದ ಬಾಳ್ವೆ ಸಂತನ ಸೂತ್ರ;
ಜ್ಯೋತಿ ಸಂಗಮನಾಥ – ಮುದ್ದುರಾಮ 181

ಮಾಮರದ ಮರೆಯಲ್ಲಿ ಕೋಗಿಲೆಯ ನಾದವಿದೆ;
ಕೋಗಿಲೆಯ ಅಸ್ತಿತ್ವ ಮರಕೆ ಅಂಟಿದೆಯೆ?
ಇದು ಬೇರೆ ಅದು ಬೇರೆ; ಆದರಿದೆ ಸಂಬಂಧ;
ಏಕತ್ವ ಅವಿನಾಶಿ – ಮುದ್ದುರಾಮ 182

ಯಮುನೆ ತೀರದಲೆಲ್ಲೊ ಮಧುರ ಮುರಳೀನಾದ;
ಸೋತು ಈ ಇಂಚರಕೆ ರಾಧೆ ಮೈಮರೆತ.
ಎಲ್ಲಿ ದಿವ್ಯತೆಗಾನ ಅಲ್ಲಿ ತನ್ಮಯ ತಾನ;
ಹರಿಚಿತ್ತ ರಸಚಿತ್ರ – ಮುದ್ದುರಾಮ 183

ಖಾಲಿ ಕಾಗದ ತಾನೆ ಕಾವ್ಯವಾಗುವುದೇನು?
ಭಿತ್ತಿ ತಾನೇ ಚಾರುಚಿತ್ರವಾಗುವುದೆ?
ಬರೆವ ಬೆರಳಲಿ ಅಮಿತ ಶಕ್ತಿ ತುಂಬಿರಬೇಕು;
ಅವನೊಲಿದರದು ಕಲೆಯೊ! – ಮುದ್ದುರಾಮ 184

ತಂಪನೀವನು ಚಂದ್ರ ಹುಣ್ಣಿಮೆಯ ರೂಪದಲಿ;
ಚೆಲುವ ತೋರ್ವುದು ಕಡಲು ತೆರೆಯ ರೂಪದಲಿ.
ಸತ್ವ ಸಾರ್ವುದು ಬಾನು ತಾರೆಗಣ ರೂಪದಲಿ;
ಲೋಕ ದೇವನ ರೂಪ – ಮುದ್ದುರಾಮ 185

ಜಗದ ನಾಟಕದಲ್ಲಿ ವೇಷಭೂಷಣ ಬೇರೆ:
ಒಬ್ಬ ವ್ಯಾಪಾರಿ, ಇನ್ನೊಬ್ಬ ಪೂಜಾರಿ.
ಇತ್ತ ಎಣಿಸಿದರಿವನು, ಅತ್ತ ನೆನೆಯುವನವನು;
ಕಣ್ಣನಾಟವೆ ಆಟ! – ಮುದ್ದುರಾಮ 186

ಅವನೊಲುಮೆಯಿಲ್ಲದಿರೆ ನೀರೆಲ್ಲಿ ಕೆರೆಯಲ್ಲಿ?
ರುಚಿರುಚಿಯ ಹಾಲೆಲ್ಲಿ ಹಸುಕೆಚ್ಚಲಲ್ಲಿ?
ಚಂದನದ ತರುವಿನಲಿ ಅಪರಿಮಿತ ಕಂಪೆಲ್ಲಿ?
ಮಿನುಗೆಲ್ಲಿ ಬಾನಲ್ಲಿ? – ಮುದ್ದುರಾಮ 187

ಇತ್ತ ನೋಡಿದರಿವನೆ, ಅತ್ತ ನೋಡಿದರಿವನೆ;
ಎತ್ತ ನೋಡಲಿ ಅಲ್ಲಿ ಇವನದೇ ಚಿತ್ರ!
ಬಯಲ ದೆಸೆದೆಸೆಯಲ್ಲಿ ಇವನಲ್ಲದಿನ್ನಾರು?
'ಅಹುದಹುದು, ಮತ್ತೇನು?' – ಮುದ್ದುರಾಮ 188

***

ಮಾವಿನಲಿ ಸವಿರುಚಿಯ ಬಚ್ಚಿಟ್ಟವರು ಯಾರೊ?
ತೆಂಗಿನಲಿ ಎಳನೀರ ತುಂಬಿದವರಾರೊ?
ಮಲ್ಲಿಗೆಯ ಹೂವಿನಲಿ ಕಂಪನಿಟ್ಟವರಾರೊ?
ಸೋಜಿಗದ ಗುರು ಯಾರೊ! – ಮುದ್ದುರಾಮ 189

ಸುತ್ತುತ್ತಲಿದೆ ಚಂದ್ರ ತಿರೆಯ ಆಸರೆಯಲ್ಲಿ;
ಚಲಿಸುತ್ತಲಿದೆ ಭೂಮಿ ಭಾಸ್ಕರನ ಸುತ್ತ.
ಢಿಕ್ಕಿ ಹೊಡೆಯದೆ ಹೇಗೆ ಸಾಗುತಿದೆ ಈ ಚಕ್ರ?
ಲೋಕದಧಿಪತಿ ಯಾರೊ? – ಮುದ್ದುರಾಮ 190

ಮೀನಿಗೀಜನು ಕಲಿಸಿ ಜಲವ ತಾ ಕರುಣಿಸಿದ;
ತಾರೆಪುಂಜವ ರಚಿಸಿ ಚೆಲುಚಿತ್ರ ಬರೆದ.
ಇತ್ತು ಹಕ್ಕಿಗೆ ರೆಕ್ಕೆ ಬಯಲ ಸಿರಿ ತಾ ತೆರೆದ.
ತನುವಿಗುಸಿರನು ಎರೆದ – ಮುದ್ದುರಾಮ 191

ಯಾರ ಕಂಠದಲೆಂಥ ಜೇನದನಿ ತುಂಬುವನೊ!
ಯಾವ ಲತೆಯಲ್ಲೆಂಥ ಹೂವ ಅರಳಿಪನೊ!
ಯಾರ ಬೆರಳಲ್ಲೆಂಥ ರಸಗವಿತೆ ಮೂಡಿಪನೊ!
ಇವನೆಂಥ ಮಾಂತ್ರಿಕನೊ! – ಮುದ್ದುರಾಮ 192

ಯಾರ ಮೊಗದಲಿ ಎಂಥ ಸೌಂದರ್ಯ ಕರುಣಿಪನೊ!
ಯಾವ ಲತೆಯಲ್ಲೆಂಥ ಹೂವ ಅರಳಿಪನೊ!
ಯಾವ ಅಲೆಕಣದಲ್ಲಿ ಚೈತನ್ಯ ತುಂಬುವನೊ!
ಅವನೇನ ಮಾಡುವನೊ! – ಮುದ್ದುರಾಮ 193

ಯಾವ ಹೂವಿನಲೆಂಥ ನರುಗಂಪ ತುಂಬುವನೊ!
ಯಾವ ಗೆಜ್ಜೆಗೆ ಎಂಥ ಲಾಸ್ಯ ಯೋಜಿಪನೊ!
ಯಾವ ರಾಗಕೆ ಎಂಥ ಯಾರ ದನಿ ತೂರುವನೊ!
ಕಾವನೆಲ್ಲೆಂತಿಹನೊ! – ಮುದ್ದುರಾಮ 194

ಪರನಾರಿಗೊಲಿದವನ ಗಾಣದಲಿ ಇಕ್ಕುವನೊ!
ಹುಸಿಯಾಡಿ ನಗುವವನ ಕಪಿಯಾಗಿಸುವನೊ!
ಹಮ್ಮಿನಲಿ ಮೆರೆದವನ ಕೊಳಚೆಯಲಿ ತಳ್ಳುವನೊ!
ಅವನಾಟವೇನೇನೊ! – ಮುದ್ದುರಾಮ 195

ಕೈಹಿಡಿದು ನಡೆಸಲಿಕೆ ಇಹನಾರೊ ವ್ಯೋಮದಲಿ!
ತಿರೆಯ ಮೇಲಿನ ಪ್ರಾಣಿ ಈ ಮನುಜ ಜಾತಿ.
ಕೀಲಿ ಕೊಟ್ಟರೆ ಆಟ; ಇಲ್ಲದಿರೆ ನಿಶ್ಶಬ್ದ;
ಸೂತ್ರವಿದೆ ಇನ್ನೆಲ್ಲೊ! – ಮುದ್ದುರಾಮ 196

ಯಾವ ರೂಪದಲೆಂದು ಯಾವ ಕಾರಣಕಾಗಿ
ಯಾರ ಮುಂದೇಕವನು ಬಂದು ನಿಲ್ಲುವನೊ!
ಚಿತ್ರ ಬರೆಸಿದ ಬಳಿಕ ತೂಗುಹಾಕುವನವನೆ!
ಬರಿ ನಿಮಿತ್ತನೊ ಮನುಜ! – ಮುದ್ದುರಾಮ 197

ಇರುವುದೊಂದೇ ಮಣ್ಣು; ಇಹುದು ಒಂದೇ ನೀರು;
ಬೀಜ ಬದಲಾದಂತೆ ಹೂ ಬಣ್ಣ ಭಿನ್ನ.
ಚಿಗುರಿ ಮುದುರುವ ರೀತಿ ಸಸ್ಯ ಜಾತಿಗೆ ಒಂದೆ!
ಯಾರೊ ಈ ವನಮಾಲಿ! – ಮುದ್ದುರಾಮ 198

***

ಕಡಿದ ತರು ಚಿಗುರುವುದು, ಒಡೆದ ಮನ ಕೂಡುವುದು;
ಮುಗಿಲು ಮಳೆಗರೆವುದು ದೈವಕೃಪೆಯಿಂದ.
ಬಣಗು ಚಿಂತೆಗಳಳಿದು ಜೀವ ಹಸನಾಗುವುದು;
ಮನದ ಹದ ದೈವೇಚ್ಛೆ – ಮುದ್ದುರಾಮ 199

ನಿನ್ನಿಚ್ಛೆ ದಿನದಿನದಿ ಏನಿದೆಯೊ ಎಂತಿದೆಯೊ
ಅದು ಒಮ್ಮೆ ಆದೀತು ಆಗದಿದ್ದೀತು!
ಇಂತೇಕೆ ಎನುವುದಕೆ ಯಾವ ಉತ್ತರವಿಲ್ಲ;
ಅವನಿಚ್ಛೆ ಅಂತಿಮವೊ! – ಮುದ್ದುರಾಮ 200

ಹೆಸರು ಏನೇ ಇರಲಿ ಬದಲಾಗುವುದೆ ಹೂವು?
ನದಿನಾಮ ಏನಿರಲಿ ಜಲ ಒಂದೆ ತಾನೆ!
ಏನೆ ಅಂಕಿತವಿರಲಿ ಸತ್ವ ಬದಲಾಗುವುದೆ?
ದೇವನೊಬ್ಬನೆ ತಾನೆ! – ಮುದ್ದುರಾಮ 201

ಈಶನೋ ವೆಂಕಟನೊ ಪೂಜಿಸೋ ಮೂರ್ತಿಯನು;
ನಾಮ ಯಾವುದೆ ಇರಲಿ, ತತ್ವ ಅದು ಒಂದೆ!
ಸಗುಣ ನಿರ್ಗುಣ ಪಂಥ ತೋರ್ವುದೊಂದೇ ದಾರಿ!
ನಾಥನೊಬ್ಬನೆ ಜಗದಿ – ಮುದ್ದುರಾಮ 202

ಬೇಡು ಬೇಡೆಲೊ ಒಲಿದು ನಿನ್ನಿಷ್ಟ ದೈವವನು;
ಭಾವ ಎಂತಿಹುದೊ ಇಹುದು ದರುಶನ ಅಂತೆ.
ಅನ್ಯದೈವವನೇಕೆ ಉಬ್ಬುಬ್ಬಿ ನಿಂದಿಸುವೆ?
ಮೊಡವಿಗೀಶ್ವರನೊಬ್ಬ! – ಮುದ್ದುರಾಮ 203

ಪಾದ ಪಿಡಿಯಲು ಮೊಸಳೆ ಮೊರೆಯ ಹರಿ ಆಲಿಸಿದ;
ಪ್ರಹ್ಲಾದ ಕರೆ ಕೇಳಿ ನರಸಿಂಹನಾದ.
ನೀಡಿ ಅಂಬರ ವರವ ನಾರಿಗೌರವ ಮೊರೆದ;
ಲಕುಮಿಕಾಂತನ ಭಜಿಸೊ! – ಮುದ್ದುರಾಮ 204

ಯಾವುದೋ ಪುಣ್ಯಫಲ ನಿಲುವುದಾಸರೆಯಾಗಿ
ಸಂಕಟದ ಹೊತ್ತಿನಲಿ ಸಿಡಿಲೆರಗಿದಾಗ,
ಬಿದ್ದ ಮಳೆಹನಿ ನಿಂತ ತರುನೆರಳ ತೆರದಲ್ಲಿ.
ನೆನೆ ನಿರತ ದೈವಕೃಪೆ – ಮುದ್ದುರಾಮ 205

ಧನದ ಸುರಿಮಳೆ ತರದು ಮನಕೆ ಶಾಂತಿಯ ತಂಪ;
ಬೇಕದಕೆ ಹದಬೆರೆತ ಶಾಂತಿರಸಪಾಕ.
ಕರುಣೆ ಮೊಗ್ಗಿನ ಕಂಪು ದೇವ ವೃಕ್ಷದ ಕೊಡುಗೆ;
ನೆನೆ ಮನದಿ ರಾಮಕೃಪೆ – ಮುದ್ದುರಾಮ 206

ಅರಳುತಿರು ನನೆಯಂತೆ ಫಲಿಸಲಿಕೆ ಪರಿಣಾಮ;
ಕರಗುತಿರು ಅರಗಂತೆ ದೈವ ನೆನಹಿನಲಿ.
ತುಂಬಿಕೋ ಮನದಲ್ಲಿ ಆರಾಧನಾ ಭಾವ;
ಅಡಿಗಡಿಗೆ ನೆನೆ ಹರಿಯ – ಮುದ್ದುರಾಮ 207

ಮುದ್ದು ಮುದ್ದಾಗಿರುವ ಮಗು ಮೊಗದ ಮುಗ್ಧತೆಗೆ
ಸರಿಸಾಟಿ ಯಾವುದಿದೆ ಲೋಕನೆಲೆಯಲ್ಲಿ?
ತಾ ಅಂಬೆಗಾಲಿಡುತ ತಂದ ಸಂತಸ ಕೃಷ್ಣ;
ನಂದತನಯನ ನೆನೆಯೊ! – ಮುದ್ದುರಾಮ 208

ದುಷ್ಟಶಿಕ್ಷಕನಾದ, ಶಿಷ್ಟರಕ್ಷಕನಾದ
ರಾಮ ಪುರುಷೋತ್ತಮನೊ! ನ್ಯಾಯಪಾಲಕನೊ!
ಬರುವೆಲ್ಲ ಪೀಳಿಗೆಗೆ ಆದರ್ಶ ದರ್ಶಕನೊ!
ನಮಿಸೊ ಸೀತಾಪತಿಗೆ – ಮುದ್ದುರಾಮ 209

ನೀ ಕೊಟ್ಟುದಕ್ಕಿಂತ ಪಡೆದುದೇ ಅತಿ ಜಾಸ್ತಿ;
ಈ ಭಾವ ಜಾರಿದರೆ ಅತಿ ಜಿಪುಣ ನೀನು.
ಬೀಜವೊಂದನು ನೆಟ್ಟು ಎಷ್ಟು ಫಲ ಗಳಿಸಿದೆಯೊ!
ನೆನೆಯೊ ದೇವನ ದಾನ! – ಮುದ್ದುರಾಮ 210

ಈ ಇರುಳಿನಲಿ ಬರೆದ ಸಾಲೆ ಕೊನೆ ಇರಬಹುದು;
ಹೊತ್ತಾರೆ ಎದ್ದರದು ಶಿವಕರುಣೆ ಎನ್ನು.
ಯಾವ ಪುಣ್ಯದ ಫಲವೊ ಬದುಕಿರುವೆ ಈತನಕ;
ನಮಿಸೊ ನೀ ಅವನಡಿಗೆ – ಮುದ್ದುರಾಮ 211

ದೇವನೊಲಿದಂದೆ ಅದು ಮನುಜ ಜನುಮದ ಪುಣ್ಯ;
ಜೀವಿತಕೆ ಅವನಿತ್ತ ಸಕಲಸಿರಿಸೊಬಗು.
ವೇಷಧಾರಿಯು ಅವನೆ; ಸೂತ್ರಧಾರನು ಅವನೆ!
ಈಶಕರುಣೆಗೆ ನಮಿಸೊ! – ಮುದ್ದುರಾಮ 212

ಸತ್ಯಕಂಕಣಬದ್ಧ, ವಚನಪಾಲನಶುದ್ಧ,
ಸಂವೇದನಾಶೀಲ, ಸುಂದರಾಕಾರ
ಸೌಮ್ಯ ಚಾರು ಪ್ರಸನ್ನ, ತೇಜಸ್ವಿ ಕುಲತಿಲಕ
ನಮೋ ಪ್ರಭು ಶ್ರೀರಾಮ – ಮುದ್ದುರಾಮ 213

ಇನ್ನೊಂದು ದಿನ ನಮಗೆ ಜೀವವಿತ್ತವನಾರೊ
ನೆನೆದವನ ನಮಿಸು ಶ್ರೀಪಾದ ಕಮಲಕ್ಕೆ.
ಕ್ಷಣಿಕವೀ ಬಾಳೆಂಬ ಅರಿವಿದ್ದರದೆ ಕ್ಷೇಮ;
ದೇಹ ದೇವನ ವರವೊ! – ಮುದ್ದುರಾಮ 214

ನಿನದೊ ಹಾಡುವ ಆಸೆ; ಶ್ರೀಕಂಠ ಅವನ ವರ.
ನೀ ಚಿತ್ರ ಬರೆಯಲಿಕೆ ಅವ ಸ್ಫೂರ್ತಿಕೇಂದ್ರ.
ಬೇಡಬಹುದೆಷ್ಟೊ ನೀ; ಕೊಡುಗೆ ದೇವನ ಇಚ್ಛೆ.
ಎರಗುತಿರು ಅವನಡಿಗೆ – ಮುದ್ದುರಾಮ 215

ಕನ್ನಡಿಯ ನೋಡದಿರೆ ಮೊಗವ ಕಾಣುವೆ ಹೇಗೆ?
ತೆರೆದು ಒಳಗಿನ ಕಣ್ಣ ಅರಿ ಗುಣಾವಗುಣ.
ಹಿಂಗಲಿಕೆ ದುರವಸ್ಥೆ ನೆನೆಯೊ ಅನುದಿನ ಹರಿಯ;
ಕಳೆಯೊ ಕಾಯವಿಕಾರ – ಮುದ್ದುರಾಮ 216

ನಂಬದಿರೆ ನೀ ಶಿವನ ಕರಚಾಚನೋ ನಿನಗೆ!
ಅವನು ಬಲ್ಲವನಾಗಿ ಒಲ್ಲನೋ ನಿನ್ನ.
ಬಿಸುಟು ಸಂದೇಹವನು ಇಡು ಗಮನ ಧ್ಯಾನದಲಿ;
ನೀರಲದ್ದನೋ ಆಗ! – ಮುದ್ದುರಾಮ 217

ಚದುರದಿರೆ ಮನಬಯಕೆ, ಮುರಿಯದಿರೆ ಅವಗುಣವ
ಗೆಲಲಾರೆ ದುರಿತಗಳ ಸಕಲಸಂಪದಕೆ.
ಹರಿಯಲಿಕೆ ಭವಪಾಶ ಸವಿ ದೇವನಾಮರುಚಿ;
ನಂಬು ಕೈವಲ್ಯಪದ – ಮುದ್ದುರಾಮ 218

ನಿನಗಿನಿತು ರುಚಿಸದಿಹ ಎನಿತೊ ಸಂಗತಿಗಳಲಿ
ಇದೆ ಅವನ ಕೈಸನ್ನೆ ನಿನಗರಿಯದಂತೆ.
ಒಪ್ಪಿ ಅದ ನಡೆ ಮೆಲ್ಲ ಅನುಮಾನವಿನಿತಿರದೆ;
ನಂಬು ದೇವನ ಕೃಪೆಯ – ಮುದ್ದುರಾಮ 219

ದೇವನಿಹನೊ ಇಲ್ಲವೊ! ಇದ್ದರವನೆಲ್ಲಿಹನೊ?
ಚರ್ಚೆ ಸಾಗಿದೆ ಹೀಗೆ ಶತಮಾನದಿಂದ.
ಆಸ್ತಿಕನೊ! ನಾಸ್ತಿಕನೊ! ಅವನವನ ಇಚ್ಛೆ ಅದು.
ಕೆದಕದಿರು ನಂಬಿಕೆಯ – ಮುದ್ದುರಾಮ 220

ಯಾವ ನಂಬಿಕೆ ನಿನ್ನ ನಡೆಸಿದೆಯೊ ಇಷ್ಟು ದಿನ
ಚಲಿಸುತಿರು ಭರವಸೆಯ ಆ ನಾವೆಯಲ್ಲಿ.
ಸಂದೇಹ ದಳ್ಳುರಿಗೆ ಸಿಲುಕಿದರೆ ಕರಕಷ್ಟ;
ನಂಬಿ ನಡೆವುದೆ ಕ್ಷೇಮ – ಮುದ್ದುರಾಮ 221

ತಿನುವ ತುತ್ತಿನ ಮೇಲೆ ಹೆಸರು ಬರೆದಿದೆ ನಿನದು;
ತುಟಿಗೆ ಬಂದದ್ದೆಷ್ಟೊ ಬೀಳುವುದು ಕೆಳಗೆ!
ಅನ್ನಭಾಗ್ಯವ ನೆನೆದು ಈಶಚರಣಕೆ ನಮಿಸೊ!
ಕವಳ ದೇವನ ಭಿಕ್ಷೆ – ಮುದ್ದುರಾಮ 222

ಬಾನಿನಲಿ ನೀರಿರಲಿ, ಹೂವಿನಲಿ ಕಂಪಿರಲಿ
ಹಿರಿದೆನುವುದೇನಿದೆಯೊ ಅದು ದೇವ ಕೊಡುಗೆ.
ಮಹತಿ ಔನ್ನತ್ಯವನು ಕಂಡೊಡನೆ ತಲೆಬಾಗು;
ಅತಿಶಯವೆ ಶ್ರೀರಕ್ಷೆ – ಮುದ್ದುರಾಮ 223

***

ಅವನಿತ್ತ ಹರಿಗೋಲ ಬಳಸಿ ಈ ಜಗತೊರೆಯ
ದಾಟಿರುವೆ ಸಂತಸದಿ ನೀನಿಷ್ಟು ದೂರ.
ಸುಖಗುರಿಯ ತಲುಪಲಿಕೆ ಸಂತೃಪ್ತಿಯೇ ದಾರಿ;
ಇರಲಿ ಮನದಲಿ ಧೈರ್ಯ – ಮುದ್ದುರಾಮ 224

ಜಗಜನರ ಸಂಪರ್ಕ ಸಾಕು ಸಾಕೆಂದೆನಿಸಿ
ದೈವ ಪರಿಭಾವನೆಯೆ ಜೀವನೋದ್ದೇಶ.
ಇಲ್ಲಿದ್ದು ಪರಚಿಂತನೆಯೆ ಬಾಳ ಸರ್ವಸ್ವ;
ಒಲಿಯೊ ಆರಾಧನೆಗೆ – ಮುದ್ದುರಾಮ 225

ಏನಿದೆಯೊ ಕೈಯಲ್ಲಿ ನಿನ್ನ ಪಾಲಿನ ಕೆಲಸ
ನಿರ್ವಹಿಸು ನಿಷ್ಠೆಯಲಿ ಅಚ್ಚುಕಟ್ಟಾಗಿ.
ಬಿಟ್ಟುಬಿಡು ಉಳಿದದ್ದ; ಮಿಕ್ಕದ್ದು ಅವನಿಚ್ಛೆ;
ನೀನೀಶನೇನಲ್ಲ – ಮುದ್ದುರಾಮ 226

ಬೀಜ ನೆಡುವವ ನೀನು; ತೆನೆಯ ಕೊಡುವವ ಅವನು.
ನೀನೊ ಬರಿ ಲಿಪಿಕಾರ; ಅವನೊ ರಸಧಾರೆ.
ಈ ತಿರೆಯ ಕೆಸರು ನೀ; ಅವನೆ ನಿಜ ಗಂಗೋತ್ರಿ.
ಕಣ ನೀನು, ಘನ ಅವನು – ಮುದ್ದುರಾಮ 227

ಗಾಳಿಬುಡ್ಡೆಯೊ ನೀನು; ಊದುವವನಿಹನೊಬ್ಬ.
ಊದಿ ತುಂಬದಿರುಸಿರ ಆಕಾರವೆಲ್ಲಿ?
ಮಕ್ಕಳಾಟಿಕೆಯಂತೆ ಇದೆ ನಿನ್ನ ಇರವಿಲ್ಲಿ;
ನೀ ಚೆಂಡು, ವಿಭು ಪಾದ – ಮುದ್ದುರಾಮ 228

ಕುಣಿಕೆ ಎಸೆವವನವನು; ಜೋತ ಕೊರಳೋ ನಿನದು!
ಅವನೆ ಶ್ರೀರಾಗ; ಸೋತ ದನಿಯೋ ನಿನದು!
ಎತ್ತ ಕರೆವನೊ ಅತ್ತ ಮೆಲ್ಲ ಹೆಜ್ಜೆಯೊ ನಿನದು!
ದೊಂಬರಾಟವೊ ನಿನದು! – ಮುದ್ದುರಾಮ 229

ಬೇಡುವೊಡೆ ಬೇಡು ಆ ಕಾರುಣ್ಯಸಿಂಧುವನು;
ಹುಲುಮನುಜರೆದುರಲ್ಲಿ ಕೈಚಾಚುವೇಕೆ?
ಬೇಡ ಭಿಕ್ಷಾಪಾತ್ರೆ ಜಗದ ಜನಮನೆ ಮುಂದೆ;
ಅಭಿಮಾನಧನನಾಗು – ಮುದ್ದುರಾಮ 230

ಬಿಡಿಹೂವ ಕೇಳ್ದವಗೆ ಹೂಮಾಲೆ ದೊರಕಿದರೆ
ಏನು ಮಹದಾನಂದ ಆ ಹೊತ್ತಿನಲ್ಲಿ!
ಭಾವ ಪರಿಮಳ ತರುವ ಸಂತಸಕೆ ಎಣೆಯುಂಟೆ?
ಕೊಡುಗೆ ದೇವನ ಕರುಣೆ – ಮುದ್ದುರಾಮ 231

ಉತ್ತಮೋತ್ತಮ ಕೃತಿಯ ರಚಿಸಿದರು ಜನಹಿತಕೆ;
ಅರ್ಪಿಸಿದರದನೆಲ್ಲ ದೈವ ಪದತಲಕೆ.
ಮಣಿದಿಷ್ಟ ದೇವತೆಗೆ ತೊರೆದರಭಿಮಾನವನು;
ಹರಿಕರುಣೆಯೋ ರಚನೆ! – ಮುದ್ದುರಾಮ 232

ನಮ್ಮದೆನ್ನುವುದಿಷ್ಟು; ಉಳಿದದ್ದು ಅವನಿಷ್ಟ;
ಏನಾದರೇನಂತೆ? ನಗುತಲಿರು ನಿರತ.
ಹಿಡಿಯಬಲ್ಲವರಾರೊ ಮುಷ್ಟಿಯಲಿ ಈ ಬಯಲ?
ಇರುವುದಕೆ ಋಣಿ ನೀನು – ಮುದ್ದುರಾಮ 233

ಯಾವ ರೂಪದಿ ದೇವ ಕರುಣೆ ತೊರೆ ಹರಿಸುವನೊ!
ಬೊಗಸೆಯಲಿ ವರ ಪಡೆದು ಸವಿದು ಸುಖಿಸುತಿರು.
ಗೊಣಗದಿರು ಆದಷ್ಟು; ಅದುವೆ ಇಹಪರ ಭಾಗ್ಯ.
ಸಲಿಸು ವಂದನೆ ಹರಿಗೆ – ಮುದ್ದುರಾಮ 234

□



3
ಪ್ರಕೃತಿ ದಿವ್ಯತೆ ತೋರ್ಕೆ

ಯಾರ ಕಾಲಡಿ ಕುಳಿತು, ಯಾರ ಅಪ್ಪಣೆ ಬೇಡಿ
ಮಿನುಗುವುದೊ ಇರುಳಲ್ಲಿ ನಕ್ಷತ್ರಪುಂಜ?
ಬಾನಿನಂಗಳದಲ್ಲಿ ಮೆರೆಯುವುದೊ ಶಶಿಸೂರ್ಯ!
ಶಕ್ತಿಧಾಮ ನಿಸರ್ಗ – ಮುದ್ದುರಾಮ

ಯಾವುದಗಣಿತ ಹೂಗೆ ಉದ್ಯಾನವಾಗುವುದೊ
ಇದೆ ಅಲ್ಲಿ ಜೀವಂತ ಸೌಂದರ್ಯರೂಪ.
ಬಿರಿದ ನನೆ ಕಮಲಸಿರಿ; ಎರೆದ ಕಂಪು ವಿಶೇಷ;
ಅತಿ ರಮ್ಯವೊ ನಿಸರ್ಗ! – ಮುದ್ದುರಾಮ 235

ಹರಿವ ಸರಿತೆಯಲೆಂಥ ಲಯದ ಜುಳುಜುಳು ನಾದ!
ಶ್ವೇತ ಹಿಮಗಿರಿಯಲ್ಲಿ ಎಂಥ ಶೀತಲತೆ!
ದಟ್ಟ ಕಾಡಿನಲೆಂಥ ನಿಶ್ಶಬ್ದ ನೀರವತೆ!
ರುಚಿರ ಗಾನ ನಿಸರ್ಗ! – ಮುದ್ದುರಾಮ 236

ಎತ್ತರದ ಗಿರಿಯಿಂದ ತಿರೆಯತ್ತ ತೊರೆ ಹರಿದು
ಹೊಲಗದ್ದೆ ತೆನೆತುಂಬಿ ಎಂಥ ಸಿಂಗಾರ!
ಕುಳಿತು ಕಾಂಡದಿ ಪಕ್ಷಿ ಎಂಥ ಮೋಹಕ ನಾದ!
ಪ್ರಕೃತಿ ಅತಿ ವಯ್ಯಾರಿ! – ಮುದ್ದುರಾಮ 237

ಯಾರೆ ಮೆಚ್ಚಲಿ ಬಿಡಲಿ ಹೂ ಅರಳದೇ ಬನದಿ?
ಹಾರದೇ ಗುಬ್ಬಿ ತಂತಾನೆ ಆಗಸದಿ?
ಕೋರುವುದೆ ಜನಕೃಪೆಯ ಬೀಜ ತೆನೆಯಾಗಲಿಕೆ?
ಪ್ರಕೃತಿ ಚತುರತೆ ಬೆಡಗಿ – ಮುದ್ದುರಾಮ 238

ಬಾನಂಗಳದ ಸೊಬಗು, ಮುಗಿಲಮಾಲೆಯ ಮೆರಗು,
ತಾರೆನಿವಹದ ಮಿನುಗು ಬಲು ಬೆರಗು ಬೆರಗೊ!
ಈ ಸೃಷ್ಟಿಕೌತುಕದ ಮೂಲ ಎಲ್ಲೆಲ್ಲಿದೆಯೊ!
ಪ್ರಕೃತಿ ಚೆಲುವಿನ ರಾಣಿ – ಮುದ್ದುರಾಮ 239

ನೀ ಬೀಜ ನೆಟ್ಟೊಡನೆ ನೆರಳನೀವುದೆ ನಿನಗೆ?
ಮಾಗುವಿಕೆ ಪ್ರಕ್ರಿಯೆಯೆ ಕಾಲದೌನ್ನತ್ಯ.
ಅವಸರದ ಬಿರುಸಿಲ್ಲ ಪ್ರಕೃತಿ ಸೌಮ್ಯತೆಯಲ್ಲಿ;
ಪ್ರಕೃತಿ ಗುರು ಸಂಯಮಕೆ – ಮುದ್ದುರಾಮ 240

ಮಲಯ ಮಾರುತದಿಂದ ಮುದದ ಸಂವರ್ಧನೆಯೊ!
ಹಕ್ಕಿ ಕಲರವದಿಂದ ಸಂಭ್ರಮದ ಸಿರಿಯೊ!
ಅಲೆಯ ನರ್ತನದಿಂದ ಸಾಗರದ ಋತದನಿಯೊ!
ಸೃಷ್ಟಿ ಚೆಲುವಿನ ಗಣಿಯೊ! – ಮುದ್ದುರಾಮ 241

ಬನದ ಮೂಲೆಯಲೆಲ್ಲೊ ಹೂ ಅರಳಿ ನರುಗಂಪು;
ಕೊಳಲ ನಾದವಿನೋದ ಗಿರಿತುದಿಯಲೆಲ್ಲೊ!
ಹಕ್ಕಿ ಚಿಲಿಪಿಲಿ ನಾದ ಬಾನಂಗಳದಿ ಎಲ್ಲೊ!
ಗುಣವಿಕಾಸವೆ ಸೃಷ್ಟಿ – ಮುದ್ದುರಾಮ 242

ಗೀಜಗನ ಗೂಡೊಂದು ಕೌಶಲದ ಪರಿಪಾಕ;
ನವಿಲ ನಿರಿಗರಿಯೊಂದು ನೃತ್ಯಸಂಕೇತ.
ಬಯಲ ತಂಪೆಲರೊಂದು ಜೀವಂತಿಕೆಯ ಉಸಿರು;
ಸೌಂದರ್ಯಸೆಲೆ ಸೃಷ್ಟಿ – ಮುದ್ದುರಾಮ 243

ಬಾನಭಾಸ್ಕರ ರಶ್ಮಿ ತಿರೆಎಲೆಯನಪ್ಪುವುದು;
ತಾರೆ ಮಿನುಮಿನುಗು ಕಣ್ಗೆ ತಂಪೀಯುವುದು;
ಕಡಲ ಜಲ ಗಗನದಲಿ ಮುಗಿಲಾಗಿ ತೇಲುವುದು;
ಚೆಂದ ವಿಶ್ವದ ರಚನೆ – ಮುದ್ದುರಾಮ 244

ಹೊಸತನಕೆ ನೆಲೆವೀಡು ಈ ಬಾನು ಶಶಿ ಸೂರ್ಯ;
ತಳಿರ ಸೊಂಪಿನ ವರ್ಣ ನಾಟ್ಯನಾವೀನ್ಯ.
ರಾಗತಾಳದ ಮೇಳ ಕಾಲದಂಕಿತ ಚಿತ್ರ;
ಕಾಲದಲೆ ಸೌಂದರ್ಯ – ಮುದ್ದುರಾಮ 245

ಹೊತ್ತಾರೆ ರವಿರಶ್ಮಿ ನೋಟ ಎಷ್ಟು ಪ್ರಸನ್ನ!
ಬರುಬರುತ ಮಧ್ಯಾಹ್ನ ಏಕಷ್ಟು ತೀಕ್ಷ್ಣ?
ಮುಳುಗುತಿರೆ ಸಂಜೆಯಲಿ ಶಾಂತ ಆ ಕಿರಣ ಬಗೆ;
ಸೂರ್ಯ ಶಕ್ತಿಸಮಸ್ತ – ಮುದ್ದುರಾಮ 246

ರಂಗೇರಿದಾಗಸದ ಮೂಡಲಿನ ಒಡಲಿಂದ
ಹೊಂಗಿರಣದುದಯ ಮನಕೆಂಥ ಆನಂದ!
ಅಂಗಳದ ಗೂಡಿಂದ ಪರಪುಟ್ಟ ನಾದ ಅದು;
ಕಣ್ಗೆ ರವಿ ಸಿಂಗಾರ – ಮುದ್ದುರಾಮ 247

ಕೋಳಿ ಕೂಗಿತು ಅಲ್ಲಿ, ಕಣ್ಣು ತೆರೆಯಿತು ಇಲ್ಲಿ;
ಬೆರಗ ಚೆಲ್ಲಿತು ಕಾಂತಿ ಮೂಡಲೊಡಲಿಂದ.
ಕೆಂಪ ಚಿಮ್ಮಿತು ಚೆಲುವು ಸುಮನದಳ ಬಿರಿದಂತೆ;
ಇರುಳಳಿದು ರವಿಯುದಯ – ಮುದ್ದುರಾಮ 248

ಮುಂಜಾನೆ ಬೇಗ ನೀ ಏಳದಿರೆ ನೋಡುವೆಯ
ಮೂಡಲಲಿ ಭಾಸ್ಕರನ ಉಷೆಯ ಜೊತೆಯಲ್ಲಿ?
ಕಲಿ ತೇಲಿ ನಲಿಯುವುದ ಈ ಅರುಣಸಾಗರದಿ;
ಸ್ವಾಗತಿಸು ರವಿಯುದಯ – ಮುದ್ದುರಾಮ 249

ಇಂಪುಚಾಪದ ನೋಟ ಸಪ್ತವರ್ಣದ ಮಾಟ;
ಬಾನ ಈ ಕಲ್ಪನೆಯೆ ಮನದ ಸೌಂದರ್ಯ.
ಯಾವುದತಿ ಸುಂದರವೊ ಅದೆ ಕಾಂತಿ ಆಗರವೊ!
ಬೆಡಗು ಕಾಮನಬಿಲ್ಲು – ಮುದ್ದುರಾಮ 250

ಉಸಿರಿರದ ಈ ತನುವಿಗೆಲ್ಲಿದೆಯೊ ಆವಾಸ?
ಕೊನೆಗೊಂದು ದಿನ ಹೆಣಕೆ ಮಣ್ಣೆ ಆಶ್ರಯವೊ!
ಪ್ರಾಣಿವರ್ಗಕೆ ಜಗದಿ ಗಾಳಿಯೇ ಸರ್ವಸ್ವ;
ವಾಯು ಸರ್ವಾಧೀಶ – ಮುದ್ದುರಾಮ 251

ಇಂದಿನಂತಿಲ್ಲ ಹೂ ನಾಳೆ ಉದ್ಯಾನದಲಿ;
ನವಬಣ್ಣ ಹೊಸಕಾಂತಿ ದಳದಳದ ಮೊಗದಿ.
ಸುಳಿದನೆಂದರೆ ಚೈತ್ರ ಸುಮನಮೋಹನ ಗಾನ;
ಹೂವು ದೇವನ ಮಿಂಚು – ಮುದ್ದುರಾಮ 252

ಇಷ್ಟೊಂದು ಹೂಗಳಲಿ ಚೆಂದ ಯಾವುದು ಎಂದು
ಅದ ಹೊತ್ತ ಲತೆಯ ನೀ ಕೇಳದಿರು ಮರೆತು.
ಫಲ ಹೊತ್ತ ತರುವೇನು ಅದ ಭಾರವೆನ್ನುವುದೆ?
ಹೂಹಣ್ಣು ತರುಹೊನ್ನು – ಮುದ್ದುರಾಮ 253

ಎಲರಿಂದ ಇದೆ ಉಸಿರು, ಎಲೆಯಿಂದ ಇದೆ ಹಸಿರು;
ಕೆಸರಿಂದ ಇದೆ ಕಮಲ ಸೊಂಪು ಕಂಪೆಲ್ಲ.
ಮುಗಿಲಿಂದ ಜಲಧಾರೆ, ನೂಲಿಂದ ಚೆಲುಸೀರೆ;
ತಳಿರಿಂದ ಇದೆ ಮಲರು – ಮುದ್ದುರಾಮ 254

ಆಗಸದಿ ಸಂಚರಿಪ ಹಕ್ಕಿಗಿರುವುದೆ ದಿಗಿಲು?
ಸದ್ದಿರದೆ ನಿದ್ರಿಸದೆ ಸೇರಿ ಗೂಡನ್ನು?
ಈ ನೆಲದ ಮನುಜರಿಗೆ ಏಕಿಷ್ಟು ಧಾವಂತ?
ಖಗ ನಿರಾಳತೆ ವಾಸಿ – ಮುದ್ದುರಾಮ 255

ಕಡಲ ಬಳಿ ಬಂದವನ ಕೇಳಿ ಅಲೆ ಮೊರೆಯುವುದೆ?
ಮುಡಿವವನ ಕೇಳಿ ಮೊಗ್ಗು ತಾ ಬಿರಿಯುವುದೆ?
ಕಡಿವವನ ಕರೆ ಕೇಳಿ ಶ್ರೀಗಂಧ ನೆರೆಯುವುದೆ?
ಗುಡಿ ಪೂಜೆ ಕೇಳುವುದೆ? – ಮುದ್ದುರಾಮ 256

ಜಲ ಬತ್ತಿಹೋದಾಗ ಚಿಲುಮೆ ಕತೆ ಮುಕ್ತಾಯ;
ನೆಲ ಬಂಜರಾದಾಗ ಹಸಿರಿನವಸಾನ.
ಎಲೆ ಸೋತು ನಿಂತಾಗ ಹೂಬಣ್ಣವೇ ಮಾಯ;
ಮಲೆ ಇದ್ದರಿದೆ ತಂಪು – ಮುದ್ದುರಾಮ 257

ಹಗಲಲ್ಲಿ ರವಿಯಂತೆ ಇರುಳಲ್ಲಿ ನಕ್ಷತ್ರ;
ಎಲೆಮೇಲೆ ಹನಿಯಂತೆ ಕಣಿವೆಯಲಿ ಮಂಜು.
ಹಸಿರುಸಿರ ಬಯಲಂತೆ ಬಿಳಿತೊರೆಯ ಹಿರಿಗಡಲು;
ಮಳೆಯಂತೆ ಹನಿನಾದ – ಮುದ್ದುರಾಮ 258

ಎಲ್ಲಿಯೋ ಯಾವುದೋ ಕಲ್ಲುಬಂಡೆಯ ಸೀಳು
ಮಂದಿರದ ಚೆಲುವಾದ ಮೂರ್ತಿಯಾಗುವುದು.
ಭೂಗರ್ಭದಲ್ಲೆಂಥ ಬೆರಗುಶಿಲೆ ಅಡಗಿಯೊ!
ಇಳೆ ನೆಲದಿ ಇದೆ ರತ್ನ – ಮುದ್ದುರಾಮ 259

ನೋಡು ಆಗಸದತ್ತ; ಎಂಥ ಚೆಲುವಿನ ಚಿತ್ರ!
ಬಚ್ಚಲತ್ತಲೆ ಸತತ ಮೊಗಮಾಡುವೇಕೆ?
ನಗುವ ಪುಷ್ಪವ ಕಾಣು; ಮರೆ ನೂರು ಮುಳ್ಳುಗಳ.
ತರದು ಸರಸವ ವಿರಸ – ಮುದ್ದುರಾಮ 260

ಧಾರೆ ಎರೆ ಪ್ರೀತಿಯನು ಅಂಗಳದ ಹೂಗಿಡಕೆ;
ನಗುತ ನಂದನ ಆಗ ಈ ಹಚ್ಚಹಸಿರು.
ಅರ್ಥವಾದೀತೇನೊ ಗಿಡಕೆ ಮನುಜರ ಪ್ರೀತಿ!
ಮಾತಾಡು ಲತೆಯ ಜೊತೆ – ಮುದ್ದುರಾಮ 261

ದೇವ ಕೊಟ್ಟಿಹನಿಂಥ ನಗೆಯ ಸುಂದರ ಮೊಗವ;
ಮುನಿಸಿಗೊಲಿದೊಲಿದು ಗಂಟಿಕ್ಕಿಕೊಳ್ಳದಿರೊ!
ನಿನ್ನ ಅನುಸರಿಸಿದರೆ ಹೂ ಬಿರಿದು ನಲಿಯುವುದೆ?
ಕಲಿ ಪಾಠ ಹೂವಿಂದ – ಮುದ್ದುರಾಮ 262

ಹರಿವ ತೊರೆ ಜಲದ ಜೊತೆ ಮೆಲ್ಲ ನೀ ಸಂಚರಿಸು
ಹಕ್ಕಿ ಹಾರುವ ತೆರದಿ ನೀಲಿ ಬಾನಿನಲಿ.
ಗುರುತಿಸುತ ತಿರುವುಗಳ ನಗು ನೋಡಿ ಆ ಬೆರಗ;
ಹರಿವ ನದಿ ಈ ನೀರೆ – ಮುದ್ದುರಾಮ 263

ಮಾಗಿ ಬಂದಿತು ಎನುತ ನಡುಗಿ ನರಳುವ ಬದಲು
ನೆನೆ ಚೈತ್ರ ಚೈತನ್ಯ; ಅದು ಜೀವಕಾಂತಿ.
ನಕಾರತೆಯೇ ಕೆಸರು; ಸಕಾರತೆಯೇ ಕಮಲ.
ಮಿನುಗುತಾರೆಯ ನೋಡು – ಮುದ್ದುರಾಮ 264

ವಿಸ್ತಾರ ಸಂಭ್ರಮದ ಎಂಥ ನೀಲಾಕಾಶ!
ಈ ಬಯಲಿನಲ್ಲೆಂಥ ನಕ್ಷತ್ರಮಾಲೆ!
ಹಕ್ಕಿ ಚಿಲಿಪಿಲಿ ನಡುವೆ ಎಂಥ ಮುಗಿಲಿನ ದೃಶ್ಯ!
ಈ ಬಾಳ್ಗೆ ಸಾಕಿಷ್ಟು! – ಮುದ್ದುರಾಮ 265

***

ಬೋಳುಮರ ಚಿಗುರಿದರೆ ಅದು ಚೈತ್ರದಾಗಮನ;
ಹೂ ನಕ್ಕು ನಲಿದರದೆ ಸೊಗದ ಸಲ್ಲಾಪ.
ಹಕ್ಕಿ ಚಿಲಿಪಿಲಿಯಿಂದ ನವನಾದ ಸಂಚಾರ;
ಜೀವ ನವನಾವೀನ್ಯ – ಮುದ್ದುರಾಮ 266

ಮಾಗಿ ಚಳಿ ಕಳೆದೀಗ ಕಾಲಿಡುತಲಿದೆ ಚೈತ್ರ;
ಹಸಿರೆಲೆಯ ಸಿರಿಸೊಂಪು ಸಂಭ್ರಮಕೆ ನಾಂದಿ.
ಹೂಗೊಂಚಲಿನ ನಡುವೆ ಇದೆ ಭ್ರಮರ ಝೇಂಕಾರ;
ಋತುಸಮಯ ಋತಕೃಪೆಯೊ! – ಮುದ್ದುರಾಮ 267

ಶ್ರಾವಣದ ಹನಿಮಣಿಯ ಅಂಚಿನಲಿ ಭಾದ್ರಪದ;
ಆಶ್ವಯುಜ ಕಣ್ಣಲ್ಲಿ ಆನೆ ಅಂಬಾರಿ.
ಕಾರ್ತೀಕ ಇರುಳಿನಲಿ ಸಿರಿಹಣತೆ ಮಿನುಮಿನುಗು;
ಮಾಸ ಮಾಸದೆ ಮೆರುಗು – ಮುದ್ದುರಾಮ 268

ಎಲೆ ಚಿಗುರಿದರೆ ಚೈತ್ರ ; ಎಲೆ ಉದುರಿದರೆ ಗ್ರೀಷ್ಮ;
ಮಳೆ ಸುರಿಯೆ ಶ್ರಾವಣವೊ ಆಷಾಢ ಬಳಿಕ.
ಚಳಿ ನಡುಕ ಸುಳಿದರದೆ ಮಾರ್ಗಶಿರದಂಕುರವೊ!
ಬೆಳಕು ಬರೆ ಕಾರ್ತಿಕ – ಮುದ್ದುರಾಮ 269

ಹೂವೊಂದು ಬಾಡಿದರೆ ಅರಳದೇ ಇನ್ನೊಂದು?
ಎಲೆ ಮುದುರಿ ಉದುರಿದರೆ ಚಿಗುರದೇ ರೆಂಬೆ?
ತರು ಸ್ಫೂರ್ತಿಸಂಕೇತ; ಬೇರು ರಸವಾಹಿನಿಯೊ!
ನವನವತೆ ಋತುರೀತಿ – ಮುದ್ದುರಾಮ 270

ಬಾಡಿ ಬೀಳದೆ ಹಳತು ನವಚಿಗುರಿಗೆಡೆಯೆಲ್ಲಿ?
ಹಿಂದಿನದು ನಿಜದಿ ಮುಂದಿನುದಯಕೆ ನಾಂದಿ.
ಹಳತರವಸಾನದಲಿ ಇದೆ ಹೊಸತರಾಗಮನ;
ಸಹಜ ಋತುಮಾರ್ಪಾಡು – ಮುದ್ದುರಾಮ 271

ಸ್ವಚ್ಛ ಗಾಳಿಯ ಕೊಟ್ಟ, ಉಸಿರಾಡುವಂತಾದೆ;
ಚೆಂದ ಬೆಳಕಿತ್ತ, ನೀ ಕಾಣುವಂತಾದೆ.
ತಿಳಿಯಾದ ಜಲವಿತ್ತ, ಕುಡಿದು ನೀ ಸುಖಿಯಾದೆ;
ಈ ಸಿರಿಯ ಕೆಡಿಸುವುದೆ? – ಮುದ್ದುರಾಮ 272

ಹದಗೆಡಿಸೆ ಹವಮಾನ ಸಿಲುಕದಿರು ಸಂಕಟಕೆ.
ಕಾಡುವುದು ಲೋಕವನೆ ಬೇಸಿಗೆಯ ಬೇಗೆ.
ಕಡಲುಕ್ಕಿ ಕರೆ ಮೀರಿ ಊರು ದಿಕ್ಕಾಪಾಲು;
ತಡೆಗಟ್ಟು ಮಾಲಿನ್ಯ – ಮುದ್ದುರಾಮ 273

***

ಈ ಜಗದ ಮೊದಲಲ್ಲಿ ಯಾರಿದ್ದರೇನಿತ್ತು?
ತಾರೆ ಉದಿಸಿತು ಎಂತು ಮೊದಲು ಅಂಬರದಿ?
ಸಾಗರದಿ ತೆರೆ ಮೊದಲು ರೂಪ ತಾಳಿತು ಎಂತು?
ಮೊದಲ ಮನುಜನದಾರು? – ಮುದ್ದುರಾಮ 274

ಕೋಟಿ ಸೂರ್ಯಪ್ರಕಾಶ ಭವ್ಯ ದಿವ್ಯೋಲ್ಲಾಸ;
ಜ್ಯೋತಿ ಸ್ಪಂದನವೆ ವಿಶ್ವದರ್ಶನವೊ!
ತಮಕೆ ತೋರುವ ಬೆಳಕೆ ಸ್ಫೋಟವಾದದ ಮೂಲ;
ಓಂಕಾರದಿಂ ಲೋಕ! – ಮುದ್ದುರಾಮ 275

ತಂಗಾಳಿ ಇಲ್ಲಿರಲು ಇದೆ ಬಿಸಿಲ ಧಗೆ ಅಲ್ಲಿ;
ಇದೆ ಇಲ್ಲಿ ಬರಗಾಲ, ಸೋನೆಮಳೆ ಅಲ್ಲಿ.
ದಾರಿದ್ರ್ಯ ಕಳೆ ಇಲ್ಲಿ; ಸಮೃದ್ಧಿ ತೆನೆ ಅಲ್ಲಿ;
ಸಮಭಾವ ದನಿಯೆಲ್ಲಿ? – ಮುದ್ದುರಾಮ 276

ಮರಳುಗಾಡಿನಲೆಂಥ ಸುಡುಬಿಸಿಲ ಕಡುಬೇಗೆ!
ಹಿಮಗಿರಿಯ ಶಿಖರದಲಿ ಎಂಥ ಶೀತಲತೆ!
ಇಲ್ಲಿ ಸೆಕೆ, ಅಲ್ಲಿ ಚಳಿ! ಒಂದೊಂದು ಒಂದು ಬಗೆ!
ಹೇಗಾಯಿತೀ ವಿಶ್ವ? – ಮುದ್ದುರಾಮ 277

ಕಣ್ಗೆ ಕಾಣದುದೆಲ್ಲ ಇಲ್ಲವೆಂದೂಹಿಪುದೆ?
ಇದೆ ಎಷ್ಟೊ ಜನರರಿವಿಗಿನಿತು ಬಾರದುದು.
ಅಂದಿಲ್ಲವೆಂದದ್ದು ನಾಳೆ ಗೋಚರಿಸೀತು!
ವಿಶ್ವ ಮಹತಿಗೆ ಸಾಕ್ಷಿ – ಮುದ್ದುರಾಮ 278

ಬಣ್ಣದೋಕುಳಿ ತೋರಿ ಎಂಥ ಅಂಬರಚಾಪ!
ಮುಗಿಲ ತೇಲಿನಲೆಂಥ ಯಕ್ಷಸಂದೇಶ!
ಗಿರಿಪಂಕ್ತಿಯಲ್ಲೆಂಥ ಮಧುರ ನಾದನಿನಾದ!
ಯಾರಿತ್ತರೀ ಸೊಬಗ! – ಮುದ್ದುರಾಮ 279

ಕಂಪಿನೆಸಳುಗಲೆಲ್ಲ ಪ್ರೀತಿ ತೋಟದ ಕೊಡುಗೆ;
ಸವಿಹಣ್ಣುಗಳಿಗೆಲ್ಲ ರೆಂಬೆ ಆಧಾರ,
ಚಿಗುರುಎಲೆಗಳಿಗೆಲ್ಲ ಜೀವರಸವೇ ಮೂಲ;
ಹಿಂಬದಿಯಲಾರಿಹರೊ!? – ಮುದ್ದುರಾಮ 280

ಈ ಕಣ್ಣು ಹೆಬ್ಬೆರಳು ಒಂದರಂತೊಂದಿಲ್ಲ;
ಈ ಪ್ರಕೃತಿಸೃಷ್ಟಿಯಲಿ ಒಂದೊಂದು ಭಿನ್ನ.
ವಿಜ್ಞಾನಪ್ರಗತಿ ಇದ ಪ್ರತಿಮಾಡಲಾಗಿಲ್ಲ;
ವಶವಾಗದಿಹುದೆಷ್ಟೊ! – ಮುದ್ದುರಾಮ 281

ಬಾನಲ್ಲಿ ಕೆಂಪಡರಿ ಸೂರ್ಯ ಉದಿಸುವ ಮುನ್ನ
ಏನೊಂದು ನೀರವತೆ! ಸದ್ದಿರದ ಶಾಂತಿ!
ಬೆಳಕು ಪಸರಿಸಿದಂತೆ ಸದ್ದುಗದ್ದಲ ಏಕೆ?
ಮತ್ತೆ ಕತ್ತಲ ಮೌನ! – ಮುದ್ದುರಾಮ 282

ಇರುಳಿಗೆಳಸದೆ ಹಗಲು ಸೊಗಯಿಪುದೆ ದಿನನಿತ್ಯ?
ನವಿಲು ನರ್ತಿಪುದೆ ಗರಿಹೊತ್ತು ದಿನವೆಲ್ಲ?
ಮುಗಿಲು ಮಳೆಗರೆಯುವುದೆ ವಿಶ್ರಮಿಸದೇ ಇನಿತು?
ಬಿಸಿಲೊಮ್ಮೆ, ನೆರಳೊಮ್ಮೆ – ಮುದ್ದುರಾಮ 283

ಬಾನಿಂದ ಕೆಳಬಿದ್ದು, ಕಡಲಿನೊಳಗೊಂದಾಗಿ
ಜಲವಾಗದೇ ತಾನು ಆ ಆಲಿಕಲ್ಲು?
ವಿವಿಧ ನದಿ ನೀರೆಲ್ಲ ಒಂದೆ ಸಾಗರದೊಳಗೆ;
ಭೇದವೆಲ್ಲಿದೆ ಇನ್ನು? – ಮುದ್ದುರಾಮ 284

ಕೇಳಿ ಬರುವುದೆ ಒಳಗೆ ಕವಿಕಲ್ಪನೆಯ ಪಂಕ್ತಿ?
ಕೇಳಿ ತೂರುವುದೇನು ಕೆಂಪುರವಿಕಿರಣ?
ಕೇಳಿ ಬಿರಿವುದೆ ಮೊಗ್ಗು ತರುವ ಪರಿಮಳದಂದ?
ಕೇಳಿಯೋ ಜಗದಾಟ! – ಮುದ್ದುರಾಮ 285

ಇದೆ ಗುಪ್ತ ಸೌಂದರ್ಯ ಗಗನ ಸಮ್ಮುಖದಲ್ಲಿ;
ಇದೆ ಕಾಂತಿ ಕಂಪು ಕುಸುಮ ಕೌಮುದಿಯಲ್ಲಿ.
ಇದೆ ಶಾಂತಿ ಸಂತೋಷ ಶರಧಿ ಸನ್ನಿಧಿಯಲ್ಲಿ;
ಇದೆ ಸೌಖ್ಯ ಬಾಳಲ್ಲಿ – ಮುದ್ದುರಾಮ 286

ಬರಗಾಲ ಅಲ್ಲಿರದೆ ಇಲ್ಲೇಕೆ ನುಸುಳುವುದೊ!
ಇಲ್ಲಿ ಬಿಸಿಲಿನ ಬೇಗೆ; ಅಲ್ಲಿ ಚಳಿಗಾಲ.
ತೊರೆ ಬತ್ತಿದರೆ ಇಲ್ಲಿ ಜಲಪ್ರಳಯವೊ ಅಲ್ಲಿ!
ಏಕಾಗುವುದೊ ಹೀಗೆ? – ಮುದ್ದುರಾಮ 287

ಶೈತ್ಯವಿದ್ದರೆ ಇಲ್ಲಿ ಅಗ್ನಿಸೆಕೆಯೊಂದಲ್ಲಿ!
ಇಲ್ಲೊಂದು ಬಿರುಗಾಳಿ; ಅಲ್ಲಿ ತಂಪು ಹವೆ!
ಇಲ್ಲಿ ವನಸಿರಿ ನೋಟ; ಬರಡಾದ ನೆಲ ಅಲ್ಲಿ!
ಯಾರು ಹೊಣೆ ಇದಕಿಲ್ಲಿ? – ಮುದ್ದುರಾಮ 288

ಮೊಗ್ಗು ಬಿರಿವುದು ಹೇಗೆ? ಹಕ್ಕಿ ಉಲಿವುದು ಹೇಗೆ?
ತಂತಿ ಮಿಡಿವುದು ಹೇಗೆ? ರಸಲೀಲೆ ಹೇಗೆ?
ಕಂದ ಕಲಿವುದು ಹೇಗೆ? ಗಂಧ ಒಲಿವುದು ಹೇಗೆ?
ಹೇಗೆನುವುದೇ ಚೋದ್ಯ! – ಮುದ್ದುರಾಮ 289

ಮೊಗ್ಗಿನಲಿ ನರುಗಂಪು ಮನೆಯ ಮಾಡಿದೆ ಎಂತು?
ಅಡಗಿ ಕುಳಿತಿದೆ ಎಂತು ಕಾಷ್ಠದಲಿ ಅಗ್ನಿ?
ಮಾವು ಬೀಜದೊಳೆಂತು ಇದೆಯೊ ರಸರುಚಿ ಅವಿತು?
ಚೋದ್ಯ ಈ ಜಗನಿಲುವು – ಮುದ್ದುರಾಮ 290

ಪಾರಿಜಾತದ ನವಿರು, ಸಂಪಿಗೆಯ ನರುಗಂಪು
ಕೇಳದಿರು ತಾಳೆಗರಿಗೇಕಿಲ್ಲವೆಂದು.
ಇಂದ್ರಚಾಪವೆ ಬೇರೆ! ತಾರೆ ಕಾಂತಿಯೆ ಬೇರೆ!
ಲೋಕಲೀಲೆ ಅನನ್ಯ – ಮುದ್ದುರಾಮ 291

ಹೂವೊಂದು ಮಿಡಿಯಾಗಿ ಹಣ್ಣಾಗುವುದು ಹೇಗೆ?
ಬೀಜ ಹೆಮ್ಮರವಾಗಿ ನಿಲುವ ಬಗೆ ಹೇಗೆ?
ಬಯಲೊಂದು ಬನವಾಗಿ ಕಂಗೊಳಿಪ ಪರಿ ಹೇಗೆ?
ಇಹುದೆ ವಿಸ್ಮಯ ಒಳಗೆ? – ಮುದ್ದುರಾಮ 292

ಕತ್ತಲಾದಂತೇಕೆ ವಸ್ತು ಕಾಣದು ಕಣ್ಗೆ?
ಬೆಳಕಿನಲಿ ಅದೆ ಮತ್ತೆ ಗೋಚರಿಪುದೇಕೆ?
ವಿಶ್ಲೇಷಣಾಪರಿಧಿಗೆಟುಕದಿಹುದೆಷ್ಟೆಷ್ಟೊ!
ಜಗದ ಬಗೆ ಮಿಗೆ ಗೂಢ – ಮುದ್ದುರಾಮ 293

ಕಡಲುಪ್ಪು ಜಲ ಹೇಗೆ ಭೂರಸದಿ ಶೋಭಿಸಿತು?
ಗಾಳಿ ಸುಳಿಯಿತು ಹೇಗೆ ಮನುಜನೊಳ ಎದೆಗೆ?
ಹೂ ತನ್ನ ಚೆಲುವಿಂದ ನಯನ ಸೆಳೆಯಿತು ಹೇಗೆ?
ಇಹುದೆ ಉತ್ತರ ಇದಕೆ? – ಮುದ್ದುರಾಮ 294

ಹೊಸಹೊಸತ ಕೊಡಬಲ್ಲ ಶಕ್ತಿ ಸೃಷ್ಟಿಗೆ ಮಾತ್ರ;
ಹೂಬಣ್ಣ ಮುಗಿಲ ಗತಿ ಒಂದೊಂದು ಭಿನ್ನ.
ಆಲಸ್ಯ ಹಳಸಿಕೆಯ ಮಾತೆಲ್ಲಿ ಪ್ರಕೃತಿಯಲಿ?
ಸೊಬಗು ನಿಯತಿಯ ಲೀಲೆ – ಮುದ್ದುರಾಮ 295

ಗಗನದಂಚನು ಯಾರು ನೋಡಿಹರೊ ಪಯಣದಲಿ?
ಸುಗಮವಲ್ಲವೊ ಇಲ್ಲಿ ಈ ಸೃಷ್ಟಿ ಅರಿವು!
ಉಗಮ ಅಂತ್ಯದ ಬೇರು ಎಲ್ಲೆಲ್ಲಿ ಹುದುಗಿದೆಯೊ!
ಸೊಗನಿಚಯ ಈ ಲೋಕ – ಮುದ್ದುರಾಮ 296

ಕಣ್ಣ ತೆರೆದರೆ ಬೆಳಕು; ಮುಚ್ಚಿದರದುವೆ ಕತ್ತಲು.
ಇದುವೆ ಹೊರಲೋಕ ಸಾಮಾನ್ಯ ನಿಯಮ.
ಚಿತ್ತದೊಳನೋಟದಲಿ ಹಗಲು ಇರುಳುಗಳಿಲ್ಲ;
ಶೂನ್ಯ ಚಿತ್ರಭೆಲಹರಿ – ಮುದ್ದುರಾಮ 297

ಬೀಜದಲಿ ಪುಷ್ಪವಿದೆ; ಇದೆ ಹಣ್ಣು ಅದರೊಳಗೆ.
ಮಣ್ಣಿಲ್ಲದಿರೆ ಎಲ್ಲಿ ಹೂವು ಹಣ್ಣೆಲ್ಲ?
ಕಾಣದುದರಿಂದೆಂಥ ಸಾಕಾರದಾಯಾಮ!
ಶೂನ್ಯದಿಂದದ್ಭುತವೊ! – ಮುದ್ದುರಾಮ 298

ಜೀವರಸ ಪ್ರವಹಿಸುವ ಬೇರು ಕಾಣದು ಕಣ್ಗೆ;
ಸಂಭ್ರಮದ ತಳಿರೆಲ್ಲ ಬಾಡುವುದು ಕೊನೆಗೆ.
ಹೂವು ತೂರುವ ಕಂಪು ನಿಲುವುದೆದೆಯಾಳದಲಿ;
ತರು ತರುವ ಮುದವೆ ಮುದ – ಮುದ್ದುರಾಮ 299

ಜಲ ರಭಸದಿಂ ಸುರಿದು ಶಿಲೆ ನುಣ್ಣಗಾಗಿಸದೆ?
ಮಳೆ ಬಿದ್ದು ಗಟ್ಟಿ ನೆಲವ ಹಸಿರಾಗಿಸದೆ?
ಅಲೆ ಎದ್ದು ಸಾಗರದ ಶೋಭೆಯನು ಹೆಚ್ಚಿಸದೆ?
ವೈಚಿತ್ರ್ಯ ಎಷ್ಟೊ ಇದೆ! – ಮುದ್ದುರಾಮ 300

ಹಕ್ಕಿ ಹಾರಿತು ಇಲ್ಲಿ, ಚುಕ್ಕಿ ಮೂಡಿತು ಅಲ್ಲಿ;
ಹೂವು ಅರಳಿತು ಇಲ್ಲಿ, ಮಳೆ ಸುರಿಯಿತೆಲ್ಲೊ!
ತಾರೆ ಮಿನುಗಿದರಲ್ಲಿ ಕಂದ ನಗುತಿಹನಿಲ್ಲಿ!
ಋಣಾನುಬಂಧವೊ ಇದು! – ಮುದ್ದುರಾಮ 301

ರೇಷ್ಮೆಗೂ ಮಿಗಿಲಾದ ನಯದ ಎಳೆಎಳೆ ಹೆಣೆದು
ಜಾಲ ರಚಿಸುವ ಜೇಡ ವಿಸ್ಮಯಕೆ ಸಾಕ್ಷಿ.
ಅದೆಂಥ ನಲಿದಾಟ ಇದರ ನಂಬಿಕೆ ಲಾಸ್ಯ!
ಕಾಲಸೋಜಿಗ ಜೇಡ – ಮುದ್ದುರಾಮ 302


ಮೇರುಗಿರಿ ಆ ಬಯಲ ದಟ್ಟಿರುಳ ಕತ್ತಲಲಿ
ಮಿಣುಕುಹುಳಗಳ ಮಿಂಚು ನಕ್ಷತ್ರಕಾಂತಿ.
ಜೀರುಂಡೆ ಆ ನಾದ ಸಂಗೀತದಾಮೋದ;
ಪ್ರಕೃತಿ ದಿವ್ಯತೆ ತೋರ್ಕೆ – ಮುದ್ದುರಾಮ 303

ಎಷ್ಟೆ ವರ್ಣಿಸು ನಭವ ಅಂದಚೆಂದದಿ ನೀನು;
ಕಂಡಂತೆ ತೋರುವುದೆ ಅದರ ವಿಸ್ತಾರ?
ದರ್ಶನದ ಹೆಚ್ಚಳವ ತಿಳಿಸಲಾಗದು ಚಿತ್ರ;
ಮಬ್ಬು ಚೆಲುಬೆಳಕಲ್ಲ – ಮುದ್ದುರಾಮ 304

ಮಿನುಗಿ ಮುದ ನೀಡಲಿಕೆ ತಾರೆ ಧನ ಬೇಡುವುದೆ?
ರವಿ ಬೆಳಕ ಕೊಡುವುದಕೆ ತೆರಿಗೆ ಕೇಳುವನೆ?
ಅಡ್ಡಾಡಲಿಕೆ ಕಣಿವೆ ಸುಂಕವನು ಬಯಸುವುದೆ?
ನೂರೆಂಟು ಋಣ ನಿನದೊ! – ಮುದ್ದುರಾಮ 305

ಉಸಿರ ತರುವೀ ಗಾಳಿ ಬೇಡುವುದೆ ಸುಂಕವನು?
ಆಶಿಪುದೆ ಧನಕನಕ ಬೆಳಕೀವ ಕಿರಣ?
ಜಲ ತರುವ ಮುಗಿಲೇನು ಬಯಸುವುದೊ ನಿನ್ನಿಂದ?
ಋಣಿ ನೀನು ಈ ಜಗಕೆ – ಮುದ್ದುರಾಮ 306

□



4

ಕಾಲ ಆರದ ಹಣತೆ

ಎಲ್ಲಿಂದಲೋ ತಂದು ಬತ್ತಿ ಇಡುವರು ಯಾರೊ!
ಎಣ್ಣೆತೆನೆ ತಂದಾರೊ ತೈಲ ಎರೆಯುವವರು.
ಮತ್ತಾರೊ ಹೊತ್ತಿಪರು; ಸೊಡರು ಬೆಳಕಾಗುವುದು;
ಕಾಲ ಆರದ ಹಣತೆ – ಮುದ್ದುರಾಮ

ಕೂಡಿ ಬಂದರೆ ಕಾಲ ಮಿಡಿ ಕಚ್ಚಿ ಅದೆ ಹಣ್ಣು;
ಮಿಡಿದ ತಂತಿಯಲೆಲ್ಲ ರಾಗವೈಭವವೊ!
ಇಲ್ಲದಿರೆ ಎಷ್ಟೆ ಅಗೆ; ಬಾವಿಯಲಿ ನೀರಿಲ್ಲ.
ಕಾಲಕರುಣೆ ಅನನ್ಯ – ಮುದ್ದುರಾಮ 307

ಬಯಸದಿರು ಬೇಡದಿರು ಕೇಳದಿರು ಕಿರುಚದಿರು;
ಅದರಂತೆ ಇರಲಿ ಅದು; ಬಿಟ್ಟುಬಿಡು ಮೆಲ್ಲ.
ಆಗಬೇಕೆಂದಿದ್ದರಾಗುವುದು ನಿನ್ನಂತೆ;
ಕಾಲಕರುಣೆ ಅಪಾರ – ಮುದ್ದುರಾಮ 308

ವಿಘ್ನ ನೂರೆಂಟಿರಲಿ, ಲಗ್ನ ವಿಷಮವೆ ಇರಲಿ
ಏನಾಗಬೇಕೊ ಅದು ಆಗುವುದು ಖಚಿತ.
ನಿಯತಿ ವರದಂತೆ ಈ ಕಾಲ ಲೀಲೆವಿನೋದ;
ಕಾಲದನಿ ಮೋಹಕವೊ! – ಮುದ್ದುರಾಮ 309

ಪದಮಿಲನದಲಿ ಕವನ ಉದಿಸಿದಾ ಹೊತ್ತಿನಲೆ
ಇದೆ ಅದಕೆ ಹಾಡಾಗಿ ಮೆರೆವ ಸೌಭಾಗ್ಯ.
ಎದೆಯಲುದಿಪುದು ಪ್ರೀತಿ ಮೊದಲ ಪರಿಚಯದಲ್ಲೆ!
ಚದುರನೋ ಈ ಕಾಲ! – ಮುದ್ದುರಾಮ 310

ಬರುವ ಕಾಲಕೆ ತಾನೆ ಬಹುದು ನಡೆಮಡಿ ಹಾಸಿ;
ಕಾಯದದು ಯಾರ ಪನ್ನೀರ ಸ್ವಾಗತಕೆ.
ಮೂಡಿ ಕಾಮನಬಿಲ್ಲು ತರುವುದತಿ ಬಣ್ಣಗಳ;
ಕಾಲ ವಿಸ್ಮಯಕೇಂದ್ರ – ಮುದ್ದುರಾಮ 311

ಯಾವುದಾವಾಗೆಮಗೆ ಬೇಕಾಗುವುದೊ ಏನೊ!
ಮೂದಲಿಸದಿರು ಅದನು ಕೊಂಕುನುಡಿಯಿಂದ.
ಅಪಕಾರವೆಸಗಿದವರಿಗುಪಕಾರ ಮಾಡುತಿರು;
ಕಾಲ ನಿರ್ಧಾರಗುರು – ಮುದ್ದುರಾಮ 312

ಬಾಳ ಕನ್ನಡಿಯಲ್ಲಿ ಕಾಲಗತಿ ಬಿಂಬಿತವೊ!
ಕಾಲಕ್ಕೆ ಕೊನೆಯಿಲ್ಲ, ಇದೆ ಜೀವನಕ್ಕೆ.
ನಶ್ವರತೆ ಸಾರಲಿಕೆ ಗಡಿಯಾರವೇ ಸಾಕ್ಷಿ;
ಗಡಿಯಾರ ಗುರುವೆಮಗೆ – ಮುದ್ದುರಾಮ 313

ಹಳತೇನು ಹೊಸತೇನು ಸತ್ಯವನು ಅರಿತವಗೆ?
ಅರಳುವಿಕೆ ಬಾಡುವಿಕೆ ನಿತ್ಯ ಹೊಸತ್ವ.
ಅಲೆಮೊರೆತದಲ್ಲಿರದೆ ಹಳೆಕಣದ ನವರೂಪ?
ಕಾಲ ಚಿರಸಂಭ್ರಮವೊ! – ಮುದ್ದುರಾಮ 314

ನದಿಜಲದಿ ಕೈ ಅದ್ದಿದಂತಿರದು ಮರು ಅದ್ದು;
ಇದ್ದಂತೆ ಈ ನಿಮಿಷ ಇರದು ಮರುನಿಮಿಷ.
ಈ ಕಾಲವರ್ತನೆಯೆ ಉಪಶಮನ ದುಃಖಕ್ಕೆ;
ಕಾಲದಮರತೆ ಅರಿಯೊ! – ಮುದ್ದುರಾಮ 315

ಬೀಜ ನೆಲದಲಿ ಮೊಳೆತು ತಳಿರಾಗಿ ಹೂವಾಗಿ
ಬೀಜ ಸಂಚಯ ಮತ್ತೆ ಫಲರೂಪದಲ್ಲಿ.
ಆಕ್ಷರಕೆ ನಾವೀನ್ಯ ವಿವಿಧ ಅಂಕಿತದಲ್ಲಿ;
ಕಾಲ ಅಕ್ಷಯ ಕಾಣ್ಕೆ – ಮುದ್ದುರಾಮ 316

ಕೂಡಿ ಬರದಿರೆ ಕಾಲ ಕಂಕಣದ ಕರೆ ಎಲ್ಲಿ?
ವೇಗ ಒಡಗೂಡದಿರೆ ಕಡಲಿನಲೆ ಎಲ್ಲಿ?
ವಾಣಿ ಬಂದಪ್ಪದಿರೆ ಅಕ್ಷರಕೆ ರಸವೆಲ್ಲಿ?
ಕಾಲ ಮಿಂಚಿನ ಪುಂಜ – ಮುದ್ದುರಾಮ 317

ಸೂರ್ಯನೆದುರಲಿ ನಿಂತ ಮನುಜ ನೆರಳಿನ ಉದ್ದ
ಬರುಬರುತ ಏಕೆ ವ್ಯತ್ಯಸ್ತವಾಗುವುದೊ!
ಆಯುಷ್ಯ ಕ್ಷೀಣಿಸುತ ಶೂನ್ಯವಾಗುವುದೇಕೆ?
ಕಾಲ ಅಚ್ಚರಿ ತತ್ವ – ಮುದ್ದುರಾಮ 318

ಕೊಬ್ಬಿದರೆ ತಲೆಕುಟುಕಿ ಎಚ್ಚರಿಸುವುದು ಕಾಲ;
ಸೊಕ್ಕಡಗಿಸದೆ ಒಡನೆ ಮೀಸೆ ತಿರುವಿದರೆ?
ಮಣ್ಣು ಮುಕ್ಕಿಸದಿಹುದೆ ಸಮರದಲಿ ಮೆರೆದವರ?
ಕಾಲ ಜಗ ಸರದಾರ – ಮುದ್ದುರಾಮ 319

ಲೋಕವನೆ ಜಾಲಾಡಿ ಅರೆದು ಕುಡಿವುದು ಕಾಲ;
ಕಾಲ ಕೊನೆಗಾಣಿಸುವುದೆಲ್ಲರನು ಕಡೆಗೆ.
ತೂಕಡಿಸುತಿರೆ ಮಂದಿ ಎಚ್ಚರಿರುವುದು ಕಾಲ;
ಕಾಲ ಈ ಜಗದೊಡೆಯ – ಮುದ್ದುರಾಮ 320

ನಿನ್ನಿಷ್ಟ ಬಂದಂತೆ ಜನಿಸಲಾರೆ ಅದೆಂತೊ
ನೆನೆದು ಮರಣವ ಉಸಿರ ಕಿತ್ತೆಸೆಯಲಾರೆ.
ಹೊತ್ತು ಬಾರದ ಮುನ್ನ ತಣ್ಣಗಾಗದು ಜೀವ;
ಸರ್ವಾಧಿಪತಿ ಕಾಲ – ಮುದ್ದುರಾಮ 321

ಮುದಿತನದಿ ಬಡತನದ ಕಹಿಯುಂಡು ನರಳುತಿಹ
ನರ್ತಕಿಯ ಕಂಡಾಗ ಹಂಚಿಕೋ ನೋವ.
ಯವ್ವನದ ಆ ಚಿತ್ರ ಮಸುಕು ಮಸುಕೋ ಈಗ!
ಅತಿಕ್ರೂರಿ ಈ ಕಾಲ – ಮುದ್ದುರಾಮ 322

ಜಪಮಾಲೆ ಎಣಿಸಿದರೆ ವಿಧಿ ದೂರ ಸರಿಯುವನೆ?
ಮುನಿದು ದಿಟ್ಟಿಸಿದರೇಂ ತಾರೆ ಉರುಳುವುದೆ?
ಅಳುತಳುತಲಿರೆ ಕಾಲ ಎಸೆಯದಿರುವನೆ ಕುಣಿಕೆ?
ಕರುಣೆಪ್ರಿಯನೇ ಕಾಲ? – ಮುದ್ದುರಾಮ 323

ನೆತ್ತರಲಿ ಮಿಂದವರು, ಕದನದಲಿ ಗೆದ್ದವರು,
ಮಣಿಮುಕುಟಗಳ ಧರಿಸಿ ಮೆರೆದಾಡಿದವರು
ಏನಾದರವರೆಲ್ಲ ಈ ಕಾಲ ತಿರುವಿನಲಿ?
ಅರೆದು ನುಂಗದೆ ಕಾಲ? – ಮುದ್ದುರಾಮ 324

ಒಣಗೆ ಕಂಗಾಲಾಗಿ ಸೊರಗಿ ಬತ್ತಿದ ನದಿಗೆ
ಜಲ ಹರಿದು ಬರಬಹುದು ತೆರೆಯ ತೋರಲಿಕೆ.
ಈಗಾಗಲೇ ಸತ್ತ ಆ ಮೀನ ಕತೆಯೇನು?
ಕಾಲ ಶೋಕದ ಛಾಯೆ – ಮುದ್ದುರಾಮ 325

ಕಷ್ಟಮಳೆ ಸುರಿಸುರಿದು ಜೀವ ಕಂಗೆಟ್ಟಾಗ
ಹೊಸತೊಂದ ಕಾಣಲಿಕೆ ತೊಡಗು ನಿಷ್ಠೆಯಲಿ.
ನವ ಅರ್ಥ ಗೋಚರಿಸಿ ನೋವು ಮರೆವುದು ಬೇಗ;
ಗಾಯಮಾಯಕ ಕಾಲ – ಮುದ್ದುರಾಮ 326

ನೆಮ್ಮದಿಯೆ ಇಲ್ಲದಿರೆ ಎಷ್ಟು ಗಳಿಸಿದರೇನು?
ಇದ್ದದ್ದೆ ಚಡಪಡಿಕೆ ಹರಕೆಕುರಿಯಂತೆ.
ಬಾಳಗುಳ್ಳೆಯ ಗತಿಯ ಅರಿತಷ್ಟು ಒಳಿತೆಮಗೆ;
ಕಾಲ ಕ್ಷಣಿಕತೆ ಕುರುಹು – ಮುದ್ದುರಾಮ 327

ಬತ್ತಿ ತೈಲಗಳೆರಡು ಇರುವನಕ ದೀಪದಲೆ;
ಆರದಿರುವುದೆ ಸೊಡರು ಇದರ ಕೊರತೆಯಲಿ?
ನಮ್ಮ ಜೀವಿತ ಇಂತು ಹಣತೆಯಂತಿಹುದಲ್ತೆ!
ಕಾಲಶಿಖೆ ಪ್ರಜ್ವಲಿತ – ಮುದ್ದುರಾಮ 328

ಯಾವ ಗುರುಚರಣದಲಿ ಯಾವ ಅಂಗುಲಿಮಾಲ
ಶರಣಾಗುವನೊ ಬಿಸುಟು ಹಿಂಸೆಖಡ್ಗವನು!
ಯಾವ ಚಿತ್ತದಲೆಂತು ಮೂಡುವುದೊ ಅನುಕಂಪೆ!
ಪ್ರಜ್ಞೆ ಕಾಲಾತೀತ – ಮುದ್ದುರಾಮ 329

ಎಲ್ಲ ಬರೆದದ್ದೆಲ್ಲ ಬೆಳಕ ಕಂಡಿದೆ ಏನು?
ಬಿದ್ದ ಮಳೆಹನಿಯೆಲ್ಲ ಮೊಳಕೆ ತಂದಿದೆಯೆ?
ಬಾನತಾರೆಗಳೆಲ್ಲ ಒಂದೆ ಬಗೆ ಮಿನುಗಿವೆಯೆ?
ಎಲ್ಲ ಕಾಲಪ್ರಣೀತ – ಮುದ್ದುರಾಮ 330

ಕಣಿವೆ ಕಂದರ ಕಂಡು, ಕದಿರ ಕಾಂತಿಯ ಕಂಡು
ಕಂತುಚಾಪವ ಕಂಡು ಕತೆಯ ಕನ್ನಡಿಸು.
ಕಂಕಣದ ಕಣಕಣಿಕೆ ಕಡೆಗಣಿಸಿ ಕೊರಗದಿರು;
ಕುಡಿಮಿಂಚು ಕಾಲಕೃಪೆ – ಮುದ್ದುರಾಮ 331

ಸಾವು ಯಾರಿಗೆ ಹೇಗೆ ಕುಣಿಕೆ ಎಸೆವುದೊ ಕಾಣೆ;
ಅರೆನಿಮಿಷದಲ್ಲೊ, ವರುಷಗಟ್ಟಲೆಯೊ!
ಮರಣ ಹೀಗೇ ಎಂದು ಘಟಿಸಬೇಕೇನಿಲ್ಲ;
ಕಾಲಲೀಲೆ ವಿಚಿತ್ರ – ಮುದ್ದುರಾಮ 332

ಪಂಜರದ ಒಳಗೆ ತಾ ಜೋಪಾನ ಎಂದೆನುವ
ಅರಗಿಣಿಗೆ ಮಂಜರದ ಭಯವಿರದೆ ಮನದಿ?
ಸೊಡರು ಆರದೆ ಇಹುದೆ ಸಂತೆ ಬಿರುಗಾಳಿಯಲಿ?
ಸ್ಥಿರವೆನುವುದಾವುದಿದೆ? – ಮುದ್ದುರಾಮ 333

ಯಾವ ಸುಂದರ ಹೂವು ಬಾಡಿ ಕೆಳ ಬೀಳದಿದೆ?
ಯಾವ ದೊರೆ ಮಣಿಮುಕುಟ ಧರೆಯನಪ್ಪದಿದೆ?
ಯಾವ ಸೌಂದರ್ಯ ಮುಖ ತುಸು ಸುಕ್ಕುಗಟ್ಟದಿದೆ?
ಅಳಿಯದೆಯೆ ಯಾವುದಿದೆ? – ಮುದ್ದುರಾಮ 334

ತಾವೆ ಕಟ್ಟಿದ ಮನೆಯು, ಬರೆದೆಲ್ಲ ಹೊತ್ತಿಗೆಯ
ಜೊತೆಗೆ ಕೊನೆಯಲ್ಲಿ ಕೊಂಡೊಯ್ದುವರ ಕಾಣೆ.
ಬಂದಾಗ ಉಸಿರಿತ್ತು; ಅದು ಕೂಡ ಈಗಿಲ್ಲ.
ನಶ್ವರತೆ ಜಗನಿಯಮ – ಮುದ್ದುರಾಮ 335

ಯಾವುದನು ನಿರ್ಗಮನ ಕದವೆನ್ನುವೆಯೊ ನೀನು
ಇಹುದದುವೆ ಆಗಮನಕದವಾಗಿ ಕೂಡ.
ಹೋಗಲಿಕೆ ಬರುವುದಕೆ ತೆರೆದ ದಾರಿ ಅದೊಂದೆ;
ಕದವೊಂದೆ ಬಳಸಲಿಕೆ – ಮುದ್ದುರಾಮ 336

ಒಮ್ಮೊಮ್ಮೆ ಮೌನದಲಿ ನಮಗೆ ನಾವೇ ಮೆಲ್ಲ
ನಮ್ಮ ಸಾವಿನ ಬಗ್ಗೆ ಚಿಂತಿಸುವುದೊಳಿತು.
ಮೋಹ ಮರೆಯಾಗುತ್ತ ಅರಿವು ಮೂಡುವುದಾಗ;
ಚಿಂತನೆಯೆ ಚಿರಸತ್ಯ – ಮುದ್ದುರಾಮ 337

ಚೆಂಡಾಟವಾಡುತ್ತ ಕಾಲ ಕಳೆಯುವ ಬಾಲೆ
ಋತು ಉರುಳಿದಂತೆಲ್ಲ ಜವ್ವನದ ಚೆಲುವೆ.
ಬಳಿಕ ಮೊಗದಲಿ ಸುಕ್ಕು; ಬಿಳಿಕೂದಲಿನ ಛಾಯೆ.
ಕಾಲಚಕ್ರವೆ ಹೀಗೆ! – ಮುದ್ದುರಾಮ 338

ಕೆಲಕಾಲ ನೆಲೆಸಿಲ್ಲಿ ಎತ್ತಲೋ ಸಾಗುವರು;
ಮರೆಯಾಗುವರು ಒಮ್ಮೆ ಯಾವ ಕಾರಣಕೊ!
ಯಾರಿರಲಿ ಇರದಿರಲಿ ಕಾಲ ಸರಿವುದು ಮುಂದೆ;
ಮಾನವತೆ ಚಿರಧಾರೆ – ಮುದ್ದುರಾಮ 339

ಎಸೆದ ಕಲ್ಲಿಂದೆಷ್ಟು ಅಲೆಬಳೆಯೊ ಕೆರೆಯಲ್ಲಿ!
ನೋಡೆ ಕೆಲಚಣ ಬಳಿಕ ಅದು ಮಂಗಮಾಯ.
ನೋವುನಲಿವುಗಳಂತೆ ಸ್ಥಿರವಲ್ಲ ಜೀವಿತದಿ;
ಚಿರ ಒಂದೆ: ಆದೆ ಕಾಲ! – ಮುದ್ದುರಾಮ 340

***

ಶಿಶಿರದಲಿ ಸೊರಗಿ ಹೂ ಚೈತ್ರದಲಿ ಬಿರಿಯುವುದು;
ಆಷಾಢ ತಮ ಮತ್ತೆ ಕಾರ್ತೀಕ ದೀಪ;
ಯಾವಾಗ ಒಳಸುಳಿದು ಹೇಗೆ ಇದು ತೋರುವುದೊ!
ಮಧುರ ಋತುಗತಿ ಚಲನೆ – ಮುದ್ದುರಾಮ 341

ಯಾರ ಅಪ್ಪಣೆ ಕೋರಿ ಕಾದು ನಿಂತಿದೆ ಕಾಲ?
ಸಮಯ ಸರಿಬಳಸದಿರೆ ಎಲ್ಲ ಎಡವಟ್ಟು.
ಮಲಗಿರುವೆ ನೀ ಎಂದು ರವಿ ಉದಿಸದಿಹನೇನು?
ಚಕ್ರದುರುಳೇ ಚಲನೆ – ಮುದ್ದುರಾಮ 342

ಆಲಿಸುತ ನಿನ್ನ ದನಿ ತಲೆದೂಗಿದವರೇ ನಾಳೆ
ಹೀಗಾಯಿತೇ ಎನುತ ಗೊಣಗಬಹುದೇನೊ!
ಮಧುರತೆಯ ರುಚಿ ಅರಿತು ತುಟಿ ಒಲಿದರದೆ ಕ್ಷೇಮ;
ಇದೆ ರಥಕೆ ಮುಗ್ಗರಿಕೆ – ಮುದ್ದುರಾಮ 343

ನಡೆದರಲ್ಲವೆ ಆಗ ಮುಗ್ಗರಿಕೆ ಬೀಳುವಿಕೆ?
ಕುಳಿತವರಿಗೆಲ್ಲಿದೆಯೊ ನಡೆವ ಸುಖದಾರಿ?
ಬಿಸಿಲಿರಲಿ ಚಳಿಯಿರಲಿ; ಸಾಗುತಿರು ನೀ ಮುಂದೆ.
ಬಾಳಚೇತನ ನಡಿಗೆ – ಮುದ್ದುರಾಮ 344

ಸಾಗಿ ನೀ ನದಿ ಬಳಿಗೆ ನೋಡು ದಡದಲಿ ನಿಂತು;
ಹರಿಯದೆಯೆ ನಿಲ್ಲುವುದೆ ಈ ತೊರೆಯ ನೀರು?
ಸಾಗರದ ಮಿಲನದಲಿ ಇದೆ ಅದರ ಗುರಿಯಾತ್ರೆ;
ಚಲನೆ ಜೀವನಸೂತ್ರ – ಮುದ್ದುರಾಮ 345

ಹಾದಿ ಗುರಿ ತಲುಪಲಿಕೆ ಇನ್ನೆಷ್ಟು ದೂರವಿದೆ
ಎನುತ ಪರಿತಪಿಸಿದರೆ ಪಯಣ ದುಸ್ತರವೊ!
ಎಷ್ಟು ಸಾಗಿದೆ ಪಯಣ ಎನ್ನುವುದೆ ಅತಿಶಯವೊ!
ಚಲನೆ ಬಾಳಿನ ಗೆಲುವು – ಮುದ್ದುರಾಮ 346

ಇತ್ತ ಬಂದವರೆಲ್ಲ ನಿಂತರೇ ಉಳಿದಿಲ್ಲಿ?
ನಿಲ್ದಾಣ ಬಂದಂತೆ ಹೊರಗಾದರೆಲ್ಲ.
ಯಾರಿಗರಿವಿರದಿಲ್ಲಿ ಪ್ರಸ್ಥಾನದಾ ಗಳಿಗೆ;
ಲೋಕದಾಟ ವಿಚಿತ್ರ – ಮುದ್ದುರಾಮ 347

ಹೊಸತೊಂದ ಕಂಡೊಡನೆ ಹಳೆಯದನು ಮರೆಯುತ್ತ
ನವತೆ ಹಿಂದೋಡುವುದು ಮನದ ಚಾಪಲ್ಯ.
ಭಾವಶ್ರುತಿಗೊಲಿದ ಮನ ಮಾಧುರ್ಯ ನೆಲೆವೀಡು;
ಹಳೆಯದಾಗದೆ ಹೊಸತು? – ಮುದ್ದುರಾಮ 348

ಸೌದಾಮಿನಿಯ ಹೊಳಪು ನಿಲ್ಲುವುದೆ ಬಹುಕಾಲ?
ಪ್ರಜ್ವಲಿಪ ದಿನಪ ಬೆಳಗುವನೆ ಇರುಳಿನಲಿ?
ತುಂತುರುವಿನತಿ ಸೊಬಗು ಮಾಯವಾಗದೆ ಬೇಗ?
ಚಿರವೆನುವುದಿದೆಯೇನು? – ಮುದ್ದುರಾಮ 349

ಬರದದ್ದೆ ? ಹಾಡಿದ್ದೆ? ನೆನೆದದ್ದೆ? ನಲಿದದ್ದೆ?
ಯಾವುದುಳಿದಿದೆ ಜಗದಿ ಘನರೂಪದಲ್ಲಿ?
ಕಾಲಗರ್ಭದಲೆಲ್ಲ ಅರಿತು ಮರೆಯಾಗುವುದೊ!
ನೆನಪು ಬರಿ ಗತಚಿತ್ರ – ಮುದ್ದುರಾಮ 350

ಇವನು ಬಲ್ಲಿದನೆಂದು ಹೆದರಿ ನಿಲುವುದೆ ಗಾಳಿ?
ನೇತಾರನಿವನೆಂದು ಮಣಿಯುವುದೆ ಕಾಲ?
ಇವನು ಆಲಸಿಯೆಂದು ಸೂರ್ಯ ಮೂಡದೆ ಇಹನೆ?
ಸಮಯ ಎಲ್ಲರಿಗೊಂದೆ! – ಮುದ್ದುರಾಮ 351

ಅಂದಿನಿಂದಿನ ತನಕ ದಾರಿ ಬದಲಾಗಿಲ್ಲ;
ನಡೆವ ಪಯಣಿಗರ ಚೆಹರೆಯಲಿ ಭಿನ್ನತೆಯೊ!
ಜಲ ಒಂದೆ! ಬಳಕೆಯಲಿ ವ್ಯತ್ಯಾಸ ಅಲ್ಲಲ್ಲಿ;
ಬದಲಾವಣೆಯೆ ನಿತ್ಯ ! – ಮುದ್ದುರಾಮ 352

ಎಷ್ಟು ವಸಂತ ಹೆಚ್ಚೊ ಅಷ್ಟು ಅನುಭವ ಮಿಗಿಲು;
ಬಿಳಿಕೂದಲಾದಷ್ಟು ಜಾಣ್ಮೆ ಅತ್ಯಧಿಕ.
ಪಕ್ವತೆಯ ಸೊಂಪುಸಿರಿ ಅವರವರ ಪುಣ್ಯಫಲ;
ವಯಸು ಬರಿ ಅಂಕಿಯೇಂ? – ಮುದ್ದುರಾಮ 353

***

ಯಾವುದೇ ರೂಪದಲಿ ಕಳೆದ ನಿನ್ನೆಯ ಚಹರೆ
ಇಂದು ಪರಿವರ್ತನೆಗೆ ದಕ್ಕುವುದೆ ನಮಗೆ?
ಕಾಲವೆಂದರೆ ಇಷ್ಟೆ: ಸತತ ಹರಿಯುವ ನೀರು;
ಸಾಗುತಿರುವುದೆ ಬದುಕು – ಮುದ್ದುರಾಮ 354

ನಾ ಇದ್ದೆ ಎಂದರದು ಗತಕಾಲ ವೈಭವವೊ!
ಮುರಿದ ದೋಣೀಯನೇರಿ ನದಿ ದಾಟಲಾರೆ.
ನಿನ್ನ ಮುಂದೇನಿದೆಯೊ ಅದೆ ಜೀವಸರ್ವಸ್ವ;
ಮರೆ ಹಳತ, ಕರೆ ಹೊಸತ – ಮುದ್ದುರಾಮ 355

ಮುಗಿದ ಕತೆಯೋ ನಿನ್ನೆ! ಅದ ನೆನೆದು ಫಲವೇನು?
ಆದದ್ದಾಯಿತು. ಬಿಡು ಚಿಂತೆ, ನಡೆ ಮುಂದೆ.
ಅರಿ ವರ್ತಮಾನವನು; ತೆರೆ ಅದರ ಮುಚ್ಚಳವ.
ಇಂದು ಜೀವನಕವಚ – ಮುದ್ದುರಾಮ 356

ಹೇಗಿತ್ತೊ ಈ ಮುಂಚೆ ನಿನ್ನ ಹಿಂದಣ ಹೆಜ್ಜೆ
ಇಹುದಂತೆ ನೀನಿಡುವ ಮುಂದಿನಾ ಹೆಜ್ಜೆ.
ಕಾಲಗೆಜ್ಜೆಯ ನಾದ ಅಭಿನಯಕೆ ಪೂರಕವೊ!
ನಿನ್ನೆ ನೆರಳಿದೆ ಇಂದು – ಮುದ್ದುರಾಮ 357

ಬಂದುದನು ಬಂದಂತೆ ಬಳಸದಿರೆ ಬರಿ ಬವಣೆ;
ಕಾಲನೆದುರಲಿ ಸೆಣಸಿ ನಿಂತರದು ನೋವು.
ಹಿಂದೆ ಸಂದುದ ನೆನೆದು ಬೆಂದು ಬಳಲಿದರೇನು?
ಅರಿ ಇಂದು ನಿಶ್ಚಯದಿ – ಮುದ್ದುರಾಮ 358

ಸತ್ಯವೆಂದರೆ ಏನು? ನಂಬಿಕೆಯ ನೆರೆನಂಟು,
ತೆರೆದ ಕಣ್ಣಿನ ರೆಪ್ಪೆ ಬೆಳಕ ಕಾಣಲಿಕೆ.
ಗತ ಗರಿಮೆಯರಿವಿನಲಿ ಇದೆ ಇಂದಿನುತ್ಸಾಹ;
ವರ್ತಮಾನವೆ ನಿತ್ಯ – ಮುದ್ದುರಾಮ 359

ವಯಸಾದ ದೇಹದಲಿ ನೂರು ಮರಣದ ಚಿಂತೆ;
ಇನ್ನಷ್ಟು ಸಾಧಿಸುವ ಬಯಕೆ ವಿಪರೀತ.
ಎದ್ದೊಡನೆ ಈ ದಿನವೆ ಕೊನೆಯೆಂದರರದೆ ಬದುಕು;
ಈ ಗಳಿಗೆಯೇ ಘನವೊ! – ಮುದ್ದುರಾಮ 360

ಏನೇನು ಕಾದಿದೆಯೊ ಮರುಗಳಿಗೆಯಲಿ ನಮಗೆ!
ಅದ ನೆನೆದು ಕನಲಿದರೆ ಈ ಗಳಿಗೆ ಹಾಳು.
ಈ ಚಣದ ಬೆಲೆ ಅರಿತು ಬದುಕಿದರೆ ಅದೆ ಭಾಗ್ಯ;
ನಿನ್ನದೋ ಈ ನಿಮಿಷ! – ಮುದ್ದುರಾಮ 361

ಇಂದಿನದ ಚಿಂತಿಸದೆ ನಾಳೆ ಏನೋ ಎಂದು
ಅಳುತಲಿದ್ದರೆ ಅದುವೆ ಬಾಳಕೊನೆ ನಿಮಿಷ.
ನೋಡೀಗ ಮುಗಿಲಹನಿ; ಮರೆ ನಾಳೆ ಬಾನಮಳೆ.
ಇರುವುದಕೆ ಕೊಡು ಬೆಲೆಯ – ಮುದ್ದುರಾಮ 362

ಇದೆಯೊ ಇಲ್ಲವೊ ನಾಳೆ ಆ ಚಿಂತೆ ಈಗೇಕೆ?
ಎದ್ದು ನೀ ನಗುತಿರುವೆ ಇಂದು ಮುಂಜಾನೆ.
ಮುಂದಿರುವ ಈ ಗಳಿಗೆಯೊಂದೆ ದಿಟ ಈ ದಿನದಿ;
ದಿನದಿನವು ನವಜನುಮ – ಮುದ್ದುರಾಮ 363

ವರ್ತಮಾನವ ಬೈದು ಭೂತವನು ಅಪ್ಪದಿರು;
ನಾಳೆ ಎಂತೋ ಏನೊ! ಕಾಣಿಸದು ಕಣ್ಗೆ.
ಇದೆ ಇಂದು ಕಣ್ಮುಂದೆ; ಇದೆ ಬಾಳದರ್ಪಣವೊ!
ನಿನ್ನದೋ ಈ ದಿವಸ! – ಮುದ್ದುರಾಮ 364

ಸಂದುದಕೆ ಚಿಂತಿಸದೆ ಇಡು ಹೆಜ್ಜೆ ನೀ ಮುಂದೆ;
ಅಂದಾದುದನೆ ನೆನೆದರೆಲ್ಲಿ ಸುಖ ಇಂದು?
ಹಿಂದಿನದು ಬರಿ ನೆನಪು; ಮುಂದಿನದರರಿವಿಲ್ಲ;
ಇಂದದಷ್ಟೆ ನಿನ್ನದೋ! – ಮುದ್ದುರಾಮ 365

ದಿನ ಕರಗಿ, ನಗೆ ಸೊರಗಿ ಕಾಲಗೆರೆ ಮಾಸುತಿದೆ;
ಬಣ್ಣ ತುಂಬುವುದೆಂತು ಬಾಳಚಿತ್ರದಲಿ?
ಗಡಿಯಾರದಲಿ ಮುಳ್ಳು ಹಿಂದೆ ಚಲಿಸುವುದುಂಟೆ?
ಬಾರದೋ ಕಳೆದದ್ದು! – ಮುದ್ದುರಾಮ 366

ಕಳಚಿ ತೊಟ್ಟನು ಹಣ್ಣು ಎಂದು ಕೆಳಬೀಳುವುದೊ!
ಕಡಲಿನಲೆ ಯಾವಾಗ ಕರೆಯನಪ್ಪುವುದೊ!
ಲತೆಯಿಂದ ಯಾವಾಗ ಹೂವು ಕೆಳಗುದುರುವುದೊ!
ನಾಳೆ ಏನಾಗುವುದೊ! – ಮುದ್ದುರಾಮ 367

ಇರುಳೆಂದು ಕಣ್ಮುಚ್ಚಿ ಮಲಗಿ ಒರಳಾಡದೆಯೆ
ನಿಟ್ಟಿಸೋ ಅಂಬರದಿ ನೀ ಪೂರ್ಣಶಶಿಯ.
ಇಹುದೆ ಚಂದ್ರಿಕೆ ಸೊಬಗು ಕರಿ ಅಮಾವಾಸ್ಯೆಯಲಿ?
ನಾಳೆ ಬರಿ ಕಲ್ಪನೆಯೊ! – ಮುದ್ದುರಾಮ 368

***

ನೀ ಹುಟ್ಟಿದಂದೆಷ್ಟು ಸರಸದನಿ ಹೊನಲಿತ್ತು!
ಎಷ್ಟೊಂದು ನಗೆ ಇತ್ತು ಸುತ್ತಮುತ್ತೆಲ್ಲ!
ಏನಾಯ್ತು ಬರುಬರುತ? ನೋವಡರಿತೇಕಿಂತು?
ಜನನ ಬಗೆ ಬೇರೇನು? – ಮುದ್ದುರಾಮ 369

ಈ ವೈಭವೋಪೇತ ಸಂಭ್ರಮದ ಮೆರವಣಿಗೆ
ಕಡೆಗೆ ನಿಲ್ಲಲೆಬೇಕು ಎಲ್ಲೊ ಒಂದು ದಿನ!
ಅರಿತನಿತ್ಯತೆ ಪರಿಯ ಜೀವಿಪುದೆ ಸೌಂದರ್ಯ;
ಬೀಗರೌತಣ ಬಾಳು – ಮುದ್ದುರಾಮ 370

ಮೇಲೆ ಏರಿದ ಚಕ್ರ ಕೆಳಗೆ ಉರುಳಲೆಬೇಕು;
ಕೆಳಗಿರುವುದೊಮ್ಮೆ ಮೇಲೇರಬೇಕು.
ಚಕ್ರದುಪಮೆಯ ತೆರದಿ ಇದೆ ಬಾಳಭಾಗ್ಯಬಗೆ;
ಬಾಳು ಓಡುವ ಗಾಡಿ – ಮುದ್ದುರಾಮ 371

ಹಾಲು ಮೊಸರಾದಂತೆ ಮೊಸರು ಹಾಲಾಗುವುದೆ?
ಬೆಣ್ಣೆಯಾಗದು ಮತ್ತೆ ಕರಗಿಸಿದ ತುಪ್ಪ!
ಸಾವನಪ್ಪಿದ ಬಳಿಕ ತನು ಉಸಿರನೆಳೆಯುವುದೆ?
ಅಂತೆ ಮನುಜರ ಬಾಳು – ಮುದ್ದುರಾಮ 372

ಗಾಳಿ ತಂಪಿದೆ ಎಂದು ಸೊಡರು ಆರದೆ ಇಹುದೆ?
ಸೂಜಿ ಚಿನ್ನದ್ದೆಂದು ಅದು ಚುಚ್ಚದಿಹುದೆ?
ದೊರೆಯ ಅರಮನೆಯೆಂದು ಗೋಡೆ ಉರುಳದೆ ಇಹುದೆ?
ಹೂವು ಬಾಡದೆ ಇಹುದೆ? – ಮುದ್ದುರಾಮ 373

ಬುದ್ಧಿ ಕಲಿಸಲಿಕೆ ಅತಿ ಪ್ರಬಲ ಸಾಧನ ವಯಸು;
ಬಿದ್ದು ಒದ್ದಾಡಿದರೆ ಶಪಿಸದಿರು ವಯಸ.
ಲದ್ದಿಯಾದರೆ ಬದುಕು ತಪ್ಪು ವಯಸಿನದಲ್ಲ;
ಶುದ್ಧಿ ವಯಸಿನ ಕೊಡುಗೆ – ಮುದ್ದುರಾಮ 374

ಶವದ ಮನೆಯಂಗಳದಿ ಕಣ್ಣೀರು ನಿಲ್ಲಲಿಕೆ,
ದಟ್ಟ ಮಂಜಾರಲಿಕೆ ಸಮಯ ಹಿಡಿದೀತು!
ಕೆಟ್ಟ ಕಾಲದಿ ಅಳುತ, ನಗು ಚೆಂದ ಕಾಲದಲಿ;
ಯಾರ ಸರದಿ ಅದೆಂದೊ! – ಮುದ್ದುರಾಮ 375

ತೋರಿ ಮಿಂಚಿನ ಬೆರಗ ತಮಕೊಯ್ಯುವುದೆ ಬಾಳೆ?
ಬಂದು ತೆರಳುವುದಷ್ಟೆ ನಿಯತಿ ಸಂಹಿತೆಯೆ?
ಎಂತಿದೆಯೊ ಆಗಮನ ಇದೆ ಅಂತೆ ನಿರ್ಗಮನ;
ಈ ಬದುಕಿಗೇನರ್ಥ? – ಮುದ್ದುರಾಮ 376

ಗಂಗೋತ್ರಿಯಿಂದುದಿಸಿ ಬಯಲಲ್ಲಿ ಹರಿದಾಡಿ
ಸರಿತೆ ಕೊನೆಯಲ್ಲಿ ಸಾಗರವ ಸೇರ್ವಂತೆ
ಎಲ್ಲೊ ಜನಿಸಿದ ಜೀವ ಸಾವನಪ್ಪುವುದೆಲ್ಲೊ!
ಜನನದಂತಿದೆ ಅಂತ್ಯ – ಮುದ್ದುರಾಮ 377

ಎಷ್ಟೆ ಸಲ ಒದರಾಡು, ಎಗರಾಡು, ಹೆಣಗಾಡು
ಕೈಮೀರಿದುದು ಏನೊ ಇದೆ ಎಲ್ಲೊ ಒಂದು.
ಪೂರ್ವನಿಶ್ಚಿತವೇನು ಮನುಜ ಬಾಳಿನ ನಿಲುವು?
ಇದನರಿತರಿದೆ ಶಾಂತಿ – ಮುದ್ದುರಾಮ 378

ಇತ್ತ ಬಂದವರೆಲ್ಲ ಅತ್ತ ಹೋಗದೆ ಒಮ್ಮೆ
ಇದ್ದು ಬಿಟ್ಟರೆ ಇಲ್ಲೆ ತಿರೆಯ ಗತಿ ಏನು?
ಹೂದಳದ ಕಂಪಿಷ್ಟೆ; ಪಾಲುದಾರರು ಅಧಿಕ.
ಉಸಿರಾಡುವುದೆ ಕಷ್ಟ! – ಮುದ್ದುರಾಮ 379

ಬಳುಕಿ ವಯ್ಯಾರದಲಿ ಮೆರೆದ ತನು ಕೊನೆಗೊಮ್ಮೆ
ಕಾಗೆ ಗೂಬೆಗೆ ಸರಕು ಹೆಣರೂಪದಲ್ಲಿ.
ಪಂಚಭೂತದ ಒಡಲು ಮತ್ತೆ ಬಯಲಲಿ ಲೀನ;
ಮರಣ ಅಂತಿಮಗಾನ – ಮುದ್ದುರಾಮ 380

ಎಲ್ಲರೂ ಮಣ್ಣಲ್ಲಿ ಮಣ್ಣಾಗಲೇ ಬೇಕು
ಬಡವ ಬಲ್ಲಿದನಿರಲಿ, ಸಂತ ಮುನಿ ಇರಲಿ.
ಮಸಣದೆಡೆ ಹೆಜ್ಜೆಗತಿ ತುಸು ಹಿಂದುಮುಂದಷ್ಟೆ;
ಸಾವಂತು ನಿಶ್ಚಿತವೊ! – ಮುದ್ದುರಾಮ 381

ಅರವಿಂದ ಅರಳದಿರೆ ಅದೆ ಸೃಷ್ಟಿ ಕೊನೆಯೇನು?
ಒಂದಳಿದರಿನ್ನೊಂದು ಉದಿಸುವುದೆ ಲೋಕ.
ಈ ಲೋಕಯಾತ್ರೆಯಲಿ ಎಲ್ಲ ಮುಗಿಯಲೆಬೇಕು;
ಸಾವು ಅಂತಿಮ ಭ್ರಾಂತಿ – ಮುದ್ದುರಾಮ 382

ಅರಗಿಣಿಯ ಮೇಲೆರಗಿ ಕುಕ್ಕುವುದು ರಣಹದ್ದು;
ಮಾಯವಾಗುವುದೊಡನೆ ಈ ಹಕ್ಕಿ ಉಸಿರು.
ವಿಧಿ ಯಾರ ಯಾವಾಗ ತನ್ನೆಡೆಗೆ ಎಳೆಯುವುದೊ!
ಮರಣ ಅಚ್ಚರಿ ಪರಿಯೊ! – ಮುದ್ದುರಾಮ 383

ನೀ ಗಳಿಸಿದಾಭರಣ, ಧನ ಕನಕ ಮಾಣಿಕ್ಯ
ಚಿತೆಗೇರಿ ಕೊನೆಯಲ್ಲಿ ಬರದು ನಿನ್ನೊಡನೆ.
ಎಲ್ಲ ಪದವಿ ಪ್ರಶಸ್ತಿ ನಿರ್ಜೀವ ಸ್ಮಾರಕವೊ!
ಮರಣ ನಿಶ್ಚಿತ ನಾಳೆ – ಮುದ್ದುರಾಮ 384

ಸಾವನ್ನೆ ಕಾಣದಿಹ ಮನೆಯ ಸಾಸಿವೆಗಾಗಿ
ಊರೂರನರಸಿದರೆ ದೊರಕುವುದೆ ನಿನಗೆ?
ಹುಟ್ಟಿದವರೆಲ್ಲರನು ಮರಣ ಕಾಡದೆ ಇಹುದೆ?
ಜನನದಂತಿದೆ ಸಾವು – ಮುದ್ದುರಾಮ 385

ಇತ್ತ ಬಂದವರೆಲ್ಲ ಅತ್ತ ತೆರಳದಿರೆಂತು?
ಮುಂದೆಂದೊ ಒಂದು ದಿನ ಸಾವು ಸನ್ನಿಹಿತ.
ಈ ಭಾವ ಆಗಾಗ ಸುಳಿದರದು ಅತಿ ಕ್ಷೇಮ;
ಮರಣ ನಂಟಿದೆ ಬಾಳ್ಗೆ – ಮುದ್ದುರಾಮ 386

ಆದದ್ದು ಹೋದದ್ದು ಸುಳಿದು ನಕ್ಕಿರಬೇಕು
ಚಿತೆಯನೇರುವ ಮುನ್ನ ಸ್ಮೃತಿಪಟಲದಲ್ಲಿ.
ಹಕ್ಕಿ ಹಾರಿದ ಮೇಲೆ ಈಗ ಇದು ಬರಿ ನೆನಪು;
ಇಂದ್ರವನವೇಂ ಮರಣ? – ಮುದ್ದುರಾಮ 387

ಅವರವರ ಹುಟ್ಟೆಲ್ಲ ಪೂರ್ವನಿರ್ಧಾರಿತವೆ?
ಹುಟ್ಟಿದವನೇಕೆ ಸಾಯುವನು ಕೊನೆಗೊಮ್ಮೆ?
ರೋಗ ರುಜಿನಗಳೇಕೆ ಕಾಡುವುದು ಮನುಕುಲವ?
ಅನಿವಾರ್ಯವೇ ಮರಣ? – ಮುದ್ದುರಾಮ 388

ಶವಪೆಟ್ಟಿ ಎಷ್ಟು ಚಿಕ್ಕದೊ ಅಷ್ಟಧಿಕ ದುಃಖ;
ಕನಸ ಕಾಣುವ ಹಸುಳೆ ಸಾವು ಅತಿ ಘೋರ.
ಕಾಲ ಏತಕೆ ಇಂಥ ಮೊಗ್ಗುಗಳ ಚಿವುಟುವನೊ!
ನ್ಯಾಯವೆಲ್ಲಿದೆ ಇಲ್ಲಿ? – ಮುದ್ದುರಾಮ 389

ಪುತ್ರ ಜನನದ ತೆರದಿ ಪಿತವಿಯೋಗದ ಸುದ್ದಿ
ತರದೇಕೆ ಒಂದೆ ಬಗೆ ಭಾವ ಮನದಲ್ಲಿ?
ಸಂತಾಪ ಸಂತೋಷ ಕಾಲನಿಶ್ಚಯದಿಂದ;
ಕಕ್ಷೆ ಬಿಂದುಗಳೆಷ್ಟೊ! – ಮುದ್ದುರಾಮ 390

ಮಣ್ಣಲ್ಲೊ ಬೆಂಕಿಯಲೊ ಸತ್ತವರ ಆವಾಸ!
ಬಂದೆಡೆಗೆ ಮರುಪಯಣ ಈ ಪಂಚಭೂತ.
ಬಡವ ಬಲ್ಲಿದನೆಂದು ವಿಂಗಡಿಸುವುದೆ ಕಾಲ?
ಚಿತೆಯೆ ಅಂತಿಮ ಸತ್ಯ – ಮುದ್ದುರಾಮ 391

ಕಿರಣ ಕಣ್ತೆರೆದಾಗ ಕೆಂಪು ಮೂಡಣ ಕಾಂತಿ;
ಕರಣ ಕಿವಿಗೊಟ್ಟಾಗ ಬಾಳಿನಲಿ ಶಾಂತಿ.
ಶರಣನೆದೆ ತೆರೆದಾಗ ಇಲ್ಲ ಯಾವುದೆ ಭ್ರಾಂತಿ;
ಮರಣ ಅಂತಿಮ ಕ್ರಾಂತಿ – ಮುದ್ದುರಾಮ 392

ತಿಮ್ಮ ಬಾರೋ, ಮುದ್ದುರಾಮ ಬಾರೋ ಎನುತ
ಎಷ್ಟು ಕರೆದರೆ ಏನು ಕೊನೆಹೊತ್ತಿನಲ್ಲಿ?
ಈ ಲೋಕಪಯಣದಲಿ ಒಂಟಿ ಸಾಗಲೆ ಬೇಕು;
ಅರಿತಷ್ಟು ನೆಮ್ಮದಿಯೊ! – ಮುದ್ದುರಾಮ 393

ಕೊನೆಗಾಲದಲಿ ಆನೆ ಗವಿಯ ಸೇರುವುದಂತೆ;
ಅನುಸರಿಸಲೊಲ್ಲನಿದ ಮನುಜ ಜೀವಿತದಿ.
ಬಳಸಿ ಗಾಲಿಯ ಕುರ್ಚಿ ಅಡ್ಡಾಡುವನು ಸತತ;
ಇಳಿಯೊ ವೇದಿಕೆಯಿಂದ! – ಮುದ್ದುರಾಮ 394

ಸಸಿ ಬೆಳೆದು ಮರವಾಗಿ ಫಲ ಕೊಟ್ಟು ಬೀಳುವುದು;
ಸಸಿ ಅರಳಿ ಕಂಪೆರೆದು ಒಣಗಿ ಬಾಡುವುದು.
ಹುಲ್ಲುಂಡು ಹಾಲ್ಕರೆದು ಹಸು ಅಸುವ ನೀಗುವುದು;
ತಳಿರು ಕೊನೆಗಳಿಯುವುದು – ಮುದ್ದುರಾಮ 395

ಶವಕೆ ನೀ ಚಂದನವ ಎಷ್ಟು ಪೂಸಿದರೇನು?
ಕೊಟ್ಟರೇಂ ಕರ್ಪೂರ ಅಗ್ನಿಯಾಹುತಿಗೆ?
ಮಲ್ಲಿಗೆಯ ಪರಿಮಳಕೆ ಓಗೊಡದು ಸತ್ತ ಹೆಣ;
ಅಲೆಯಿದ್ದರಷ್ಟೆ ನೊರೆ – ಮುದ್ದುರಾಮ 396

ಆಳೆತ್ತರದ ಮಾಲೆ ಎಷ್ಟು ಹಾಕಿದರೇನು?
ಹಾಗಿದ್ದನೆಂದು ಹಾಡಿಹೊಗಳಿದರೇನು?
ಸತ್ತವನು ಮತ್ತೆದ್ದು ಕುಳಿತುಕೊಳ್ಳುವನೇನು?
ಸಾವು ಕೂಡದ ಕೊಂಡಿ – ಮುದ್ದುರಾಮ 397

ಸತ್ತ ಮೇಲೇಕೆ ನೀ ಸಿಂಗರಿಸುವೇ ಹೆಣವ?
ಸದ್ದುಗದ್ದಲವೇಕೆ ಹರೆ ಕಹಳೆ ಬಳಸಿ?
ಹೂಳಿಬಿಡು ಮೆಲ್ಲ ನೀ ವಾಲದೆಯೆ ಸಂಭ್ರಮಕೆ;
ಬರಲಿ ಮರಣಕೆ ತೂಕ – ಮುದ್ದುರಾಮ 398

ಬೀದಿ ಬೀದಿಯಲೆಲ್ಲ ರಥದಲ್ಲಿ ಶವಯಾತ್ರೆ;
ಏನೊಂದು ಉದ್ಘೋಷ! ಹೂ ಅಲಂಕಾರ.
ಚಿತೆಗೇರಿಸಿದ ಮೇಲೆ ಯಾರಿಲ್ಲ ಮಸಣದಲಿ;
ಮತ್ತೆ ಇನ್ನೊಂದು ರಥ! – ಮುದ್ದುರಾಮ 399

ಅಂದ ಗೂಡನು ಕಟ್ಟಿ ಸೇರಿ ತಾ ಅದರೊಳಗೆ
ರೇಷ್ಮೆಹುಳು ಮಸಣದೆಡೆ ಏಕೆ ಸಾಗುವುದೊ!
ಇದೆ ಎಲ್ಲಿ ಎಲ್ಲಕ್ಕೆ ಚಿಟ್ಟೆಯಾಗುವ ಪುಣ್ಯ?
ಸಾವು ಹಾರುವುದೇನು? – ಮುದ್ದುರಾಮ 400

ಉಸಿರಳಿದ ಬಳಿಕ ಈ ತನು ಗೂಡಹೊಕ್ಕಾಗ
ಯಾರಪ್ಪುವರೊ ನಿನ್ನ ರುದ್ರಭೂಮಿಯಲಿ?
ಮೃತ್ಯುವೊಂದೇ ನಿನ್ನ ಸಂಗಾತಿ ಕೊನೆಯಲ್ಲಿ;
ಸ್ಥಿರವಲ್ಲ ಸಿರಿಪದವಿ – ಮುದ್ದುರಾಮ 401

ಕೆನ್ನೆಯಲಿ ಮಿರುಗಿಲ್ಲ, ಮೊಗದಲ್ಲಿ ನಗೆಯಿಲ್ಲ;
ಪ್ರೀತಿ ಸೊರಗಿದ ಮೇಲೆ ಇದು ದೇಹಚಹರೆ.
ಮಾಸಿ ಹೋದರೆ ಚೆಲುವು ನಲಿವನರಸುವುದೆಲ್ಲಿ?
ಸೊಗಸು ಸೋತರೆ ಸಾವು – ಮುದ್ದುರಾಮ 402

ಉಸಿರಿದ್ದರಷ್ಟೆ ಈ ತನುವಿಗಿದೆ ಸಕಲ ಸಿರಿ;
ರಚನೆ ಕೌಶಲವೆಲ್ಲಿ ಶವದ ಶಿರದಲ್ಲಿ?
ಸತ್ತ ಹೆಣ ಮಸಣದಲಿ ಮತ್ತೆ ನಕ್ಕದ್ದುಂಟೆ?
ಮುಗಿದ ಕತೆ ಶವಯಾತ್ರೆ – ಮುದ್ದುರಾಮ 403

ಮಣ್ಣಲ್ಲಿ ಮಣ್ಣಾದ ಮಂದಿ ಮೇಲೇಳುವರೆ?
ಅಶ್ರು ಸುರಿವುದೆ ಸತತ ಆಪ್ತ ನಯನದಲಿ?
ಮುಗಿದದ್ದು ಮುಗಿದ ಕತೆ; ಪುಟವೆಲ್ಲಿ ಬರೆಯಲಿಕೆ?
ಸತ್ತವರಿಗುಸಿರಿದೆಯೆ? – ಮುದ್ದುರಾಮ 404

ಸತ್ತವರನರಸಿ ನೀ ಸಗ್ಗ ತಲುಪಿದರೇನು?
ನಿನ್ನಾಪ್ತ ಚಹರೆಯನು ನೀ ಕಾಣಲಾರೆ.
ಕಂಬನಿಯ ಮಂಜಿನಲಿ ಮೊಗವೆಲ್ಲೊ ಇದೆ ದೂರ;
ಗೋರಿಗೆಲ್ಲಿದೆ ಉಸಿರು? – ಮುದ್ದುರಾಮ 405

ಇಹದ ತನುಲತೆಯಲ್ಲಿ ಉಸಿರಹೂ ಬಾಡಿದರೆ
ಮುಗಿಯಿತಲ್ಲಿಗೆ ಎಲ್ಲ ಭಾವಬಾಂಧವ್ಯ.
ಎಂದೊ ಜಗದಂಕಿತದ ನೆನಪು ಮಾಸಲೆಬೇಕು;
ಸಕಲ ಲೀಲಾಚಿತ್ರ! – ಮುದ್ದುರಾಮ 406

ಕವಿಕಲಾವಿದ ಸಂತ ಸೇನಾನಿ ಧೀಮಂತ
ವೃತ್ತಿ ಪರಿಣತರೆಷ್ಟೊ ಉಳಿದರೇ ಇಲ್ಲಿ?
ಇಷ್ಟೊ ಎಷ್ಟೋ ಕೊಟ್ಟು ಮೆಲ್ಲ ಸಾಗಿದರತ್ತ;
ಹಿಂಬಾಲಕನೊ ನೀನು! – ಮುದ್ದುರಾಮ 407

ಪಾದರಕ್ಷೆಯ ಕೊಟ್ಟ ಚಮ್ಮಾರನೂ ಇಲ್ಲ;
ಚೆಂದ ಅಂಗಿಯ ಹೊಲಿದ ದರ್ಜಿಯೂ ಇಲ್ಲ.
ಜಾಜಿ ಮಾಲೆಯ ಹೆಣೆದ ಹೂವಾಡಿಗಿತ್ತಿಲ್ಲ;
ಎಲ್ಲಿ ಹೋದರೊ ಎಲ್ಲ! – ಮುದ್ದುರಾಮ 408

ಇರುಳ ಚೋರನ ತೆರದಿ ಇನಿತಿನಿತು ಸುಳಿವಿರದೆ
ಮರಣ ಮುಸುಕೆಳೆವ ಬಗೆ ಚೋದ್ಯ ಲೋಕದಲಿ.
ಬಂದಾಗ ಭಯಪಡದೆ ಕೈಕುಲುಕುವುದೆ ಕ್ಷೇಮ;
ಶಾಂತಿ ಸ್ಮೈರಣೆಯಿಂದ – ಮುದ್ದುರಾಮ 409

ಎಂದೊ ಇನ್ನೊಂದು ದಿನ ನನದೆನುವುದೆಲ್ಲವನು
ಬಿಟ್ಟಿಲ್ಲಿ ಸದ್ದಿರದೆ ಸಾಗಲೇಬೇಕು.
ಇಂತಿರಲು ಏಕಿಷ್ಟು ಜಗದಗಲ ವ್ಯಾಮೋಹ?
ಅರಿತರಷ್ಟೇ ಶಾಂತಿ – ಮುದ್ದುರಾಮ 410

ಬಂದಾಗ ಅಳುತಿದ್ದೆ ಜಗಪರಿವೆ ಇನಿತಿರದೆ;
ನಗುತಿದ್ದೆ ಅಳುತಿದ್ದೆ ಆಮೇಲೆ ಇಲ್ಲಿ.
ಸುಖದುಃಖ ಕಾರಣವ ಅರಿವ ಮುನ್ನವೆ ಮರಣ;
ಇಂತಿರಲು ನಗೆ ಕೊನೆಗೆ – ಮುದ್ದುರಾಮ 411

ಯಾರು ಚೆನ್ನಿಗನಂತೆ ನಿರತ ಬದುಕಿಹರಿಲ್ಲಿ?
ಮೊಗದ ಸುಕ್ಕುಗೆರೆ ಚೆಲುವ ಮರೆಮಾಚುವುದೊ!
ಮುಪ್ಪು ಕಾಡುತ ಮೆಲ್ಲ ಸಾವು ಸುಳಿಯದೆ ಇಹುದೆ?
ತನು ಕೊನೆಗೆ ತಿರೆಯೊಳಗೆ – ಮುದ್ದುರಾಮ 412

ಆ ದಿನದ ದೂರದನಿ ಸುಳಿದಾಗ ಸನಿಹದಲಿ
ಒರಗು ನಿರ್ಲಿಪ್ತತೆಗೆ ಮುಗುಳುನಗೆ ಬೀರಿ.
ನೀ ಸರಸವಾಡುತಿರು ಕಾಲಸಾಂಗತ್ಯದಲಿ;
ಕೊನೆಯುಸಿರು ಕಾಲ ವರ – ಮುದ್ದುರಾಮ 413

***

ಪುಟಿವ ಚೆಂಡಿನ ತೆರದಿ ಅತ್ತಿತ್ತ ಓಡಾಡಿ
ಏನೊಂದು ಉತ್ಸಾಹ! ಎಂಥ ಲವಲವಿಕೆ!
ಪುಟ್ಟ ಕಂದನ ಕಣ್ಣು ದಿವ್ಯತೆಯ ದ್ಯೋತಕವೊ!
ಜ್ಯೋತಿಬಿಂಬವೊ ಕಂದ! – ಮುದ್ದುರಾಮ 414

ನಗೆ ಹೊನಲ ಹರಿಸುತ್ತ ಕೇಡನರಿಯದ ಕೂಸು
ಬರುಬರುತ ತಾನೇಕೆ ಪ್ರಶ್ನೆಯಾಗುವುದೊ!
ಆ ಭವ್ಯ ದಿವ್ಯಾಂಶ ಒಣಗಿ ಹೋಗುವುದೇಕೊ!
ಮೊರೆಯಾಲಿಸುವರಾರೊ? – ಮುದ್ದುರಾಮ 415

ಹಸುಳೆ ಅಂದಾಡಿದ್ದ ಬಣ್ಣದಾಟಿಕೆಯೆಲ್ಲ
ಕಾಲ ಬದಲಾದಂತೆ ಇರುವುದೇ ಅಂತೆ?
ಒಮ್ಮೆ ಪ್ರಿಯವಾದದ್ದು ಬಳಿಕ ಮೂಲೆಯ ಸರಕು;
ಚೆಂಡಿನೊದತವೆ ಕಾಲ? – ಮುದ್ದುರಾಮ 416

ತಾರುಣ್ಯದಲ್ಲೆಂಥ ಬಣ್ಣಬಣ್ಣದ ಕನಸು!
ಮುಗಿಲೆತ್ತರಕೆ ಜಿಗಿವ ಅಮಿತ ಉತ್ಸಾಹ!
ಹೊಸಹೊಸತ ಬರಸೆಳೆವ ಪುಟಿಪುಟಿವ ಕಾರಂಜಿ!
ಯವ್ವನವೆ ಮೋಹಕವೊ! – ಮುದ್ದುರಾಮ 417

ಹರಯದಲಿ ತನುಬಳುಕು ಹೂಲತೆಯ ವಯ್ಯಾರ;
ಅತ್ತಿತ್ತ ಬಾಗಿದರೆ ಸೊಂಟ ಸಿರಿ ಸೆಳೆಮಿಂಚು.
ಚಂದ್ರಮುಖಿ ನಗೆನಯನ ಉಲ್ಲಾಸ ನೆಲೆವೀಡು;
ತಾರುಣ್ಯ ಉತ್ಸಾಹ – ಮುದ್ದುರಾಮ 418

ಕಾಣುವುದು ಯುವಮನಸು ನೂರಾರು ಕನಸುಗಳ;
ಬಾನತಾರೆಯ ತಲುಪಿ ನಿಲುವಾಸೆ ಅದಕೆ.
ಚೈತನ್ಯ ಸ್ಫೋಟದಿಂದದರ ಉನ್ನತಿ ಮಾರ್ಗ;
ತಾರುಣ್ಯ ಲವಲವಿಕೆ – ಮುದ್ದುರಾಮ 419

ಹೊಂಗನಸ ಚಿಗುರಿಕೆಗೆ ತಾರುಣ್ಯ ನಿಜದ ನೆಲೆ;
ಸಾಧನೆಯ ಸವಿಗನಸಿಗದೆ ಕರ್ಮಭೂಮಿ.
ಆಗಿಲ್ಲ ಬಾಡುವಿಕೆ ಮಾತು ಪದಕೋಶದಲಿ;
ಯುವಭಾವ ನಗೆಯ ಸೆಲೆ – ಮುದ್ದುರಾಮ 420

ತಾರುಣ್ಯದಲ್ಲೆಷ್ಟು ಅಭಿಲಾಷೆ ಸಂಚಿತವೊ!
ಬರುಬರುತ ಒಂದೊಂದು ಅತಿ ಮಂಗಮಾಯ.
ಬಯಸಿ ಬೇಡಿದ ದೇಹ ಜರ್ಜರಿತ ಕೊನೆಗೊಮ್ಮೆ;
ಸೃಷ್ಟಿ ಆಶಾವಿನಾಶ – ಮುದ್ದುರಾಮ 421

ಮೇರುಶಿಖರವನೇರ್ವ ಉತ್ಸಾಹದಾ ಚಿಲುಮೆ
ಬತ್ತುವುದು ಬರುಬರುತ ವೃದ್ಧಾಪ್ಯದಲ್ಲಿ.
ಅಡಗುವುದು ಕೊನೆಗೊಮ್ಮೆ ನಮ್ಮೆಲ್ಲ ಚೈತನ್ಯ;
ನುಂಗಿ ತೇಗದೆ ಕಾಲ? – ಮುದ್ದುರಾಮ 422

ಕೆನ್ನೆ ಗುಳಿಬೀಳುವುದು, ಕೈಕಾಲು ನಡುಗುವುದು,
ಚರ್ಮ ಸುಕ್ಕಾಗುವುದು, ಅಮರುವುದು ಮುಪ್ಪು.
ಮೊಗದಿ ಮಿಂಚಿದ ಕಾಂತಿ ಅಡಗಿ ಮಂಕಡರುವುದು;
ಇನ್ನು ಯವ್ವನವೆಲ್ಲಿ? – ಮುದ್ದುರಾಮ 423

ವಯಸು ಹೆಚ್ಚಾದಂತೆ, ಮಸಣ ಬಳಿ ಸಾರ್ದಂತೆ
ಕಿವಿಯು ಕಿವುಡಾಗಿ ಕಣ್ಣು ಮಂಜಾಗುವುದು.
ಪರಿಪರಿಯ ಸಂಕಷ್ಟ ಮುದಿತನದ ಅಭಿಶಾಪ;
ವೃದ್ಧಾಪ್ಯ ಇಳಿಮುಖವೊ! – ಮುದ್ದುರಾಮ 424

ತುಂಬು ವಯಸಾದಂತೆ ಮಾಗಿದನುಭವ ಹೇಗೊ
ಕರಗಿ ನಿಲುವುದು ಹಾಗೆ ದೇಹಚೈತನ್ಯ.
ಕಣ್ಣು ಮಂಜಾಗುವುದು, ನೆನಪು ಸರಿ ಕುಂದುವುದು;
ವೃದ್ಧಾಪ್ಯ ತಾಪನೆಲೆ – ಮುದ್ದುರಾಮ 425

ಮರಹು ರಭಸದಿ ನುಗ್ಗಿ ಅಳಿಸುವುದು ನೆನಪುಗಳ
ಸುಳಿದು ಬಿರುಗಾಳಿ ತರುವ ಬೀಳಿಸುವಂತೆ.
ಇರದೆ ಯಾವುದೆ ಪರಿವೆ ಜೀವ ಅತಿ ಕಂಗಾಲು;
ಕಷ್ಟ ಮುದಿತನ ಬವಣೆ – ಮುದ್ದುರಾಮ 426

ಪರಮಾಪ್ತ ನೇಹಿಗರು, ಓರಗೆಯ ಪರಿಚಿತರು
ಸಾವನಪ್ಪುವ ಸುದ್ದಿ ವೃದ್ಧಾಪ್ಯ ಶಾಪ.
ಆ ನೆನಪಿನಲೆಯಲ್ಲಿ ತೇಲುವುದು ಅನಿವಾರ್ಯ;
ಇದ್ದೆ ಇದೆ ಮುಳುಗು–ನಗೆ – ಮುದ್ದುರಾಮ 427

ಮುದಿಗಾಲದಲ್ಲಿ ಮನ ಬಯಸುವುದು ಆಶ್ರಯವ;
ಕೊನೆಗೆ ತಡವಡಿಸುವುದು ಈ ಊರುಗೋಲೆ!
ಎಣಿಸದೆಯೆ ಪರನೆರವ ನಡೆಯುತಿರು ಆದಷ್ಟು;
ಅವಲಂಬನೆಯೆ ನೋವು – ಮುದ್ದುರಾಮ 428

ಬಿಳುಪಾಗದೇ ಬಳಿಕ ಕಪ್ಪುಕೂದಲ ಬಣ್ಣ?
ಸುಕ್ಕಾಗದೇ ಎಂದೊ ಮೊಗದ ನಯ ಚಹರೆ?
ದಾರಿ ತಪ್ಪದೆ ಕೊನೆಗೆ ಹರಿತ ಚಿಂತನಧಾರೆ?
ಹೇಗಿದೆಯೊ ಮುಕ್ತಾಯ? – ಮುದ್ದುರಾಮ 429

***

ಮಸಣದೆಡೆ ನಿನ್ನ ಶವ ಕೊಂಡೊಯ್ದು ಸುಡಬಹುದು;
ಒಂದೆರಡು ದಿನ ಬಳಿಕ ಅಳಬಹುದು ನೊಂದು.
ಯಾರೆಷ್ಟೆ ಅತ್ತರೇಂ? ಹಿಂದಿರುಗುವುದೆ ಉಸಿರು?
ಅರಿಯೊ ಉಸಿರಿನ ಮೌಲ್ಯ! – ಮುದ್ದುರಾಮ 430

ತನುವಿನಿಂದಲೆ ಸರಸ, ಸರಸದಿಂದಲೆ ಬದುಕು.
ತನುವಿನಿಂದಲೆ ರೋಗ, ರೋಗವೇ ನೋವು.
ನೋವಿನಿಂದಲೆ ಹಾನಿ, ಹಾನಿಯಿಂದಲೆ ಸಾವು;
ಜನನ–ಮರಣವೊ ದೇಹ! – ಮುದ್ದುರಾಮ 431

ರಥ ಸಾಗುವುದೆ ಮುಂದೆ ಚಕ್ರ ಉರುಳಿದ ಮೇಲೆ?
ಕುದುರೆ ಮುಂದೋಡುವುದೆ ಕುಂಟಾದ ಮೇಲೆ?
ಹಕ್ಕಿ ಮೇಲೇರುವುದೆ ರೆಕ್ಕೆಯಿಲ್ಲದ ಮೇಲೆ?
ಉಸಿರಿರದೆ ತನು ಇಹುದೆ? – ಮುದ್ದುರಾಮ 432

ಜೀವರಸ ಹರಿಯದಿರೆ ಗಿಡದಲ್ಲಿ ಹೂವೆಲ್ಲಿ?
ದುಂಬಿ ಬಳಿ ಬಾರದಿರೆ ತರುಲತೆಗಳೆಲ್ಲಿ?
ಬೇರು ನೆಲ ಒಪ್ಪದಿರೆ ಕಾಯಿಹಣ್ಣುಗಳೆಲ್ಲಿ?
ಉಸಿರೆಲ್ಲೊ ತನು ಅಲ್ಲಿ! – ಮುದ್ದುರಾಮ 433

ವಯಸು ಬಲಿತಂತೆಲ್ಲ ಮಾಗಿ ನಿಲುವುದು ಬದುಕು;
ಬಾಳ ಗುರುತರ ಕೊಡುಗೆ ಅನುಭವದ ಗರಿಮೆ.
ಎಸಗಿದಾ ಕೊನೆ ತಪ್ಪೆ ನಿನ್ನ ಜೀವನ ಗುರುವೊ!
ಉಸಿರು ಕಲಿಕೆಯ ಮಂತ್ರ – ಮುದ್ದುರಾಮ 434

ಮರೆತ ಮನದಂಗಳದಿ ಸವಿನೆನಪಿನಲೆಯೆಲ್ಲಿ?
ದಣಿದ ಮುದಿ ಸಂಜೆಯಲಿ ಕೆಂಪೆನುವುದೆಲ್ಲಿ?
ಸೋತ ಮನವನದಲ್ಲಿ ಉತ್ಸಾಹ ಹೂವೆಲ್ಲಿ?
ದೇಹ ಉಸಿರಿನ ಚೀಲ – ಮುದ್ದುರಾಮ 435

ಯಾರು ಯಾರನು ಎಲ್ಲೊ ಭೇಟಿಯಾಗುವರೇಕೊ!
ಆ ಸಲಿಗೆ ಪ್ರೀತಿಯಲಿ ಮಾರ್ಪಡುವುದೇಕೊ!
ಆ ನಂಟು ಬರುಬರುತ ದುಃಖವಾಗುವುದೇಕೊ!
ಕಾಲ ಮುನಿಯುವುದೇಕೊ! – ಮುದ್ದುರಾಮ 436

ಇಂತವರ ಕವನಕ್ಕೆ ಇಂಥ ರಾಗದ ಛಾಯೆ;
ಅಂತವರ ಚಿತ್ರಕ್ಕೆ ಇಂಥ ಚೌಕಟ್ಟು.
ಯಾರದೋ ಜಾವಳಿಗೆ ಇಂಥ ನೃತ್ಯದ ಸ್ಪರ್ಶ;
ಎಂಥದೀ ಸಂಬಂಧ! – ಮುದ್ದುರಾಮ 437

ಕಣ್ಣೆರಡು ಮಂಜಾಗಿ ಕಿವಿಯೆರಡು ಕಿವುಡಾಗಿ
ನಿಶ್ಶಕ್ತಿ ತಲೆಹಾಕಿ ದೇಹ ಜರ್ಜರಿತ.
ಈ ಲೋಕ ಸಂಬಂಧ ಸಾಕೆನುವ ನಿರ್ಧಾರ!
ಚಿಂತೆ ಕಾಡುವುದೇಕೊ! – ಮುದ್ದುರಾಮ 438

ಯವ್ವನದ ರೂಪಕಳೆ ಹಿಂಗಿ ಹೋಗುವುದೇಕೊ!
ಬಿರಿದ ಹೂಗಂಪು ಜಾರಿಹೋಗುವುದೇಕೊ!
ಸುಳಿದ ಸಂತಸ ಛಾಯೆ ಮಾಯವಾಗುವುದೇಕೊ!
ಮೇಣ ಕರಗುವುದೇಕೊ! – ಮುದ್ದುರಾಮ 439

ಮೊದಲಲೇನೂ ಇಲ್ಲ; ಕೊನೆಯಲ್ಲು ಏನಿಲ್ಲ.
ಏಕಿಂಥ ಪರದಾಟ ಈ ನಡುವಿನಲ್ಲಿ?
ಬಯಲಲ್ಲಿ ಹರಿವ ನದಿ ಕಡಲ ಕೂಡಲೆ ಬೇಕು;
ಜೀವತಲ್ಲಣವೇಕೊ? – ಮುದ್ದುರಾಮ 440

ಬಣ್ಣಿಸುತ ಈ ದೇಹ ಹೇಯಸ್ಥಲ ವಿವರವನು
ಅರಿತವರು ಹೇಳಿದರು ಜಗದನಿತ್ಯತೆಯ.
ಕೇಳಿದೆವು ಕಿವಿಗೊಟ್ಟು; ಮರೆತುಬಿಟ್ಟೆವು ಒಡನೆ;
ಕಿವಿಯಿರುವುದಿದಕೇನು? – ಮುದ್ದುರಾಮ 441

ಮನನ ಮಾಡಿದೆ ಇಷ್ಟು; ಕೃತಿಯ ರಚಿಸಿದೆ ಇಷ್ಟು;
ಶಾಲೆ ಕಟ್ಟಿದೆ ಇಷ್ಟು; ಹಸಿವ ನೀಗಿಸಿದೆ.
ಸೇವೆ ಮಾಡಿದೆ ಇಷ್ಟು; ಇಷ್ಟು ಸಾಧನೆ ಗೈದೆ.
ಕೊನೆಗೆ ಏನಿದಕರ್ಥ? – ಮುದ್ದುರಾಮ 442

ಹಳತು ಮಿಂಚುತ ಮತ್ತೆ ನೆನಪು ಕಾಡುವುದೇಕೆ?
ನಡೆದ ಆ ನದಿ ತೀರ ನಿನದಿಸುವುದೇಕೆ?
ಎದೆಯ ಗೂಡಿನ ಹಕ್ಕಿ ನಾದ ಮಿಡಿಯುವುದೇಕೆ?
ಚಿರಪ್ರಶ್ನೆ ಇದು: 'ಏಕೆ?' – ಮುದ್ದುರಾಮ 443

ಯಾರೊ ಬಂದರು ಇತ್ತ; ಜೊತೆಗಿದ್ದರೆರಡು ದಿನ.
ತಂದರತಿ ಉಲ್ಲಾಸ, ಬಗೆಬಗೆಯ ಸೊಬಗ.
ಸಾಗಿತೀ ಬಾಳರಥ ಮೆರವಣಿಗೆ ತೆರದಲ್ಲಿ;
ಹೀಗಿವುದೆ? ಗೊತ್ತಿಲ್ಲ – ಮುದ್ದುರಾಮ 444

ವೈರಿ ಸಖನಾಗುವನು, ರಿಪು ಮಿತ್ರನಾಗುವನು
ಕಾಲಾನುಕಾಲದಲಿ ವಿಧಿ ಎಣಿಸಿದಂತೆ.
ಮಳೆ ಗುಡುಗು ಬರಸಿಡಿಲು ಎಂತೇಕೆ ಜರುಗುವುದೊ!
ಏಕಾಗುವುದೊ ಹೀಗೆ? – ಮುದ್ದುರಾಮ 445

ನಡೆಯುತಿರುವಾಗಷ್ಟೆ ಮೂಳೆ ಮುರಿವುದು ಎಡವಿ;
ಕುಡಿವ ಬಟ್ಟಲಿನಿಂದ ಚೆಲ್ಲುವುದು ಹಾಲು.
ಆರತಿಯ ಹೊತ್ತಿನಲಿ ಹಿಂಗುವುದು ಕರ್ಪೂರ;
ಹೀಗೇಕೆ? ಗೊತ್ತಿಲ್ಲ! – ಮುದ್ದುರಾಮ 446

ಗೂಡಿಂದ ಹೊರಬಂದು ಚಿಟ್ಟೆಯಾಗುವ ಆಸೆ;
ಅದಕಾಗಿ ಬಗೆಬಗೆಯ ನೂಲ ಪರದಾಟ.
ಚಿಟ್ಟೆಯಾಗದೆ ಕೊನೆಗೆ ಕತ್ತಲಿನ ಆವಾಸ;
ಬಾಳಿನಲಿ ಬೆಳಕೆಲ್ಲಿ? – ಮುದ್ದುರಾಮ 447

***

ವೇದಿಕೆಗೆ ಬಂದಿರುವೆ; ಅಭಿನಯಿಸು ಪಾತ್ರವನು.
ವೇಷ ಕಳಚಲೆಬೇಕು ತೆರೆ ಬಿದ್ದ ಮೇಲೆ.
ವೇಣುನಾದವ ನುಡಿಸಿ ರಂಜಿಸೋ ಶ್ರೋತೃಗಳ;
ವೇಳೆ ಇರುವುದೆ ಕಡಿಮೆ – ಮುದ್ದುರಾಮ 448

ಕಾಲಬಿಂದಿಗೆಯಲ್ಲಿ ಬಾಳಜಲ ಸೀಮಿತವೊ!
ನಮಗಿರುವ ಈ ಬದುಕು ಅಪರಿಮಿತವಲ್ಲ.
ಎಷ್ಟಿದೆಯೊ ತೊರೆಯ ಜಲ ಅಷ್ಟರಲಿ ಕೃಷಿ ನಮದು;
ತೆರೆ ಮುಸುಕ, ಕರೆ ಬೆಳಕ – ಮುದ್ದುರಾಮ 449

ಬಿದ್ದವರು ಎದ್ದವರು, ಸೋತವರು ಗೆದ್ದವರು
ಇಹರೆಲ್ಲ ಮಣ್ಣೊಳಗೆ ಎಂದೊ ಒಂದು ದಿನ!
ಯಾರ ಆಪೋಷಿಸದೆ ಬಿಟ್ಟಿದೆಯೊ ಈ ಕಾಲ?
ಅರಿ ಕಾಲವಿಸ್ಮಯವ – ಮುದ್ದುರಾಮ 450

ಬೇಡದಿರು ಕೈಮುಗಿದು ಕಾಲನೆದುರಲಿ ನಿಂತು;
ಹಸ್ತಲಾಘವವಿತ್ತು ತೆರಳವನ ಜೊತೆಗೆ.
ಸರಿಸಬಲ್ಲೆಯ ಹಿಂದೆ ಗಡಿಯಾರ ಮುಳ್ಳನ್ನು?
ಅರಿ ಕಾಲಚರ್ಯೆಯನು – ಮುದ್ದುರಾಮ 451

ತನುವಿನಲಿ ಲವಲವಿಕೆ ಚೈತನ್ಯವಿರುವಾಗ
ನೆನೆದ ಕಾರ್ಯವ ಮುಗಿಸು ಆದಷ್ಟು ಬೇಗ.
ದನಿ ಚೆಂದವಿರುವಾಗ ಹಾಡುತಿರು ಇನಿಗೀತ;
ಎಣಿಸು ನೀ ದಿನಮಾನ – ಮುದ್ದುರಾಮ 452

ಅಂದು ಅದು ಹಾಗಿತ್ತು ಹೀಗಿತ್ತು ಎನುತೆನುತ
ಪಲ್ಲವಿಯನದನದನೆ ಎಷ್ಟು ಹಾಡುವೆಯೊ?
ರಚಿಸು ನವಗೀತೆಯನು; ಹಾಡು ನವರಾಗದಲಿ;
ಕೊಡು ಹೊಸತ ರಸಿಕರಿಗೆ – ಮುದ್ದುರಾಮ 453

ಬರೆಯುತ್ತ ಬರೆಯುತ್ತ ಕೈ ತಣ್ಣಗಾದೀತು!
ನೋಡು ನೋಡುತ್ತ ಕಣ್ಣು ಮಂಜಾದೀತು!
ಕೇಳುತ್ತ ಕೇಳುತ್ತ ಕಿವಿ ಮಂದವಾದೀತು!
ಸಿದ್ಧನಿರು ಇದಕೆಲ್ಲ – ಮುದ್ದುರಾಮ 454

ಕಾಲ ಇಚ್ಛಿಸಿದಾಗ ಎತ್ತಣಿಂದಲೊ ಏಕೊ
ಬಿರುಗಾಳಿ ಜೊತೆ ಸಿಡಿಲು ಬಂದೆರಗಬಹುದು.
ಎಂದೊ ಬಂದೆಳೆದಾಗ ಸಿದ್ಧನಿರು ತೆರಳಲಿಕೆ;
ಬಿಡು ಎಲ್ಲ ಕೊಸರಾಟ – ಮುದ್ದುರಾಮ 455

ಮರೆಯದಿರು ಬಾಳಿನಲಿ ಮೂರು ನಿಜ ಸೂತ್ರಗಳ:
ಏನ ನೆಡುವೆಯೊ ಅಂತೆ ಉಣುವೆ ಆ ಫಲವ.
ಹೊಸತೆನುವುದೇನಿದೆಯೊ ಹಳತಾಗಬೇಕು ಅದು;
ಬಳಸದಿರೆ ಅದು ನಷ್ಟ – ಮುದ್ದುರಾಮ 456

ಮರಹು ಸುಳಿವುದು ಸಹಜ ಅಧಿಕ ವಯಸಾದಂತೆ;
ನೆನೆದದನೆ ಚಿಂತಿಸಿದರಿನ್ನಷ್ಟು ಶೋಕ.
ಏನಿದೆಯೊ ಅದು ನಮದು; ಇರಲಿ ನಗೆ ಇದ ನೆನೆದು.
ಇರದುದಕೆ ಅಳಲೇಕೆ? – ಮುದ್ದುರಾಮ 457

ಈಗ ನೀ ಬದುಕಿರುವೆ; ನೆನೆ ದಿನದ ಪುಣ್ಯವನು.
ನಾಳೆ ನಿಶ್ಚಿತವಲ್ಲ; ನೆನೆ ಅವನ ಕರುಣೆ.
ಚಿಂತೆಕಾತರ ಮರೆತು ಅರಿ ವರ್ತಮಾನವನು;
ಇರುವಾಗ ನಗುತಲಿರು – ಮುದ್ದುರಾಮ 458

ಇದೆ ಎಷ್ಟೊ ವಿಸ್ಮಯದ ನೂರು ಸಂಗತಿ ಇಲ್ಲಿ;
ಇದನರಿತು ನಕ್ಕರಿದೆ ಬಾಳಿನಲಿ ಸೊಗಸು.
ಈ ಸೊಬಗ ಸುಖಯಾತ್ರೆ ನಿಜದಿ ಮಂಗಳಯಾನ;
ನಗುತ ಜೀವನ ಕಳೆಯೊ! – ಮುದ್ದುರಾಮ 459

ಚಿಗುರಿದೆಲೆ ಮುಂದೆಂದೊ ಉದುರಿ ಬೀಳ್ವುದು ಖಚಿತ;
ನಗೆಯೊಂದೆ ಇರದೆಂದು ಬಾಳಚರಿತದಲಿ.
ಪ್ರಾರಂಭ ಎಂತಿದೆಯೊ ಇದೆ ಅಂತೆ ಮುಕ್ತಾಯ;
ಸರಿಸಿಬಿಡು ಖಿನ್ನತೆಯ – ಮುದ್ದುರಾಮ 460

ನಾಳೆ ಎಂದೋ ಮುಂದೆ ಬಂದೀತು ಕಾರ್ಮುಗಿಲು
ಎಂದದನು ನೆನೆದು ಭಯಭೀತನಾಗದಿರು.
ಭಯಬೀಜ ಕವಲೊಡೆದು ನೂರುಬಗೆ ಆತಂಕ;
ಭೀತಿ ಸಾವಿನ ನೆರಳು – ಮುದ್ದುರಾಮ 461

ಎಲರಿರದ ಬಯಲಲ್ಲಿ ಹಾರುವುದೆ ಗಾಳಿಪಟ?
ಮೇಲೇರಲಿಕೆ ಬೇಕು ಸೂತ್ರದೊಡನಾಟ.
ಕೌಶಲದ ಜೊತೆಜೊತೆಗೆ ಇರಲಿ ಕಾಲಕಟಾಕ್ಷ;
ಅರಿ ಜೀವಸೂಕ್ಷ್ಮಗಳ – ಮುದ್ದುರಾಮ 462

ಹೊಳೆಹೊಳೆವ ಯುವರಾಜ ಪೋಷಾಕ ಧರಿಸಿ ನೀ
ಬಾರದಿರು ವೇದಿಕೆಗೆ ಮುದಿವಯಸಿನಲ್ಲಿ.
ಅರಿತು ಕಾಲದ ಗತಿಯ ಮರೆಯಾಗು ಮೌನದಲಿ;
ಅಣಕಕೀಡಾಗದಿರು – ಮುದ್ದುರಾಮ 463

ಯಾವುದೋ ಕಾರಣಕೆ ಬಂದಿಹೆವು ನಾವಿತ್ತ;
ಅರಿವಿಲ್ಲ ತೆರಳುವಿಕೆ ಆ ನಿಗದಿ ಗಳಿಗೆ.
ಜಗದ ಕ್ರೀಡಾಗೊಂಬೆಯಂತಾಡುವುದೆ ಸೂತ್ರ;
ಹರಿ ವಿಮಲ ನದಿಯಂತೆ – ಮುದ್ದುರಾಮ 464

ಸತ್ತಾಗ ಇದ್ದೀತು ಒಂದು ಹನಿ ಕಣ್ಣೀರು;
ಮುಗಿಯಿತಲ್ಲಿಗೆ ಜನರ ಭಾವಸಂಬಂಧ.
ಯಾರ ನಿಧನಕೆ ಲೋಕ ಅಳುತ ಕುಳಿತಿದೆ ನಿರತ?
ಮರೆಯದಿರು ವಾಸ್ತವವ – ಮುದ್ದುರಾಮ 465

ಇಂದು ಸುಮಧುರನಾದ ನಾಳೆ ಅತಿ ಕರ್ಕಶವೊ!
ಈಗ ಸೌಂದರ್ಯ, ಆಮೇಲೆ ಅದೆ ಮುಪ್ಪು.
ಲಾವಣ್ಯದಲ್ಲೆಂಥ ಮಾರ್ಪಾಟು ವೈಚಿತ್ರ್ಯ!
ಕಾಲ ಸರದಿಯನರಿಯೊ! – ಮುದ್ದುರಾಮ 466

ಕೂಡಿ ಬಂದರೆ ಕಾಲ ಸುಗಮವಾಗುವುದೆಲ್ಲ;
ಗರುಡನಂತಾದೀತು ಚುಚ್ಚು ರಣಹದ್ದು!
ತುಳಸಿಯಾಗದೆ ಜಾಲಿ? ಮಾವಾಗದೇ ಬೇವು?
ಕಾಯ್ದರಿದೆ ಪುಣ್ಯಫಲ – ಮುದ್ದುರಾಮ 467

ಬೆಂಕಿ ಬಿದ್ದಾಗಷ್ಟೆ ಬಾವಿ ತೋಡುವ ಬುದ್ಧಿ;
ಕೆಸರಲ್ಲಿ ಸಿಲುಕಿದಾಗಷ್ಟೆ ಹರಿನೆನಪು.
ಚಿತೆಗೇರುವಾಗಷ್ಟೆ ವ್ಯರ್ಥಬಾಳಿನ ಚಿಂತೆ;
ತಡವಾಯಿತೆನ್ನದಿರು – ಮುದ್ದುರಾಮ 468

ಊದಿ ನಿನದೆ ತುತೂರಿ ಬರಿ ಜೊಲ್ಲ ಸುರಿಸದಿರು;
ಏದುಸಿರಿನಿಂದನಿತು ಆಯಾಸ ಅಷ್ಟೆ.
ಆದಿಯಂತಿದೆ ಅಂತ್ಯ ಎಂದರಿತರದು ಕ್ಷೇಮ;
ಬೋಧಿತತ್ವವ ನೆನೆಯೊ! – ಮುದ್ದುರಾಮ 469

ಮಸಣದೆಡೆ ಸಾಗುವರು ನೆನೆದು ಪರ ಮರಣವನು;
ತಮ್ಮ ಸಾವಿನ ಚಿಂತೆ ಇನಿತಿಲ್ಲ ಆಗ.
ಈ ಭಾವ ಕಾಡಿದರೆ ಅನುಭಾವಕದೆ ಹೆಜ್ಜೆ;
ನೆನೆ ಒಮ್ಮೆ ಅಲ್ಲಮನ – ಮುದ್ದುರಾಮ 470

***

ಯಾವ ಸಂಗತಿ ಏಕೆ ಏಗುವುದೊ ಬಾಲ್ಯದಲಿ!
ಯಾವ ತೆರದಲಿ ಮುಂದೆ ಒಳಿತನೆರೆಯುವುದೊ!
ಘಟನೆ ಚುಕ್ಕೆಗಳೆಂತು ಕೂಡಿ ಗೆರೆಯಾಗುವುದೊ!
ಮುಂದಕದು ನಾಂದಿಯೇ? – ಮುದ್ದುರಾಮ 471

ಬಾಳ ಸಂಚಾರದಲಿ ಕಂಡು ನಲಿದದ್ದೆಷ್ಟೊ!
ಕನಸು ಫಲಿಸಿದ್ದೆಷ್ಟೊ! ಮರೆಯಾದುದೆಷ್ಟೊ!
ಮುಗಿದು ಬಿದ್ದದ್ದೆಷ್ಟೊ! ಮರುಗಿ ಅತ್ತದ್ದೆಷ್ಟೊ!
ನೆನಪು ಉಳಿದದ್ದೆಷ್ಟೊ! – ಮುದ್ದುರಾಮ 472

ಎಲ್ಲಿಂದ ಬಂದೆಯೋ! ಇಲ್ಲೇಕೆ ಹುಟ್ಟಿದೆಯೊ!
ಎಲ್ಲಿ ನೀ ನಿಲ್ಲುವೆಯೊ! ಹೇಗೆ ನಲಿಯುವೆಯೊ!
ಇಲ್ಲಿಂದ ಮುಂದೆಲ್ಲೊ! ಯಾವ ದಿಸೆಗೊರಳುವೆಯೋ!
ಅಲ್ಲೇನು ಕಾದಿದೆಯೊ! – ಮುದ್ದುರಾಮ 473

ಕಾಲೆಂತೊ ನಡೆ ಅಷ್ಟೆ; ಮನಸೆಂತೊ ನುಡಿ ಅಷ್ಟೆ!
ಮುಗಿಲೆಂತೊ ಮಳೆ ಅಷ್ಟೆ ಹವಮಾನದಂತೆ.
ಎಲ್ಲ ಅಷ್ಟಕಷ್ಟೆ; ಹೆಚ್ಚಿಲ್ಲ ಕುಂದಿಲ್ಲ.
ಖಣ ಎಷ್ಟೊ ದಿನ ಅಷ್ಟೆ! – ಮುದ್ದುರಾಮ 474

ಇದಕಾಗಿ ಅದಕಾಗಿ ಯಾವುದಾವುದಕಾಗಿ
ಹಗಲೆನದೆ ಇರುಳೆನದೆ ದುಡಿದು ಏನಾಯ್ತು?
ಮೆಲ್ಲ ಮೆಲ್ಲನೆ ಬಂದ; ಉಸಿರ ಒಯ್ದೇ ಬಿಟ್ಟ!
ನಿನಗೆ ನೆನಪೂ ಇಲ್ಲ! – ಮುದ್ದುರಾಮ 475

ಸೂತ್ರದಾಸರೆ ಬಿಟ್ಟ ಗಾಳಿಪಟದೋಪಾದಿ
ಹೇಗೊ ಕೊನೆಗಾಣುವುದು ಸಕಲ ಜೀವಕತೆ.
ಎಷ್ಟೆ ಅದ್ಭುತವಿರಲಿ ಜಗವ ತ್ಯಜಿಸಲೆ ಬೇಕು;
ಕಲಿ ಅನಾಸಕ್ತಿ ನೀ – ಮುದ್ದುರಾಮ 476

ಯಾವುದೋ ಕಾರಣಕೆ ಯಾರಾರನೋ ದೇವ
ಆಯ್ದುಕೊಳ್ಳುವನೇನೊ ಲೀಲೆ ಪರಿಚಯಕೆ!
ಈ ಕಾರ್ಯ ಮುಗಿದಂತೆ ಎತ್ತಿಕೊಳ್ವನು ಬೇಗ;
ಮನುಜಯತ್ನಗಳಿಷ್ಟೆ! – ಮುದ್ದುರಾಮ 477

ಕಾಲಕಕ್ಷೆಯಲೊಂದು ಕಿರುಚುಕ್ಕೆ ನೀ ಇಲ್ಲಿ;
ಚುಕ್ಕೆ ಅಳಿಯಲುಬಹುದು; ಕಕ್ಷೆ ಶಾಶ್ವತವೊ!
ಈ ಅಶಾಶ್ವತ ಪರಿಯ ಅರಿಯದಾದೆವದೇಕೊ!
ಮಾಯೆ ಅರಿವಿನ ಪಾಚಿ – ಮುದ್ದುರಾಮ 478

ಹೆಸರು ಕಣ್ಮರೆಯಾಗಿ ಕೃತಿ ತಾರೆಯಾದಾಗ
ಮುಗಿದು ಇಹದ ಋಣ ಇದೆ ಧನ್ಯತಾಭಾವ.
ನಾಮಾವಶೇಷದಲೆ ಭಾವಸಮ್ಮಿಳನವಿದೆ;
ಅಂಕಿತದಲೇನಿದೆಯೊ? – ಮುದ್ದುರಾಮ 479

ಕತೆ ಬರೆಯ ಹೊರಟವನು ನೀ ತಾನೆ ಈ ಹೊತ್ತು!
ಇದೆ ನಿನ್ನ ಕೈಯಲ್ಲೆ ಕತೆಯ ಮುಕ್ತಾಯ.
ನಿನ್ನಿಷ್ಟದಂತೆ ಅದ ಮಾರ್ಪಡಿಸು, ಬೇರ್ಪಡಿಸು.
ಕತೆಗಾರ ನೀನಲ್ತೆ? – ಮುದ್ದುರಾಮ 480

ದನಿಭಾವ ಸಂರಚನೆ ವಿಷವಿಕಾರವನೆಲ್ಲ
ಆಪೋಷಿಸದೆ ಕಾಲ ಹೆಬ್ಬಾವಿನಂತೆ?
ಕಾಲ ತೇಲುವ ನಾವೆ; ಅಂತೆ ಮುಳುಗುವ ಸರಕು.
ಏನಿಲ್ಲ ಕೊನೆಯಲ್ಲಿ! – ಮುದ್ದುರಾಮ 481

ತರು ಬೆಳೆದು ಕೊನೆಗುರುಳಿ ಒಲೆಉರಿಗೆ ಸಾಮಗ್ರಿ;
ಅಕ್ಕಿ ಬೇಯಿಸಿ ಮಡಕೆ ಕೊನೆಗದುವೆ ಮಣ್ಣು.
ಮೆರೆದು ಸೊಕ್ಕಿದ ಮನುಜ ಚಿತೆಯೇರುವನು ಕೊನೆಗೆ;
ಬಾಳಕೊನೆಕತೆ ಇಷ್ಟೆ! – ಮುದ್ದುರಾಮ 482

ಬಯಕೆಸಾಗರ ಈಜಿ ತೃಪ್ತಿ ತೀರದ ಕನಸು;
ನಡುವೆ ಬೀಸುವುದು ಅಬ್ಬರದ ಬಿರುಗಾಳಿ.
ಹೀಗೊ ಹೇಗೋ ಕೊನೆಗೆ ಧರೆಗುರುಳುವುದು ದೇಹ;
ಮಾನವನ ಕತೆ ಇಷ್ಟೆ! – ಮುದ್ದುರಾಮ 483

ಸೌಂದರ್ಯದೀ ದೇಹ ಕೊನೆಗೆ ರೋಗದ ಗೂಡು;
ಜರ್ಜರಿತವಾಗಿ ಮಸಣದಲಿ ಅವಸಾನ.
ದಾಸರೆಂದರು ಅಂದು: "ಇದ ನೆಚ್ಚಿ ಕೆಡಬೇಡ";
ಮರೆತು ಹೋಯಿತು ಸತ್ಯ! – ಮುದ್ದುರಾಮ 484

ಬಂದಾಗ ನೀ ಇತ್ತ ಏನಿಲ್ಲ ಮೈಮೇಲೆ;
ಅಂತೆಯೇ ಏನಿಲ್ಲ ನೀ ತೆರಳುವಾಗ.
ಇಂತಿರಲು ಏಕಿಷ್ಟು ನೂರೊಂದು ಅಧ್ವಾನ?
ನಿರ್ವಾಣ ಅನಿವಾರ್ಯ – ಮುದ್ದುರಾಮ 485

ಸಸಿ ನೆಟ್ಟು ನೀರೆರೆದು ಪೋಷಿಪನು ಬನಮಾಲಿ;
ಹೂಬಣ್ಣ ಎಂತಿಹುದೊ ಬಲ್ಲವರು ಯಾರು?
ಯಾರ ಜಡೆಗೋ ಹೂವು? ದೇವನಡಿಗೋ ಏನೊ!
ಪೂರ್ವನಿಶ್ಚಿತ ಎಲ್ಲ! – ಮುದ್ದುರಾಮ 486

ಮನಸು ಬರಡಾದಂದು, ನೆನಪು ಅತಿ ಮುನಿದಂದು
ಮರೆಯಾಗು ನೀ ಮೆಲ್ಲ ಜನರ ಕಣ್ಣಿಂದ.
ಕಡೆಗಾಲದಲಿ ಆನೆ ದೂರ ನಿಲ್ಲುವುದಂತೆ;
ವಹಿಸಂತೆ ಮೌನವನು – ಮುದ್ದುರಾಮ 487

ಮುಚ್ಚಿದ್ದು ತೆರೆಯುತ್ತ ತೆರೆದದ್ದು ಮುಚ್ಚುವುದು;
ಅಂತೆ ಈ ಜೀವನದ ತೆರೆ ಏಳುಬೀಳು.
ಎಲ್ಲ ಹಾಡಲೆಬೇಕು ಕೊನೆಗೆ ಮಂಗಳ ಗಾನ;
ಕೇಳುತಿರು ಆ ದನಿಯ – ಮುದ್ದುರಾಮ 488

ಪರದೆ ಮೇಲೆದ್ದಂತೆ ನಿನ್ನ ಪಾತ್ರಾಭಿನಯ;
ಚೆಂದವಿದ್ದರೆ ನಡುವೆ ಚಪ್ಪಾಳೆ ದನಿಯೊ!
ಪರದೆ ಕೆಳಬಿದ್ದಂತೆ ವೇಷ ಕಳಚಲೆ ಬೇಕು;
ಬಾಳನಾಟಕ ಇಷ್ಟೆ! – ಮುದ್ದುರಾಮ 489

ಯಾವ ಗಳಿಗೆಯಲಾರ ಉಸಿರದೆಳೆದೊಯ್ಯುವನೊ!
ಯಾವ ನಾಟಕದಂಕ ಎಂದು ಮುಗಿಯುವುದೊ!
ಯಾವ ಪಾತ್ರದ ವೇಷ ಕಳಚಿ ಬೀಳುವುದೆಂತೊ!
ಯಾವ ತೆರೆ ಕೊನೆಗೆಲ್ಲೊ! – ಮುದ್ದುರಾಮ 490

ನಾಟಕದ ಕತೆಯಂತೆ ವೇಷಭೂಷಣವೆಲ್ಲ;
ಪಾತ್ರ ಅದರದರಂತೆ ವೇದಿಕೆಯ ಮೇಲೆ.
ಕೊನೆ ಅಂಕ ಬಂದಾಗ ಪರದೆ ಕೆಳಬೀಳುವುದು;
ನಸುಕಾಯಿತಷ್ಟರಲಿ – ಮುದ್ದುರಾಮ 491

ನೀನಿಲ್ಲಿ ಇರುವುದಕೆ, ನೀ ಅಲ್ಲಿ ಇರದುದಕೆ
ಯಾವ ಕಾರಣ ಹೇಗೆ ಸುತ್ತುವರಿದಿದೆಯೊ!
ಕೊನೆಯ ಅಂಕದ ಪರದೆ ಬೀಳ್ವನಕ ಕಾಯುತಿರು;
ಸೂತ್ರಧಾರನೆ ನೀನು? – ಮುದ್ದುರಾಮ 492

ಸುರಿದ ಮಳೆ ಹರಿಹರಿದು ಕಡಲ ತಬ್ಬದೆ ಕೊನೆಗೆ?
ಇಳೆಗಿಳಿದ ಜೀವ ಬಯಲಾಗದೇ ಕೊನೆಗೆ?
ಇತ್ತ ಬಂದದ್ದೆಲ್ಲ ಅತ್ತ ಸರಿಯದೆ ಕೊನೆಗೆ?
ಹಾಡು ಮಂಗಳ ಕೊನೆಗೆ – ಮುದ್ದುರಾಮ 493

ನಿನ್ನನ್ನ ಋಣವೆಷ್ಟೊ ಅಷ್ಟೆ ಜೀವನ ನಿನದು;
ನಿನ್ನೆ ಮೊನ್ನೆಯದಲ್ಲ ಈ ಕಾಲತತ್ವ.
ನನ್ನಿಯರಿತರೆ ಬೇಗ ಒಳಿತು ಬಾಳಿನ ಚರಿತೆ;
ಉಣ್ಣು ನೆನೆದವನ ದಯೆ – ಮುದ್ದುರಾಮ 494

ಜನುಮವಿತ್ತರು ಯಾರೊ! ಅನ್ನವಿತ್ತರು ಯಾರೊ!
ಒಲವನಿತ್ತರು ಯಾರೊ ಭಾವಸಂಗಮದಿ!
ನೆನೆ ಬಂಧುಬಾಂಧವರ, ನೇಹದೊಡನಾಡಿಗಳ;
ನಿರ್ಗಮಿಸು ಕೈಮುಗಿದು – ಮುದ್ದುರಾಮ 495

□





5

ಇದೆ ಮಹತಿ ಮೌಲ್ಯದಲಿ

ಇದೆ ಕರುಣೆ ಕಣ್ಣಲ್ಲಿ ಬಾನ ತಾರೆಯ ಮಿನುಗು,
ಹುಣ್ಣಿಮೆಯ ತನಿತಂಪು, ಮಲ್ಲಿಗೆಯ ಕಂಪು.
ಅನುಕಂಪೆ ಮಡಿಲಲ್ಲಿ ತಾಯ್ತನದ ಪ್ರೀತಿಯಿದೆ;
ದಯೆ ಜೀವಕೌಸ್ತುಭವೊ! – ಮುದ್ದುರಾಮ

ಮುಖವಾಡವನು ಹೊತ್ತು ನರಿ ಸಿಂಹವಾಗುವುದೆ?
ಬಿಕ್ಕಡಿಸುವವನೇನು ವರ್ಣ ಹಾಡುವನೆ?
ಹಿಡಿದು ಕೈಯಲಿ ಕನಕ ದಾನಶೂರನೆ ಜಿಪುಣ?
ಗುಣದಿಂದ ಗೌರವವೊ! – ಮುದ್ದುರಾಮ 496

ನ್ಯಾಯ ಸಮ್ಮತವೆಂದು ಕಂಡದ್ದ ಪರಿಗಣಿಸು;
ಅನುಸರಿಸು ಅನವರತ ಕಾರುಣ್ಯ ಪಥವ.
ಒಳಿತನ್ನೆ ಒಡಗೂಡು, ಸತ್ಯವನೆ ಸಂಭ್ರಮಿಸು;
ಇದೆ ಮಹತಿ ಮೌಲ್ಯದಲಿ – ಮುದ್ದುರಾಮ 497

ಬಿತ್ತಿರದ ಬಯಲಿನಲಿ ಮಳೆ ಬಂದು ಫಲವೇನು?
ಒಲವಿರದ ಒಡಲಿನಲಿ ರೂಪವಿದ್ದೇನು?
ಕಂಪಿರದ ಹೂವಿನಲಿ ಪಕಳೆ ಎಷ್ಟಿದ್ದೇನು?
ಗುಣದಿಂದ ಔನ್ನತ್ಯ – ಮುದ್ದುರಾಮ 498

ಮನೆಯ ಹಿತ್ತಲಲಿರಲಿ, ಕಾಡಮಧ್ಯದಲಿರಲಿ
ತೋರುವುದೆ ವ್ಯತ್ಯಾಸ ಚಂದನದ ಕಂಪು?
ಬಯಲಲ್ಲೊ ಕಡಲಲ್ಲೊ ಬದಲಾಗುವುದೆ ಮುತ್ತು?
ಎಲ್ಲಿರಲಿ ಗುಣ ಒಂದೆ! – ಮುದ್ದುರಾಮ 499

ನಿನಗಿಂತ ನಾ ಮೇಲು ಎಂದವರ ಬೀಗಬಿಡು;
ಕಳೆದುಕೊಳ್ಳುವುದೇನು ನೀನು ಇದರಿಂದ?
ಕಪ್ಪಾದ ಮಾತ್ರಕ್ಕೆ ಕಾಗೆ ಕೋಗಿಲೆ ಏನು?
ಗುಣಕಷ್ಟೆ ಗೌರವವೊ! – ಮುದ್ದುರಾಮ 500

ವಾಗ್ಮಿತೆಯ ಬಲವೊಂದೆ ತರದು ಅತಿ ಮಾನ್ಯತೆಯ;
ಬಾಳು ಉನ್ನತಿಯೊ ಪ್ರಾಮಾಣಿಕತೆಯಿಂದ!
ಕಂಪಿಲ್ಲದಿರೆ ಯಾರು ಮಲ್ಲಿಗೆಯ ಮುಡಿಯುವರೊ!
ಗುಣತಿ ಗೌರವ ಗುರಿಯೊ! – ಮುದ್ದುರಾಮ 501

ಅರಿತು ಹುತ್ತದ ಡೊಂಕ ಹಾವು ಸರಿವುದು ಮೆಲ್ಲ;
ತೊರೆ ಕಡಲ ಕೂಡುವುದು ಡೊಂಕುಡೊಂಕಾಗಿ.
ಅಂತಿರಲು ಡೊಂಕುತನ ಹೆಚ್ಚೆಂದು ಭಾವಿಪುದೆ?
ಗುಣದಿಂದ ದೊಡ್ಡತನ – ಮುದ್ದುರಾಮ 502

ಪರನೋವ ಚಿಂತಿಸದೆ, ತನ್ನ ಹಿತ ನೆನೆದರದು
'ಕಟ್ಟಿ ಸುಣ್ಣದ ಕಲ್ಲ ಕೆರೆಗೆ ಬಿದ್ದಂತೆ'.
ಲೋಕಲೌಕಿಕವಷ್ಟೆ ಹಿರಿತನದ ಕುರುಹಲ್ಲ;
ಗುಣಗ್ರಹಿಕೆಯೇ ನೀತಿ – ಮುದ್ದುರಾಮ 503

ಆ ಜಾತಿ ಈ ಜಾತಿ ಎನುವ ನುಡಿಯೇ ಕೇಡು;
ಲೇಸ ಬಯಸದೆ ಬರಿದೆ ಕುಲದ ಮಾತೇಕೆ?
ಗುಣ ಹುಟ್ಟಿನಿಂದಲ್ಲ, ಸರಿನಡತೆಯಿಂದ ಗುಣ;
ಸದಾಚಾರಿಯೆ ಕುಲಜ – ಮುದ್ದುರಾಮ 504

ಮಿಗಿಲೆನುವುದಾವುದಿದೆ ಇದೆ ಅದಕೆ ಅಗ್ರನೆಲೆ;
ಎಲ್ಲರಲಿ ಅದನರಸಿ ಹೋಗುವರು ಮಂದಿ.
ಉತ್ಕೃಷ್ಟವಾದದ್ದು ಜನಮನದ ಕಣ್ಮಣಿಯೊ!
ಹಿರಿದು ಸೊಬಗಿನ ಬಿಂಬ – ಮುದ್ದುರಾಮ 505

ಎಲ್ಲೆಲ್ಲಿ ಸಂಸ್ಕೃತಿಯ ದನಿ ಅನನ್ಯತೆ ಇದೆಯೊ
ಗುರುತಿಸುತ ಗೌರವಿಸು ಆ ಸಿದ್ಧಿಸಾರ.
ತನ್ನ ರುಚಿ ಸವಿಯಲಿಕೆ ಕರೆಯುವುದೆ ಮಕರಂದ?
ಅರಸುತಿರು ಉತ್ತಮಿಕೆ – ಮುದ್ದುರಾಮ 506

ಕಾಮಧೇನುವ ಬಿಟ್ಟು ಗೊಡ್ಡುಹಸು ಬೇಡುವುದೆ?
ಕಲ್ಪವೃಕ್ಷವ ಮರೆತು ಬೇವ ಬಯಸುವುದೆ?
ಐರಾವತದ ಬದಲು ಬಡಕುದುರೆ ಏರುವುದೆ?
ಉತ್ತಮಿಕೆ ಮರೆಯುವುದೆ? – ಮುದ್ದುರಾಮ 507

ಮೇನಕೆಯ ಮುಂದೇಕೆ ಹುಬ್ಬೇರಿಸುವ ಆಟ?
ಚಾಣಕ್ಯನೆದುರಲ್ಲಿ ಕಾದಾಟ ಸೆಣಸೆ?
ವಸಿಷ್ಠರಿರುವಲ್ಲಿ ಪಾಂಡಿತ್ಯದಾರ್ಭಟವೆ?
ಗೌರವಿಸು ಮೇರುತನ – ಮುದ್ದುರಾಮ 508

ಉತ್ತಮಿಕೆ ಕಂಡೊಡನೆ ಗೌರವಿಸು ತಲೆಬಾಗಿ;
ದಿವ್ಯತೆಯ ಪ್ರತಿರೂಪ ಒಳಿತೆನುವುದೆಲ್ಲ.
ಪರಮ ಗುಣ ಎಲ್ಲಿದೆಯೊ ಇದೆ ಅಲ್ಲಿ ಸೌಜನ್ಯ;
ಸುಜನಬಾಂಧವನಾಗು – ಮುದ್ದುರಾಮ 509

ಪ್ರೀತಿ ತುಂಬಿದ ಮೊಗದಿ ತುಳುಕುವುದು ಗಾಂಭೀರ್ಯ
ಶ್ರುತಿಬದ್ಧ ರಾಗದಲಿ ತಾಳ ಬೆರೆತಂತೆ.
ತೂಕ ತಪ್ಪಿದ ಹೆಜ್ಜೆ ಫಲವಿರದ ಬಂಜೆತರು;
ಘನತೆ ಗರಿಮೆಯ ಶೈಲಿ – ಮುದ್ದುರಾಮ 510

ಕಡಲ ಕೂಡಿದ ಸರಿತೆ ತೆರೆಗೆ ಒಲಿಯದೆ ಇಹುದೆ?
ಪರುಷ ಮುಟ್ಟಿದ ಲೋಹ ಹೊನ್ನಾಗದಿಹುದೆ?
ವಚನ ಓದಿದ ಮನಸು ಶಿವನ ನೆನೆಯದೆ ಇಹುದೆ?
ಮಹತಿನಲಿ ಪುಣ್ಯವಿದೆ – ಮುದ್ದುರಾಮ 511

ಅಟ್ಟಂತೆ ಇದೆ ಅಡುಗೆ; ಕೊಟ್ಟಂತೆ ಇದೆ ಪುಣ್ಯ.
ಕೊಟ್ಟು ಕೆಟ್ಟವರಾರೊ ಲೋಕಯಾತ್ರೆಯಲಿ?
ಕೊಟ್ಟುದನು ಮರೆತುಬಿಡು; ತಿರುತಿರುಗಿ ಕೊಡುತಲಿರು.
ಕೊಟ್ಟೆನೆಂದರೆ ಮಹತಿ – ಮುದ್ದುರಾಮ 512

ಸುಧೆಯ ಕಡಲಲಿ ಮುಳುಗಿ ಗೊರಸ ಹೊರತೆಗೆಯುವುದೆ?
ದೇವನೆದುರಲ್ಲಿ ಕಾಸು ವರ ಕೇಳುವುದೆ?
ಗರ್ಭಗುಡಿಯಲಿ ನಿಂತು ಗಾರ್ದಭನ ನೆನೆಯುವುದೆ?
ಔಚಿತ್ಯವೇ ಪ್ರಜ್ಞೆ! – ಮುದ್ದುರಾಮ 513

ಶುದ್ಧನೋ ಅಶುದ್ಧನೊ! ನೀ ಮೀಯಹೊರಟಿರುವೆ.
ನಿಲ್ಲುವುದೆ ತಾ ದೂರ ಜಲ ಹಿಂದುಮುಂದೆ?
ಸಂತರಪ್ಪುಗೆ ಹಾಗೆ ದೋಷಿ ನಿರ್ದೋಷಿಯಲಿ;
ಪಾವಿತ್ರ್ಯ ಅಮರತೆಯೊ! – ಮುದ್ದುರಾಮ 514

ಆಂತರ್ಯ ಹದಗೆಟ್ಟು ಔದಾರ್ಯ ಕರಗಿದರೆ
ಒಣಗಿದೆಲೆಯಂತೆ ಈ ಬಾಳು ಬಣಬಣವೊ!
ಮನ ಆರ್ದ್ರವಿಲ್ಲದಿರೆ ಯಾವುದೆಷ್ಟಿದ್ದೇನು?
ಮನುಷ್ಯತ್ವವೆ ಮಿಗಿಲೊ! – ಮುದ್ದುರಾಮ 515

ಮನುಜರಲಿ ಮತಿಶಕ್ತಿ ಮುಖಚರ್ಯೆ ತನುರೋಗ
ಆನುವಂಶಿಕವೆಷ್ಟು? ಗಳಿಕೆಯಿಂದೆಷ್ಟು?
ಯಾವುದೆಷ್ಟೇ ಇರಲಿ ವಿನಯ ಒಡಗೂಡಿರಲಿ;
ಮಾನವೀಯತೆ ಹಿರಿದು – ಮುದ್ದುರಾಮ 516

***

ಮರುಕವಿಲ್ಲದ ಮನಸು ಮುಳ್ಳು ತುಂಬಿದ ಹೂವು;
ಅಲ್ಲಿಲ್ಲ ಆರ್ದ್ರತೆಯ ಕಂಪಿನೊಂದು ಕಣ.
ಹನಿಯ ಸುರಿಯದ ಮುಗಿಲು ಎಷ್ಟು ತೇಲಿದರೇನು?
ದಯೆ ಎಲ್ಲೊ ಹರಿ ಅಲ್ಲಿ – ಮುದ್ದುರಾಮ 517

ಬರಡಾದ ಎದೆಯಲ್ಲಿ ರಸ ಚಿಲುಮೆ ಎಲ್ಲಿಹುದೊ?
ಇದೆ ಹೊಳಪು ತನಿತಂಪು ಕರುಣೆ ಕಣ್ಣಲ್ಲಿ.
ಅನುಕಂಪೆ ಚಿಮ್ಮಿದರೆ ನವಲೋಕ ನಿರ್ಮಾಣ;
ದಯೆ ಜೀವಸರ್ವಸ್ವ – ಮುದ್ದುರಾಮ 518

ಚಳಿಯಲ್ಲಿ ನಡುಗುತ್ತ ನಿಂತ ಬಡವನ ಕಂಡು
ನೀಡು ಕಂಬಳಿಯೊಂದ ಮರುಕದೆದೆಯಿಂದ.
ಉಪಕಾರದಿಂದಷ್ಟೆ ಶ್ರೀಮಂತ ಈ ಬಾಳು;
ದಯೆ ದಾರಿ ಸಗ್ಗಕ್ಕೆ – ಮುದ್ದುರಾಮ 519

ಭಾವ ಬಲಿತರೆ ಕವಿತೆ; ನೀರು ಹರಿದರೆ ಸರಿತೆ.
ಶೂನ್ಯವಾದರೆ ಬಯಲು ಅದುವೆ ನೀರವತೆ.
ಮಮತೆಸೆಲೆ ಮಾನವತೆ; ಚೆಲುವಿನಲೆ ಚಾರುಲತೆ;
ಜೀವದಯೆ ನಿಜ ಒರತೆ – ಮುದ್ದುರಾಮ 520

ಪರುಷ ಮುಟ್ಟಿದ ಲೋಹ ಬಂಗಾರವಾಗುವುದು;
ಮಹತಿ ಸಹವಾಸದಲಿ ಕಿರಿದು ಶೋಭಿಪುದು.
ಮಾಣಿಕ್ಯ ಜೊತೆಗೂಡಿ ಕನಕ ಕಂಗೊಳಿಸುವುದು;
ದಯೆ ಮನವ ಬೆಳಗುವುದು – ಮುದ್ದುರಾಮ 521

ಎದೆಯಲ್ಲಿ ಅನುಕಂಪೆ ಮರಗಟ್ಟಿ ಹೋದಾಗ
ಆ ಜೀವಕೇನು ಬೆಲೆ? ಅದು ಶವದ ರೂಪ.
ಬತ್ತಿ ಹೋದರೆ ನೀರು ಅದ ಚಿಲುಮೆ ಎನ್ನುವರೆ?
ದಯೆಯಿದ್ದರದು ಮನಸು – ಮುದ್ದುರಾಮ 522

ಕರುಣೆ ಸಂಗದಲಾರು ನಂಬಿಕೆಯನಿಟ್ಟಿಹರೊ
ಕೊರಗೆನುವುದವರ ಬಳಿ ಸುಳಿಯದೆಂದೆಂದು.
ಕರಗುವುದು ಅರಗಂತೆ ದಯೆದೀಪದೆದುರು ಮನ;
ಕಿರಣ ಕಳೆ ಸಾತ್ವಿಕತೆ – ಮುದ್ದುರಾಮ 523

ಮನೆ ಸುಟ್ಟು ಹೋದಾಗ, ಮನ ಕುಸಿದು ಬಿದ್ದಾಗ
ಯಾರೊ ಮುಂದಾಗುವರು ನೆರವು ನೀಡಲಿಕೆ.
ಮರುಕ ತುಂಬಿದ ಕಣ್ಣು ದಾರಿ ತೋರುವುದೆಮಗೆ;
ಧರೆ ಬಂಜೆಯೇನಲ್ಲ – ಮುದ್ದುರಾಮ 524

ಶಾಸ್ತ್ರ ಓದಿದರೇನು? ಮಂತ್ರ ಜಪಿಸಿದರೇನು?
ಕೇಳಿ ಪುರಾಣವ ತಲೆದೂಗಿದರೆ ಏನು?
ಅನುಕಂಪೆ ಇಲ್ಲದಿರೆ ಆ ಬದುಕು ಬದುಕೇನು?
ಕರುಣೆ ಶಾಸ್ತ್ರದ ಸಾರ – ಮುದ್ದುರಾಮ 525

ಇಡು ನೀರ ಅಲ್ಲಲ್ಲಿ ನಿನ್ನ ಮನೆ ಅಂಗಳದಿ;
ಪಕ್ಷಿ ಸಂಕುಲ ಬಂದು ಕುಡಿದದನು ನಗಲಿ.
ನೆನೆದು ಬಿಸಿಲಿನ ಬೇಗೆ ನೆರವಾಗು ಈ ಜಗದಿ;
ಪುಣ್ಯವೆಂದರೆ ಕರುಣೆ – ಮುದ್ದುರಾಮ 526

ಎಸಗುತಿರು ನೆರವನ್ನು ನಿನ್ನ ಕೈಲಾದಷ್ಟು
ಕಂಡಾಗ ಬಡಜನರ ಕಷ್ಟದಳಲನ್ನು.
ಆರ್ದ್ರವಾಗದ ಹೃದಯ ಕಲ್ಲು ಬಂಡೆಯೊ ಜಗದಿ!
ಕರುಣೆಮನ ಸಂಪಿಗೆಯೊ! – ಮುದ್ದುರಾಮ 527

ಸಿಲುಕಿ ತಲ್ಲಣ ತೊರೆಗೆ ಆತಂಕ ಹೊರೆ ಹೊತ್ತು
ಅಳುವವರ ಕಣ್ಣೀರ ಒರಸು ಮೆದುವಾಗಿ.
ತಳೆಯದಿರುದಾಸೀನ ಕಂಡು ನತದೃಷ್ಟರನು;
ಬೆಳಸು ಕರುಣೆಯ ಸಸಿಯ – ಮುದ್ದುರಾಮ 528

ಕಿವಿ ಹುಬ್ಬು ಹಣೆ ಮೇಲೆ ಭಸ್ಮ ಪೂಸಿದರೇನು?
ಕನಕ ಜಪಮಾಲೆಯನು ತಿರುಗಿಸಿದರೇನು?
ದಯೆ ಎದೆಯಲಿಲ್ಲದಿರೆ ಏನ ಮಾಡಿದರೇನು?
ಕಾರುಣ್ಯ ಭಕ್ತಿರಸ – ಮುದ್ದುರಾಮ 529

ವೈರ ಸಾಧಿಸಿ ಯಾರು ಸಾಧಿಸಿದರೇನನ್ನ?
ಬುಡ ತರಿದು ರೆಂಬೆಯಲಿ ಕಂಡರೇನನ್ನ?
ಹಗೆತನವ ತೂರೆಸೆದು ಅಪ್ಪಿಕೋ ಪ್ರೀತಿಯನು;
ಕರುಣೆ ಜೀವನ ನೀತಿ – ಮುದ್ದುರಾಮ 530

ಜ್ಯೋತಿ ವಿಮಲಪ್ರಕಾಶ; ಮನಸು ಕತ್ತಲ ಕೋಶ.
ಬೆಳಕು ನೀಲಾಕಾಶ; ತಮಸು ಆಕ್ರೋಶ.
ಸತ್ಯ ಮಾಯೆಗಂಕುಶ; ಎದೆ ವಿಷಯ ಪರಿವೇಷ.
ಕಾರುಣ್ಯ ಸಂತೋಷ – ಮುದ್ದುರಾಮ 531

ಕಾಳ ತಾ ಸಂಗ್ರಹಿಸಿ ಮರಿಗೆ ತುತ್ತನು ಕೊಟ್ಟು
ಎಂಥ ಮಹದಾನಂದ ಹಕ್ಕಿ ಎದೆಯಲ್ಲಿ!
ಇಂಥ ಮೊಲೆಹಾಲುಣಿಸಿದಾ ತಾಯಿ ದೇವತೆಯೊ!
ಮಾತೆ ಕರುಣೆಯ ಪ್ರತಿಮೆ – ಮುದ್ದುರಾಮ 532

ಕೆಟ್ಟನುಡಿ ಪರನಿಂದೆ ಅಪಹಾಸ್ಯ ಕೀಳ್ತನವೊ!
ಸಂಯಮದ ಮೆದುಮಾತು ತಾಳ್ಮೆ ಹಿರಿತನವೊ!
ಜೇನಿರಲು ಒಗರೇಕೆ? ಸುಧೆಯಿರಲು ವಿಷವೇಕೆ?
ಸಜ್ಜನಿಕೆ ಹೆಗ್ಗಳಿಕೆ – ಮುದ್ದುರಾಮ 533

ಬಿಸಿಲಿನಲಿ ನೊಂದವಗೆ ಉರಿಕೆಂಡ ಎಸೆಯುವುದೆ?
ಸೋತು ನಿಂದವಗೆ ಕಡುನುಡಿಯನಾಡುವುದೆ?
ದಿಕ್ಕೆಟ್ಟು ಬಂದವನ ಕಡಲೊಳಗೆ ನೂಕುವುದೆ?
ಸಾತ್ವಿಕತೆ ದಿವ್ಯತೆಯೊ! – ಮುದ್ದುರಾಮ 534

ಹಾರಿ ಸಾಗರ ಹನುಮ, ಸೇರಿ ಲಂಕೆಯ ವನವ
ಕೊಟ್ಟ ಸೀತೆಗೆ ತಂದ ರಾಮನುಂಗುರವ.
ನಿಶ್ಚಯವ ಮುಂದಿಟ್ಟು ನಡೆದರಿದೆ ಶ್ರೇಯಸ್ಸು;
ನಂಬಿಕೆಯೆ ಪ್ರೇರಣೆಯೊ! – ಮುದ್ದುರಾಮ 535

ಎಸಗಿ ಉಪಕಾರವನು ಮರೆತರದು ಕ್ಷೇಮ;
ಊದದಿರು ತುತ್ತೂರಿ ನೀ ಮಾಡಿದುದಕೆ.
ಯಾರೊ ಪಡೆದರು ನೆರವ; ಅದಕೆ ನೀ ಋಣಿ ಎನ್ನು.
ಕೊಟ್ಟೆನೆಂದರೆ ಕೆಟ್ಟೆ – ಮುದ್ದುರಾಮ 536

ಸಂಚಾರ ಸುಖವಿರಲಿ, ಬಾಳು ನಂದನ ಆಗ;
ಸುವಿಚಾರ ಒಳಬರಲಿ, ಮನಸು ಪ್ರೀತಿನಿಧಿ.
ಆಚಾರ ಚೆಲುವಿರಲಿ, ನಡೆ ಆಗ ಬಲುಸುಗಮ;
ಉಪಕಾರ ಜೀವಪರ – ಮುದ್ದುರಾಮ 537

ಕೊಟ್ಟವನೆ ಕಂಡವನು ಈ ಲೋಕ ಕಷ್ಟವನು;
ಕೊಡದೆ ಕೂಡಿಟ್ಟವನು ಕಾಂಚಾನ ಕುರುಡ.
ಕಣಜ ಬರಿದಾಗದಿರೆ ಕುಪ್ಪೆಯಾಗದೆ ಕೊಳೆತು?
ಕೊಡುಗೆ ಜೀವನಧರ್ಮ – ಮುದ್ದುರಾಮ 538

ತಾ ಪಡೆದೆನೆಂಬರಿವು ಪಡೆದವನಿಗಿರದಂತೆ
ಕೊಡುವಾಗ ಕೊಟ್ಟುಬಿಡು ಧನ್ಯಭಾವದಲಿ.
ನೀ ತಂದುದೇನನ್ನ? ಕೊಂಡೊಯ್ಯುವುದೇನನ್ನ?
ಕೊಡುಗೆ ಸಾರ್ಥಕ ಎಸಕ – ಮುದ್ದುರಾಮ 539

ನೆರವು ನೀಡಿದರಾರೊ! ಪಡೆದು ಅದ ನೀ ನಕ್ಕೆ.
ಮರೆಯದೆಯೆ ಆ ನೆರವ ಉಪಕಾರವೆಸಗು.
ಪಡೆದುದನು ಮರುಕೊಡುವುದೊಂದು ಸರಪಳಿ ಕ್ರಿಯೆಯೊ!
ಕೊಡುಗೆಯಲಿ ಮುದವಿದೆಯೊ! – ಮುದ್ದುರಾಮ 540

ಹೂ ತನ್ನ ಕಂಪನ್ನು ಬಚ್ಚಿಟ್ಟುಕೊಳ್ಳುವುದೆ?
ಮರೆಮಾಚುವುದೆ ಗಾಳಿ ತನ್ನ ತಂಪನ್ನ?
ಜಿಪುಣತನ ಮರೆಯಾಗಿ ಧಾರಾಳತನವಿರಲಿ;
ಮನ ಉದಾರತೆ ಮಿಗಿಲು – ಮುದ್ದುರಾಮ 541

ಕೊಡುವುದನು ಕಲಿಯದೆಯೆ ಪಡೆವುದನೆ ನೆನೆಯದಿರು;
ತೊಡು ನೀಡುದೀಕ್ಷೆಯನು ಜೀವನೆಮ್ಮದಿಗೆ.
ಇಡು ಜಲವ ಗಡಿಗೆಯಲಿ; ಹಕ್ಕಿ ಕುಡಿಯುತಲಿರಲಿ.
ಕೊಡುಗೆ ಜೀವನತಿಲಕ – ಮುದ್ದುರಾಮ 542

ಗುಲಗಂಜಿಯಷ್ಟು ನೀ ಉಪಕಾರವೆಸಗದೆಯೆ
ಏಕೆ ಮಣಗಟ್ಟಲೆಯ ಬರಿ ಬುದ್ಧಿಮಾತು?
ತೆನೆಯ ತೋರಿಕೆಗಿಂತ ತುತ್ತು ಕೊಡುಗೆಯೆ ಲೇಸು;
ನೀಡು ಕೈಲಾದಷ್ಟು – ಮುದ್ದುರಾಮ 543

ಕೊಡುಗೆಯಲಿ ನಮ್ರತೆಯ ಸಿರಿಬೆಳಕು ಪಸರಿಸಲಿ;
ಕೊಟ್ಟುದನೆ ಹಿರಿದು ಹಿರಿದೆನುತ ಉಬ್ಬದಿರು.
ತನ್ನ ತನುವನೆ ನಗುತ ಕೊಟ್ಟ ಶಿಬಿ ಉತ್ತಮನೊ!
ಕೊಡುತ ಮರೆವುದೆ ಲೇಸು – ಮುದ್ದುರಾಮ 544

ಸುಟ್ಟದ್ದು ನಿನದಲ್ಲ, ಜರಿದದ್ದು ನಿನದಲ್ಲ;
ಕೆಟ್ಟ ನಡೆನುಡಿ ಕೂಡ ನಿನ್ನದೇ ಅಲ್ಲ.
ಒಟ್ಟಿನಲಿ ಏನಿದೆಯೊ ನಿನ್ನದೆನ್ನುವುದಿಲ್ಲಿ?
ಕೊಟ್ಟದ್ದು ನಿನ್ನದೋ! – ಮುದ್ದುರಾಮ 545

ನಿನ್ನ ಕೈಲಾದಾಗ ನಾಳೆ ಬಾ ಎನ್ನದೆಯೆ
ಕೊಟ್ಟುಬಿಡು ಅಂದಂದೆ ಸಂತೋಷದಿಂದ.
ಕೊಡುವ ಪಡೆಯುವ ಮನಸು ನಾಳೆ ಬದಲಾದೀತು!
ಕೊಡುಗೆ ಎಂದರೆ ನಲಿವು – ಮುದ್ದುರಾಮ 546

ಕೊಟ್ಟು ನೀ ಕಿರಿದಷ್ಟು ತೋರದಿರು ಹಿರಿದಷ್ಟು;
ಮರೆಯದಿರು ನೀ ಕುಬ್ಜ ಹಿಮಗಿರಿಯ ಮುಂದೆ.
ಎಡದ ಕೈ ಕೊಟ್ಟುದನು ಲೇಸು ಬಲಗೈ ಮರೆಯೆ;
ಗುಪ್ತದಾನ ಅಪೂರ್ವ – ಮುದ್ದುರಾಮ 547

***

ತಬ್ಬಲಿಯ ಜೊತೆ ನಿಂತು ಕುಶಲ ಕ್ಷೇಮವ ಕೇಳಿ
ನೆರವಾಗು ಕಷ್ಟದಲಿ; ನೀಡು ಸಾಂತ್ವನವ.
ಅದು ಬಾಳಬೆಳಕ ಬಗೆ; ಅದು ಹಬ್ಬದಾಚರಣೆ;
ದೀಪಸಂಭ್ರಮ ಸೇವೆ – ಮುದ್ದುರಾಮ 548

ಎಷ್ಟು ವಿನಯವೊ ನಿನದು ಅಷ್ಟು ಎತ್ತರ ನೀನು;
ಇದೆ ಜೀವಸಾಫಲ್ಯ ಅನುಕಂಪೆಯಲ್ಲಿ.
ಪದವಿ ಸೇವೆಗೆ ಹೊರತು ಸ್ವಾರ್ಥಸಾಧನೆಗಲ್ಲ;
ಸೇವೆ ಜೀವನಗುರಿಯೊ! – ಮುದ್ದುರಾಮ 549

ತೆರಳಿದಳು ಪತಿ ಜೊತೆಗೆ ಅರಿತು ಕಷ್ಟವ ಸೀತೆ;
ಅಣ್ಣನೊಡಗೂಡಿ ಹೋದ ಲಕ್ಷ್ಮಣ ಬನಕೆ;
ಮಣಿದು ತಾ ಪಾದುಕೆಗೆ ರಾಜ್ಯವಾಳಿದ ಭರತ;
ಹನುಮ ಸೇವಾಕಾಂಕ್ಷಿ – ಮುದ್ದುರಾಮ 550

ಎಷ್ಟು ಕಷ್ಟವೊ ರಚನೆ, ಎಷ್ಟು ತುಡಿತವೊ ಒಲುಮೆ
ಅದಕಿಂತ ಅತಿ ಕಷ್ಟ ಬಿಡಿಸಿಕೊಳ್ಳುವಿಕೆ.
ನಿರ್ಮೋಹದಲ್ಲೊಂದು ಅತಿಶಯದ ಗರಿಮೆಯಿದೆ;
ಅಗಲಿ ನಿಲುವುದೆ ತ್ಯಾಗ – ಮುದ್ದುರಾಮ 551

ಇಣುಕದಿದ್ದರೆ ತ್ಯಾಗ ಬಾಳನಡೆ ಬುಡುಬುಡುಕೆ;
ತಾಯಿಮಮತೆಯ ಮುಂದೆ ಎಲ್ಲವೂ ಕಳಪೆ.
ನಾಟಕೀಯತೆ ಇಲ್ಲ ನಿಜ ಕೊಡುಗೆ ನಿಲುವಿನಲಿ;
ಸುಪ್ರೀತ ಮನ ತ್ಯಾಗ – ಮುದ್ದುರಾಮ 552

ಬಯಕೆ ಹುಚ್ಚೆದ್ದಾಗ ಅದೆ ಕಡಲಬಿರುಗಾಳಿ;
ಅಭಿಲಾಷೆ ಸರಿದಾಗ ಎದೆ ನಿರಾತಂಕ.
ಶ್ರೀಪಾದತಳದಲ್ಲಿ ಕಮಲ ಅರ್ಪಣೆ ಸುಖವೊ!
ತ್ಯಾಗ ಸಂಯಮಪೂಜೆ – ಮುದ್ದುರಾಮ 553

ನಿಜ ನುಡಿವ ತುಟಿಯಲಿದೆ ಮಂದಹಾಸದ ಮಿನುಗು;
ಸತ್ಯಸಂಧರ ಬಾಳು ಬಿಳಿಹಾಳೆಯಂತೆ.
ಕಪ್ಪುಚುಕ್ಕಿಗಳಿಲ್ಲ, ಮುಚ್ಚುಮರೆ ಇನಿತಿಲ್ಲ;
ಸತ್ಯ ರವಿಚೆಂಬೆಳಕು – ಮುದ್ದುರಾಮ 554

ಸತ್ಯಸಂಧನಿಗಿಲ್ಲ ತನ್ನ ಬಣ್ಣನೆ ಚಿಂತೆ;
ಇಲ್ಲ ಲೋಕದ ಭೀತಿ ಯಾವ ವಿಷಯದಲಿ.
ನಡೆ ಶುದ್ಧ, ನುಡಿ ಶುದ್ಧ; ಆಗ ಜೀವನ ಶುದ್ಧ.
ಸತ್ಯ ಶುದ್ಧತೆಸಾರ – ಮುದ್ದುರಾಮ 555

ಹಾಡಿ ಸುಳ್ಳಿನ ಪದವ ಮಾನ್ಯರಾದವರಾರೊ?
ಜಾಡು ತಪ್ಪದೆ ಇಹುದೆ ಪರನಿಂದೆಯಿಂದ?
ಚಾಡಿ ಮಾತಾಡಿದರೆ ದುಗ್ಗಾಣಿ ಬೆಲೆಯಿಲ್ಲ;
ಆಡುತಿರು ಸತ್ಯನುಡಿ – ಮುದ್ದುರಾಮ 556

ಒಂದು ಸುಳ್ಳಿನ ಹಿಂದೆ ನಿನಗರಿಯದೆಯೆ ಏಕೊ
ಕಾದು ಕುಳಿತಿದೆ ನೂರು ಸುಳ್ಳು ಸರಮಾಲೆ.
ಇದರಿಂದ ಪೇಚಾಟ, ಬಗೆಬಗೆಯ ಪರದಾಟ;
ದಿಟ ನುಡಿದು ನಗುತಲಿರು – ಮುದ್ದುರಾಮ 557

ಸತ್ಯವನು ಅರಿತವಗೆ ಒಳಹೊರಗೆಂಬುದೆಲ್ಲಿ?
ಕುಲಜಾತಿ ಕೀಳರಿಮೆ ಸೂತಕಗಳೆಲ್ಲಿ?
ಪರಮ ತತ್ವದ ಎದುರು ಸುಳ್ಳುಕಂತೆಗಳೆಲ್ಲಿ?
ನಿಜನೆಲೆಗೆ ಸೆರೆಯಿಲ್ಲ – ಮುದ್ದುರಾಮ 558

ಏನೇನೊ ನೆಪವೊಡ್ಡಿ ಸತ್ಯ ಮರೆಮಾಚದಿರು;
ಸುಳ್ಳು ಹೇಳುವ ಚಾಳಿ ಪ್ರಾಣಘಾತಕವೊ!
ದಿಟಮಾತು ಕೆಲವೊಮ್ಮೆ ತರಬಹುದು ತಲ್ಲಣವ;
ಸತ್ಯನುಡಿ ಜೀವಸಿರಿ – ಮುದ್ದುರಾಮ 559

ರಘುರಾಮಚಾರಿತ್ರ್ಯ ಭಾವಿಸುತ ಮನದಲ್ಲಿ
ಒತ್ತುಕೊಡು ನಿರತ ಸದ್ಧರ್ಮಚಾಲನೆಗೆ.
ಸತ್ಯಸಂಧತೆಯಿಂದ ಈ ಬಾಳಿನುದ್ಧಾರ;
ರಾಮ ಮಾದರಿ ಜಗದಿ – ಮುದ್ದುರಾಮ 560

ತಾನು ಗೆದ್ದುದ ಮರೆತು ತ್ಯಾಗ ಮಾಡುವರಾರೊ
ಅವರಿಗಿದೆ ಲೋಕದಲಿ ಗೊಮ್ಮಟನ ನಿಲುವು.
ಇಣುಕಲಿಕೆ ಗಾಂಭೀರ್ಯ ಬೇಕು ಸಂಯಮ ಮನದಿ;
ಸಹನೆ ಜಿನಸಂಸ್ಕೃತಿಯೊ! – ಮುದ್ದುರಾಮ 561

ಜೀವಾನುಭವದಿಂದ ಪರಿಪಕ್ವವೋ ಸಹನೆ!
ಅನುಭವದ ಸಾರ ಈ ಜಾಣ್ಮೆ ನೈಪುಣ್ಯ.
ಕಾಲಋತು ಪಯಣದಲಿ ಇದೆ ತಾಳ್ಮೆ ಸಾಲುಮರ;
ಸಹನೆ ಸಂತಸ ತಾಣ – ಮುದ್ದುರಾಮ 562

ಆತುರಾತುರದಿಂದ ಮೊಗ್ಗಾಗಿ, ದಳ ತೆರೆದು
ಹೂ ಬಿಡುವಾಸೆ ಇಲ್ಲ ಮಲ್ಲಿಗೆ ಲತೆಗೆ.
ಗಂಗೋತ್ರಿ ಜಲಕಿಲ್ಲ ಒಡನೆ ಕಡಲಿನ ಬೆಸುಗೆ;
ಶಕ್ತಿಯಾಗರ ಸಹನೆ – ಮುದ್ದುರಾಮ 563

ಅರಿತೊ ನೀ ಅರಿಯದೆಯೊ ಬಂದಾಯಿತೀ ಇಳೆಗೆ;
ನಡೆಯುವುದು ಅನಿವಾರ್ಯ ನೀ ಹೊಂದಿಕೊಂಡು.
ಬಂದುದನು ನಗುನಗುತ ಒಪ್ಪದಿರೆ ಗತಿಯಿಲ್ಲ;
ತಾಳ್ಮೆ ಜೀವನ ಮಾರ್ಗ – ಮುದ್ದುರಾಮ 564

ಯಾರೆಷ್ಟೆ ದ್ವೇಷಿಸಲಿ, ಯಾರೆಷ್ಟೆ ನಿಂದಿಸಲಿ
ವಾಗ್ವಾದಕಿಳಿಯದಿರು ನೀ ಕೋಪದಿಂದ.
ಹಗೆತನಕೆ ಹಗೆಯಲ್ಲ, ಪ್ರೀತಿಯೊಂದೇ ಮದ್ದು;
ತಾಳ್ಮೆ ಜೀವನಗೆಳೆಯ – ಮುದ್ದುರಾಮ 565

ಕೋಪದಲಿ ಆತುರದಿ ಪರಮೂಗ ಕತ್ತರಿಸಿ
ಬಳಿಕ ತಾಪಕೆ ಸಿಲುಕಿ ನರಳದಿರು ಬರಿದೆ.
ತರದೆಮಗೆ ರಭಸನುಡಿ ಮನದಾಳ ನೆಮ್ಮದಿಯ;
ತಾಳ್ಮೆಯಿಂದಲೆ ಶಾಂತಿ – ಮುದ್ದುರಾಮ 566

ನೂರೊಂದು ಗೊಂದಲದ ಸಂಚಯದ ಲೋಕವಿದು;
ಯಾವುದಾವುದು ಎಂತು ತಲೆದೋರುವುದೊ ಏನೊ!
ಬಂದುದಕೆ ಭಯಪಡದೆ ಇರು ಸಾವಧಾನದಲಿ;
ತಾಳ್ಮೆಯಲ್ಲಿದೆ ತಂಪು – ಮುದ್ದುರಾಮ 567

ಕೇಡೆಣಿಸಿ ನಗುವವನ ತಪ್ಪ ಮರೆವುದು ಕಷ್ಟ;
ಅವನ ಮುಗಿಸುವ ಇಚ್ಛೆ ಇರುವುದತಿ ಸಹಜ.
ಅಪವಾದವಾಗಿದಕೆ ನಿಂತವನೆ ಉತ್ತಮನೊ!
ಕ್ಷಮೆ ಮನುಜ ಪರಮಗುಣ – ಮುದ್ದುರಾಮ 568

ಪುಟ್ಟ ಮಕ್ಕಳು ಏನೊ ತಪ್ಪ ಮಾಡಿದರೆಂದು
ಹಿರಿಯರಾದವರದನೆ ಪುನರುಕ್ತಿಸುವುದೆ?
ತನ್ನ ಉಗಿದರು ಎಂದು ತಿರೆ ಕುಸಿದರೇನು ಗತಿ?
ಕ್ಷಮೆಗೆ ಸಮ ಯಾವುದಿದೆ? – ಮುದ್ದುರಾಮ 569

ಜಗಲಿಯಲಿ ಕುಳಿತವಗೆ ಇದೆ ಲೋಕಸೌಂದರ್ಯ;
ಪರಿತುಷ್ಟಿ ಮನದವಗೆ ಪುಂಗಿ ಹಂಗಿಲ್ಲ.
ಮೋಹಸುಳಿ ಮರೆತವಗೆ ಇದೆ ಅಮಿತ ಸಂತೃಪ್ತಿ;
ಸರಳತೆಯೆ ಹಸೆಮಣೆಯೊ! – ಮುದ್ದುರಾಮ 570

ಸಿರಿಯ ತೋರಿಕೆಯಲ್ಲಿ ಇದೆ ಅಹಮಿಕೆಯ ಸೋಂಕು;
ನಿನಗಿಂತ ನಾ ಮೇಲು ಎಂಬ ತುಡಿತವಿದೆ.
ನಾನತ್ವ ಕೊರತೆಯಲಿ ಮಾನವತೆ ಮಿಂಚುವುದೊ!
ಸರಳತೆಯೆ ಉತ್ತಮಿಕೆ – ಮುದ್ದುರಾಮ 571

ಸರಳತೆಯ ಹೂವಿನಲಿ ಚುಚ್ಚುಮುಳ್ಳುಗಳಿಲ್ಲ;
ಇದೆ ಅಲ್ಲಿ ಮೈಗೂಡಿ ಸೌಜನ್ಯಕಂಪು.
ಮಾರ್ದವತೆಯಿಂದಷ್ಟೆ ಬಾಳಸಂಪನ್ನತೆಯೊ!
ತೃಪ್ತಿ ಸರಳತೆಯಿಂದ – ಮುದ್ದುರಾಮ 572

ಭಕ್ತಿ ಅಭಿಮುಖದಲ್ಲಿ ಕಾಯಕೊಬ್ಬಳಿದಂತೆ
ವಿನಯ ನವನೋಟದಲಿ ಬೆರಗ ಸಂಕೇತ.
ಕಾಲಚಕ್ರದ ಚಿತ್ರ ಮಾಗುವಿಕೆಯಲಿ ಅಂದ;
ಸಹಜತೆಯೆ ನಿಜಮೌಲ್ಯ – ಮುದ್ದುರಾಮ 573

ಮತದ ಹೆಚ್ಚಳದಿಂದ ಗದ್ದುಗೆಯ ಗೆಲುವಿರಲಿ
ಹುಟ್ಟುಕುಲದಿಂದನಿತು ಅಧಿಕಾರವಿರಲಿ
ಎಂದು ನಮ್ರತೆ ಬರಿದೊ ಅಂದು ಅವನತಿ ಖಚಿತ.
ಸೌಜನ್ಯ ಸಂಪದವೊ! – ಮುದ್ದುರಾಮ 574

ಆಯಿತಾಯಿತು ಎಲ್ಲ ನನ್ನಿಂದಲೇ ಎನುತ
ಬೀಗದಿರು ಬಿರುಸಿಂದ; ಪಸರದಿರು ಬೇಗೆ.
ಕೊಡೆ ಹಿಡಿದು ಇರುಳಲ್ಲಿ ಓಡಾಡದಿರು ಬರಿದೆ;
ಇರಲಿ ನಮ್ರತೆ ನಿರತ – ಮುದ್ದುರಾಮ 575

ಬಿರುಗಾಳಿ ಎದುರಲ್ಲಿ ಸೆಟೆದ ಪಾದಪ ಉರುಳಿ
ಮೆಲ್ಲ ಬಾಗಿದ ಗರಿಕೆ ಅಳಿಯದುಳಿಯುವುದು.
ಇನಿತು ಮುಳುಗದೆ ಬೆಂಡು ಸಾಗದೇ ಸರಿತೆ ಜೊತೆ?
ನಮ್ರತೆಗೆ ಎಣೆಯುಂಟೆ? – ಮುದ್ದುರಾಮ 576

ಅಂದು ಜೋಳಿಗೆ ಹಿಡಿದು, ಇಂದು ಗದ್ದುಗೆ ಏರಿ
ಹಳೆಕತೆಯ ಮರೆಯುವುದೆ ಹಮ್ಮುಬಿಮ್ಮಿಂದ?
ಸರಳತೆಯ ತೂರಿದರೆ ಇದೆ ಬಾಳ ಬಿರುಗಾಳಿ;
ವಿನಯ ಜೀವನಗರಿಮೆ – ಮುದ್ದುರಾಮ 577

ಹೊಳೆದರಲ್ಲವೆ ತಾರೆ? ನಲಿದರಲ್ಲವೆ ನವಿಲು?
ಬಿರಿದರಲ್ಲವೆ ಕಮಲ ಕೆರೆ ಕೆಸರಿನಲ್ಲಿ?
ಬೀಸಿದರೆ ಅದು ಎಲರು; ತಾಗಿದರೆ ಅದು ಬಾಣ.
ಬಾಗಿದರೆ ಅದು ವಿನಯ – ಮುದ್ದುರಾಮ 578

ಕನಸೊಂದು ತಪ್ಪಲ್ಲ; ಹಗಲುಗನಸೋ ತಪ್ಪು!
ನೆನೆದದ್ದ ಕ್ರಿಯೆಯಲ್ಲಿ ಕಾಣದಿರೆ ತಪ್ಪು.
ದುಡಿಮೆ ಕದ ಮುಚ್ಚಿದರೆ ಎಲ್ಲಿ ಗೆಲುವಿನ ಬೆಳಕು?
ಶ್ರದ್ಧೆ ಜಯಸೋಪಾನ – ಮುದ್ದುರಾಮ 579

ಚಾಂಚಲ್ಯದಲೆ ಎದ್ದು ಬಿರುಗಾಳಿ ಸುಳಿದಾಗ
ಮನದೋಣಿ ಅತ್ತಿತ್ತ ಅಲುಗಾಡದಿರಲಿ.
ಧೀರ ನಾವಿಕನಂತೆ ಚರಿಸು ನೀ ನಿರ್ಭಯದಿ;
ಶ್ರದ್ಧೆ ದೀಪಸ್ತಂಭ – ಮುದ್ದುರಾಮ 580

ಆಲ ತರುವಿನ ಬೀಜ ಅತಿ ಚಿಕ್ಕದಿರಬಹುದು;
ನಾಳೆ ಹೆಮ್ಮರವಾಗಿ ನೆರಳ ತರದಿಹುದೆ?
ಕಾರ್ಯ ಯಾವುದೇ ಇರಲಿ ಕಿರಿದಲ್ಲ ಗರಿಮೆಯಲಿ;
ಶ್ರದ್ಧೆ ಮೈಗೂಡಿರಲಿ – ಮುದ್ದುರಾಮ 581

ಅವಿಚಾರ ಸಾಗರದ ಸುಳಿಯೊಳಗೆ ಸಿಲುಕಿದರೆ
ನಂಬಿಕೆಯ ಹರಿಗೋಲು ಚೂರಾಗದಿಹುದೆ?
ಶ್ರದ್ಧೆ ಪಾರಮ್ಯದಲ್ಲಿ ಅಪರಿಮಿತ ಶಕ್ತಿಯಿದೆ;
ನಿಷ್ಠೆ ಸುಖದಡಿಗಲ್ಲು – ಮುದ್ದುರಾಮ 582

ಸೋಗು ವೇಷವ ತೊಟ್ಟು, ನೂರು ಸಟೆ ನುಡಿ ನುಡಿದು
ದೇವನೆದುರಲಿ ನಿಂತು ಕೈಮುಗಿವೆ ಹೇಗೆ?
ಮನ–ಮಾತು ಒಂದಾಗದಿರೆ ಒಲಿಯನೋ ಈಶ!
ಗಟ್ಟಿಯಾಗಲಿ ನಿಷ್ಠೆ – ಮುದ್ದುರಾಮ 583

ವಂಚನೆಯ ಹೊರದಟ್ಟಿ ನಡೆಯುವುದೆ ನೇಮ;
ನಿಜದ ಮಾರ್ದನಿಯಾಗಿ ನೀಡುವುದೆ ನೇಮ.
ಹುಸಿಗೆ ಮನವೆಳಸದಿರೆ ಸಂತೃಪ್ತಿ ಆ ನೇಮ;
ಹಿರಿದ ನೆನೆವುದೆ ನೇಮ – ಮುದ್ದುರಾಮ 584

ತನ್ನದೆನ್ನುವ ಭಾವ ಸುಳಿಯದಿರೆ ಮಾಟದಲಿ
ನಿಯತಿ ಸುರಿವುದು ಸತತ ಸಂತೃಪ್ತಿಮಳೆಯ.
ಮಾಡಿದುದ ಮರೆತವರೆ ನಮಗಿಂದು ಆದರ್ಶ;
ಉಪಕಾರ ಸುವಿಚಾರ – ಮುದ್ದುರಾಮ 585

ಶಿಸ್ತೆನುವುದಿಲ್ಲದಿರೆ ಋತುಚಕ್ರ ಎಲ್ಲಿದೆಯೊ!
ಮುಗಿಲೆನುವುದಿಲ್ಲದಿರೆ ಮಳೆಯ ಹನಿ ಎಲ್ಲಿ?
ಕಕ್ಷೆಯಲಿ ತಿರುಗದಿರೆ ತಿರೆಗೆ ಭದ್ರತೆ ಇದೆಯೆ?
ಸೃಷ್ಟಿಕೊಡುಗೆಯೊ ಶಿಸ್ತು! – ಮುದ್ದುರಾಮ 586

ಶಿಸ್ತೊಂದು ಪರಿಪಾಠ ಮುನ್ನಡೆಗೆ ಸಾಧನೆಗೆ;
ಕಾಲಪ್ರಜ್ಞೆಯ ಅರಿವು ಶಿಸ್ತಿನೊಡನಾಡಿ.
ಆಲಸ್ಯ ನೀರಿನಲಿ ಎಲ್ಲಿ ಅವಭೃತ ಸ್ನಾನ?
ಜಯಕೆ ಸಾಧನ ಶಿಸ್ತು – ಮುದ್ದುರಾಮ 587

ಶಿಸ್ತಿಂದ ಓರಣವೊ! ನೂರೊಂದು ಸಂತಸವೊ!
ಸೃಜನಶೀಲತೆಗೆ ಇದುವೆ ಅನುಪಮ ಸ್ಫುರಣ,
ಕತ್ತಲಿನ ನೆಲೆಯಲ್ಲಿ ಪ್ರಜ್ವಲಿಪ ದೀವಟಿಗೆ.
ಶಿಸ್ತು ಒಳಿತಿಗೆ ದಾರಿ – ಮುದ್ದುರಾಮ 588

ನಿಶ್ಚಯದ ಗುರಿಗೊಂದು ಶಿಸ್ತಿನಾದ್ಯತೆ ಇರಲಿ;
ಕಾರ್ಯ ಪೂರೈಸಲಿಕೆ ಶಿಸ್ತೆ ತಳಹದಿಯೊ!
ಶಿಸ್ತು ಪರಿಪಾಲನೆಯೆ ನಾಂದಿ ಭಾಗ್ಯೋದಯಕೆ;
ಶಿಸ್ತೊಂದು ಅಭ್ಯಾಸ – ಮುದ್ದುರಾಮ 589

ಇದ್ದರಡ್ಡಾದಿಡ್ಡಿ ಎಲ್ಲ ಚೆಲ್ಲಾಪಿಲ್ಲಿ;
ಅಚ್ಚುಕಟ್ಟಿಲ್ಲದಿರೆ ಅಚ್ಚುಮೆಚ್ಚೆಲ್ಲಿ?
ಒಪ್ಪಓರಣದಿಂದ ಮೆಚ್ಚುಗೆಯ ನುಡಿಮಾಲೆ;
ನಿಯಮವಾಗಲಿ ಶಿಸ್ತು – ಮುದ್ದುರಾಮ 590

ನಿರ್ದಿಷ್ಟ ಜಾಗದಲಿ ಇರಲಿ ಆಯಾ ವಸ್ತು;
ಒಡನೆ ಅರಸಲಿಕೆ ಈ ಶಿಸ್ತು ಸಂಗಾತಿ.
ಯಾವುದಸ್ತವ್ಯಸ್ತ ಕಿರಿಕಿರಿಗೆ ಅದೆ ಮೂಲ;
ಶಿಸ್ತು ಜೀವನಮಿತ್ರ – ಮುದ್ದುರಾಮ 591

ಕಂಬನಿಯನೊರಸುತ್ತ ಬಳಿ ನಿಂತವನೆ ಮಿತ್ರ.
ಬಾಳಹಣತೆಗೆ ಪ್ರೀತಿ ತೈಲ ತರುವಾತ;
ಸೂಕ್ಷ್ಮತೆಯ ಗುಣವರಿತು ಅದಕಿಂಬುಕೊಡುವಾತ.
ಸುಮನ ಪರಿಮಳ ಮೈತ್ರಿ – ಮುದ್ದುರಾಮ 592

ನದಿಯ ಸುಳಿಯಲಿ ಸಿಲುಕಿ ಹಾತೊರೆಯುತಿರುವಾಗ
ನಿನ್ನ ದಡಕೆಳೆವವನೆ ನಿಜದಿ ನೇಹಿಗನೊ!
ಸೋಗು ಮಾತಾಡದೆಯೆ ಬಳಿ ನಿಂತವನೆ ಮಿತ್ರ;
ಬಾಳಪೌರ್ಣಿಮೆ ಸ್ನೇಹ – ಮುದ್ದುರಾಮ 593

ಮಿತ್ರರಾದವರೆಂದು ಆಗಬಾರದು ಶತ್ರು;
ಅದು ರಥದ ಕುದುರೆ ತಾ ಉರುಳಿ ಬಿದ್ದಂತೆ.
ಎತ್ತು ಇಲ್ಲದ ಮೇಲೆ ಗಾಡಿ ಚಲಿಸುವುದೆಂತು?
ಮೈತ್ರಿ ನಿಜಮನಮಿಲನ – ಮುದ್ದುರಾಮ 594

ಯಾರಾಪ್ತರೋ ಅವರು ಎಲ್ಲಿರಲಿ ನೆನೆಯುವರು;
ಬದಿಯಲಿದ್ದರೆ ಏನು ನೀನೊಲ್ಲದವರು?
ಅಳತೆಗೆಟುಕದ ವಸ್ತು ಈ ಮನುಜ ಬಾಂಧವ್ಯ;
ಅನ್ಯೋನ್ಯತೆಯೆ ಸ್ನೇಹ – ಮುದ್ದುರಾಮ 595

ಸತ್ರದಲಿ ಪರಮಾನ್ನದಾತಿಥ್ಯ ದೊರಕುವಿಕೆ
ಚಿತ್ರವಧು ತುಟಿ ತೆರೆದು ಮಾತಾಡಿದಂತೆ.
ಪುತ್ರ ಪೌತ್ರಾದಿ ಸುಖ ಪೂರ್ವಪುಣ್ಯದ ಫಲವೊ!
ಮಿತ್ರ ಈ ಜಗದ ವರ – ಮುದ್ದುರಾಮ 596

ನಂಬದಿರೆ ದಾರಿಯನು ಊರ ಸೇರುವೆ ಹೇಗೆ?
ನಂಬಿ ನೆಚ್ಚದ ಮನಸ ಸುಡು ಬೆಂಕಿಯಲ್ಲಿ.
ನಂಬಿಕೆಯೆ ಅಡಿಪಾಯ ಅನುಭಾವ ಮಾರ್ಗದಲಿ;
ನಂಬಿ ನಡೆವುದೆ ಲೇಸು – ಮುದ್ದುರಾಮ 597

ಕವಚ ಹೋದರೆ ಏನು? ದಾನಶೂರನೊ ಕರ್ಣ!
ತಿರೆ ಅಳಿದರೇನು? ಬಲಿ ಸತ್ಯಪಾಲಕನೊ!
ನಾಡ ತೊರೆದರೆ ಏನು? ರಾಮ ಪುರುಷೋತ್ತಮನೊ!
ನಂಬು ನಂಬೆಲೊ ಮನಸೆ! – ಮುದ್ದುರಾಮ 598

***

ಅಜ್ಜಿ ಅಳುವುದ ಕಂಡು ಕಂದ ತಾ ಬಳಿ ಬಂದು
ಒರಸುವುದು ಕಂಬನಿಯ ಏಕಳುವೆ ಎಂದು.
ಬೋಳಾದ ಬಾಳಿನಲಿ ಮಮತೆ ಪ್ರೀತಿಯ ತಳಿರು;
ಮುಗ್ಧತೆಯೆ ದಿವ್ಯತೆಯೊ! – ಮುದ್ದುರಾಮ 599

ನೆರಳೀಗಾಸರೆ ಹೊಂಗೆ; ನೋವಿಗಾಸರೆ ಕರುಣೆ.
ಆಸರೆಯ ತಂಪಿನಲಿ ಬೀಜ ವಟವೃಕ್ಷ.
ಸುಪ್ತ ಪ್ರತಿಭೆಯನರಸಿ ನೆರವಾಗು ಚಿಗುರಿಕೆಗೆ;
ಒತ್ತಾಸೆ ಅಪರಂಜಿ – ಮುದ್ದುರಾಮ 600

ಮನದ ಗೂಡಿನಲೊಂದು ಪ್ರೀತಿ ಹಣತೆಯ ಹಚ್ಚು;
ಘನದ ಎದುರಲಿ ನಿಂತು ನಯದಿ ತಲೆಬಾಗು.
ದಿನದ ಚಿಂತೆಯ ಮರೆತು ನಿಜಕೆ ಅಭಿಮುಖನಾಗು;
ಅನುನಯಕೆ ಶರಣಾಗು – ಮುದ್ದುರಾಮ 601

ರಮಣೀಯ ನೋಟದಲಿ ದಿವ್ಯತೆಯ ಕಾಣ್ಕೆಯಿದೆ;
ಮನನೀಯ ಮಾತಿನಲಿ ಸರಸ ಸೌಖ್ಯವಿದೆ.
ಕಮನೀಯ ಮಾಟದಲಿ ಭವ್ಯತೆಯ ಸ್ಪರ್ಶವಿದೆ;
ಕೋಮಲತೆ ಜೀವರಸ – ಮುದ್ದುರಾಮ 602

ಹಸಿದೊಡಲ ಇರುಳಲ್ಲಿ ತರದೆ ಅನ್ನದ ಬೆಳಕ
ಎಷ್ಟು ಹಚ್ಚಿದರೇನು ಸಾಲು ಹಣತೆಗಳ?
ತೆನೆ ತೂಗಿದರೆ ಸುಗ್ಗಿ; ಮನದಾರ್ದ್ರತೆಯೆ ಹಬ್ಬ;
ಕರುಣೆ ದೀಪಾವಳಿಯೊ! – ಮುದ್ದುರಾಮ 603

***

ಹಿತನುಡಿಯನಾಲಿಸಿದ ಮನಸು ಹಿರಿದಾಗುವುದು;
ಸದ್ಭಾವನೆಯ ನುಡಿಗೆ ಮಾರುಹೋಗುವುದು.
ನೆರಳೀವ ಪಾದಪದ ತಂಪು ನೆನಪಾಗುವುದು;
ಶುಭನುಡಿಯಲಿದೆ ಪ್ರೀತಿ – ಮುದ್ದುರಾಮ 604

ಯಾರು ಏನೆಂದಾರೊ! ನಾಳೆ ಏನಾದೀತೊ!
ಎಂಬಳಕು ನುಗ್ಗಿದರೆ ಅಲ್ಲಿ ಒಲವೆಲ್ಲಿ?
ಹನಿ ಮುನಿಯಿತೆಂದೇನು ಮುಗಿಲು ತೇಲದೆ ಇಹುದೆ?
ಪ್ರೀತಿಯಲಿ ಭಯವಿಲ್ಲ – ಮುದ್ದುರಾಮ 605

ಕರೆದು ಅತಿಥಿಯ ಮನೆಗೆ, ಬಡಿಸಿ ಸಿಹಿ ಪಾಯಸವ
ಮುನಿದು ಮೂದಲಿಸಿ ಒರಟುನುಡಿಯಾಡುವುದೆ?
ಪಾಕ ರುಚಿಯಾಗಲಿಕೆ ಬೇಕು ಭಾವದ ನಂಟು;
ಪ್ರೀತಿ ಆರೋಗಣೆಯೊ! – ಮುದ್ದುರಾಮ 606

ಮಿಲನಸಂತಸದಿಂದ, ಭಾವತೀವ್ರತೆಯಿಂದ
ಗರಿಗೆದರಿ ಹಾರುವುದು ರಾಗಬಾನಾಡಿ.
ನಯದ ಸಂವಾದದಲಿ ಹಾರಾಟ ಮೋದವಿದೆ;
ಪಾರಿವಾಳವೊ ಪ್ರೀತಿ! – ಮುದ್ದುರಾಮ 607

ಭೀತಿಗಾಳಾದವರು ಮಾಡಬಾರದು ಪ್ರೀತಿ;
ಕುದುರುವುದೆ ಅನುರಾಗ ಭಯದ ನೆರಳಲ್ಲಿ?
ಕಡಿವಾಣದೆಳೆತದಲಿ ಗತಿಮಾಂದ್ಯ ಅತಿಸಹಜ;
ಹಾರುಹಕ್ಕಿಯೊ ಪ್ರೀತಿ! – ಮುದ್ದುರಾಮ 608

ಒಂದನೊಂದಕೆ ಒಲಿಸಿ ತರುತ ಮಿಲನದ ಮುದವ
ಚಿತ್ತದಲಿ ರೂಪಿಸುವನೆಂತೊ ಅನುರಾಗ?
ಜೀವಜೀವದ ಬೆಸುಗೆ ಯಾವ ಜನುಮದ ಫಲವೊ!
ಪ್ರೀತಿ ನಿಯತಿಯ ರೀತಿ – ಮುದ್ದುರಾಮ 609

ಒಲವಿನಾರಾಧನೆಗೆ ನಂಬಿಕೆಯೆ ನೈವೇದ್ಯ;
ಉಲಿವ ಪಿಸುಮಾತೆ ಕರ್ಪೂರರದಾರತಿಯೊ!
ಚೆಲುವುನಲಿವಿನ ಪೂಜೆ ಮೊಗದ ಸುಂದರ ಭಾವ;
ತಳಿರತೋರಣ ಒಲವು – ಮುದ್ದುರಾಮ 610

ಮನವೆರಡು ಒಂದಾದ ಸ್ಪಂದನೆಯೆ ಅನುರಾಗ;
ಕನಸೊಂದು ನನಸಾದ ಆ ನಿಲುಮೆ ಒಲುಮೆ.
ನೆನಪುಹೂ ಕಂಪೆರೆವ ನಿಜತಾಣವೇ ಪ್ರೀತಿ;
ಕೊನರಿ ನಿಲುವುದೆ ಒಲವು – ಮುದ್ದುರಾಮ 611

ಪ್ರೀತಿ ತಂತಿಯಲೊಂದು ಮೆದುಭಾವ ಮಿಡಿತವಿದೆ,
ತಂಪೆಲರಿನಾಮೋದ ನಾದಸೌಖ್ಯವಿದೆ.
ನಂಟು ರಾಗದ ಕಂಪು; ಇಂಪು ಜೀವನ ಸೊಂಪು.
ಒಲುಮೆ ಮಾಧುರಿ ವೀಣೆ – ಮುದ್ದುರಾಮ 612

ಪ್ರೀತಿಪ್ರೇಮವನಿಲ್ಲಿ ಧಿಕ್ಕರಿಸುವವರಾರು?
ಅಶ್ಲೀಲ ನಗ್ನತೆಗೆ ತಕರಾರು ಅಷ್ಟೆ.
ರಸಿಕತೆಗೆ ಬೀದಿಯಲಿ ತಮಟೆ ಬಾರಿಸಬೇಕೆ?
ಒಲುಮೆ ವೀಣಾನಾದ – ಮುದ್ದುರಾಮ 613

ತನದೆನುತ ತನಗಾಗಿ ದೋಚುತ್ತ ತುಂಬಿಡುವ
ಜಿಪುಣತನವೆಲ್ಲಿಹುದೊ ಅಲ್ಲಿ ಒಲವಿಲ್ಲ.
ಕೊಡುತ ನಗೆ ಚಿಮ್ಮಿಸುವ ಮನದಿ ಇದೆ ನಿಜ ಒಲುಮೆ;
ಒಲವಿನಲಿ ತ್ಯಾಗವಿದೆ – ಮುದ್ದುರಾಮ 614

ಕೂಡಿ ಬರದಿರೆ ನಂಟು ಒಲವಿನಲಿ ಚೆಲುವೆಲ್ಲಿ?
ಅನುಮಾನ ನೆಲೆಯಲ್ಲಿ ಸಂತೋಷವೆಲ್ಲಿ?
ಹಮ್ಮು ಕೆಳಗಿಳಿಯದಿರೆ ಮೈತ್ರಿಸಮರಸವೆಲ್ಲಿ?
ಒಲುಮೆ ನಂಬಿಕೆಕೊಂಡಿ – ಮುದ್ದುರಾಮ 615

ಒಂಟಿತನ ಮರೆಯಾಗಿ ಕುದುರಿದರೆ ಬಾಂಧವ್ಯ
ಆ ಗಳಿಗೆ ಸುಖಹನಿಯೆ ಉಲ್ಲಾಸ ಸಿಂಧು!
ಸಂಸಾರ ಕಡಲಲ್ಲಿ ಪ್ರೀತಿ ಸುಂದರ ದ್ವೀಪ;
ಒಲುಮೆ ತೆರೆಯೇ ನಂಟು! – ಮುದ್ದುರಾಮ 616

ತರವಲ್ಲ ಒಲವಿನಲಿ ಆತುರಾತುರ ಹೆಜ್ಜೆ;
ಕಣ್ಣನ್ನೆ ನಗುವನಕ ರಮಿಸುತಿರಬೇಕು.
ಒರಟುತನ ಇಣುಕಿದರೆ ಬಾಗುಬಳುಕುಗಳೆಲ್ಲಿ?
ಬಣ್ಣ ಚಿಲುಮೆಯೊ ಪ್ರೀತಿ! – ಮುದ್ದುರಾಮ 617

***

ಕಷ್ಟದಲಿ ನೆರವಾಗಿ ನಿಂತವನೆ ನೇಹಿಗನೊ!
ಶುಭ ನೆನೆವ ಸುಗುಣವಿದೆ ಸಜ್ಜನಿಕೆಯಲ್ಲಿ.
ಆಪ್ತತೆಯ ಅಭಿವ್ಯಕ್ತಿ ನೂರಾನೆ ಬಲಕೆ ಸಮ;
ಚಾಚು ನೆರವಿನ ಹಸ್ತ – ಮುದ್ದುರಾಮ 618

ನೀ ಇಂದ್ರ, ನೀ ಚಂದ್ರ ಎನುತ ಹೊಗಳುತ ನಿತ್ಯ
ನೀ ಹಂಗಿಗೊಳಗಾಗಿ ತಿರುಪೆ ಬೇಡದಿರು.
ಸ್ವಾಭಿಮಾನವ ಬಿಟ್ಟು ಗೋಗರೆದರೇನಿದೆಯೊ?
ನಿಲ್ಲು ನೀ ತಲೆ ಎತ್ತಿ – ಮುದ್ದುರಾಮ 619

ತನ್ನತನ ಎಲ್ಲಿಹುದೊ ಇದೆ ಅಲ್ಲಿ ಗಟ್ಟಿತನ;
ಹೊನ್ನಿನಾಭರಣ ಮನುಜರಿಗೆ ಅಭಿಮಾನ.
ನಿನ್ನೆಮೊನ್ನೆಯದಲ್ಲ ಸ್ವಾಭಿಮಾನದ ಚರಿತೆ;
ಸೊನ್ನೆಯಲ್ಲವೊ ಹೆಮ್ಮೆ! – ಮುದ್ದುರಾಮ 620

ಬಿದ್ದು ನೀ ಕೂಪದಲಿ ನರಳದಿರು ತಮದಲ್ಲಿ;
ಎದ್ದು ನೀ ನಡೆಯದಿರೆ ಪಯಣ ಪೆಂಪೆಲ್ಲಿ?
ಗೆದ್ದು ತಲೆಯೆತ್ತದಿರೆ ಅಭಿಮಾನ ಸಿರಿ ಎಲ್ಲಿ?
ಬುದ್ಧತನ ಬೆಳಕಲ್ಲಿ – ಮುದ್ದುರಾಮ 621

ಮಾನಭಂಗವ ಮಾಡಿ ಬಡಿಸಿದರೆ ಮೃಷ್ಟಾನ್ನ
ಮೇಲೆದ್ದು ಅಲ್ಲಿಂದ ನಗುತ ಹೊರಟುಬಿಡು.
ಆತ್ಮಗೌರವಕಿಂತ ಹಿರಿದೆನುವುದಾವುದಿದೆ?
ಅಭಿಮಾನಧನ ನೀನು – ಮುದ್ದುರಾಮ 622

ಯಾರ ಆಣತಿಗೆರಗಿ ರವಿ ಬೆಳಕ ನೀಡುವನೊ?
ಆತ್ಮವಿಶ್ವಾಸಕ್ಕೆ ಯಾರ ಹಂಗಿಲ್ಲ.
ಚಲಿಸು ನೀ ತಲೆ ಎತ್ತಿ ಇರುವಷ್ಟು ದಿನವಿಲ್ಲಿ;
ಸ್ವಾಭಿಮಾನವೆ ಉಸಿರು – ಮುದ್ದುರಾಮ 623

ತಪ್ಪೆಸಗಿ ಜನರೆದುರು ಮಂಡಿಯೂರುವೆ ಏಕೆ?
ಕಲಿ ಮಂಡಿಯೂರುವುದ ದೇವನೆದುರಲ್ಲಿ.
ಮನಸಾಕ್ಷಿಯ ಮುಂದೆ ಯಾವುದೂ ಹಿರಿದಲ್ಲ;
ಆತ್ಮಪ್ರಜ್ಞೆಯೆ ದೈವ – ಮುದ್ದುರಾಮ 624

ಆತ್ಮಸಾಕ್ಷಿಯ ಎದುರು ನಿಂತು ಸರಿ ಸೆಣಸಲಿಕೆ
ಈ ಲೋಕ ಹರವಿನಲಿ ಯಾರಿಗಿದೆ ಧೈರ್ಯ?
ಧರಿಸಿ ತಟವಟ ವೇಷ ಮೋಸಮಾಡಲುಬಹುದು;
ಅದುಮುವೆಯ ಒಳದನಿಯ? – ಮುದ್ದುರಾಮ 625

ಆತ್ಮಸಾಕ್ಷಿಯ ಮುಂದೆ ನಿಲ್ಲದಾವುದೆ ಸಾಕ್ಷಿ;
ಸುಳ್ಳು ತಟವಟವೆಲ್ಲ ಪ್ರಜ್ಞೆಬಾಹಿರವೊ!
ತಪ್ಪನರಿತಾತಂಗೆ ಇದೆ ದೈವ ಕರುಣೆಬಲ;
ಮನಸಾಕ್ಷಿಯ ನಂಬು – ಮುದ್ದುರಾಮ 626

ಮಾತು ಮುತ್ತಿನ ಹಾರ, ಮಾತು ಸ್ಫಟಿಕ ಶಲಾಕೆ
ಎನುತ ನೀ ಚಪ್ಪಾಳೆ ಗಿಟ್ಟಿಸಿದರೇನು?
'ಶಿವ ಮೆಚ್ಚಿ ಅಹುದಹುದು' ಎಂದರಲ್ಲವೆ ಮಹತಿ?
ಬೆಂಡು ನುಡಿ ನಿಸ್ಸಾರ – ಮುದ್ದುರಾಮ 627

ವಚನ ಕೊಟ್ಟರೆ ಒಮ್ಮೆ ನೀ ಬದ್ಧನಾಗದಕೆ;
ತಳವಿರದ ಹುಸಿಮಾತು ತರದು ಗೌರವವ.
ವಾಗ್ದಾನದಲ್ಲಿ ಇದೆ ಪ್ರಾಮಾಣಿಕತೆ ಸಾರ;
ನುಡಿದಂಥ ನಡೆ ಲೇಸು – ಮುದ್ದುರಾಮ 628

***

ಮನದಾಳದಭಿಮಾನ ಓತಪ್ರೋತವೊ ಎಲ್ಲಿ
ಇದೆ ಅಲ್ಲಿ ಗೌರವದ ಆಶಯದ ಪೀಠ.
ಆದರದ ಮರ್ಯಾದೆ ವ್ಯಾಪಾರ ಸರಕಲ್ಲ;
ಪೂಜ್ಯತೆಯೆ ಮನುಜಸಿರಿ – ಮುದ್ದುರಾಮ 629

ಆದ ತಪ್ಪನು ನೆನೆದು ಯಾರ ಮನ ಕರಗುವುದೊ
ಇದೆ ಅಲ್ಲಿ ದೊಡ್ಡತನ ಅಳಿದು ಸಣ್ಣತನ.
ಬೇಗುದಿಯ ದೂಡಲಿಕೆ ಮದ್ದು ಪಶ್ಚಾತ್ತಾಪ;
ನಗುತಿರಲಿ ಆಂತರ್ಯ – ಮುದ್ದುರಾಮ 630

ಕೋಪತಾಪದಿ ಮುನಿದು ಯಾರೆ ಸಿಡುಕಲಿ ಕನಲಿ;
ಉತ್ತರಿಸು ನಗೆಮೊಗದಿ ನೀ ಪ್ರೀತಿಯಿಂದ.
ಕೇಡೆಣಿಸದಿರೆ ಅದುವೆ ಜೀವನದ ಸಾರ್ಥಕ್ಯ;
ನೆನೆ ಒಳಿತ, ಎಸಗೊಳಿತ – ಮುದ್ದುರಾಮ 631

ಕೂಡಿಡುವುದತಿ ಕಷ್ಟ; ಕಳೆದುಕೊಳುವುದು ಸುಲಭ.
ಮೈತ್ರಿ ಸಂಪಾದನೆಯ ಬಗೆ ಕೂಡ ಹೀಗೆ.
ಎಣಿಕೆ ಸರಿಯಿಲ್ಲದಿರೆ ತಪ್ಪು ಲೆಕ್ಕಾಚಾರ;
ಗುಣಿಸು ಒಳಿತಂಕಿಗಳ – ಮುದ್ದುರಾಮ 632

ಒಲವಿರದೆ ಅರ್ಪಿಸಿದರೆಲ್ಲಿದೆಯೊ ನಿಜಪೂಜೆ?
ದಯೆ ಮರೆತ ನೈವೇದ್ಯ ಬರಿ ದಂಡಪಿಂಡ.
ಎಷ್ಟು ಉರಿಸಿದರೇನು ದ್ವೇಷಚಂದನಬತ್ತಿ?
ದೇವನಿಹನೊಳಿತಲ್ಲಿ – ಮುದ್ದುರಾಮ 633

ಮಾಡಿದುಪಕಾರವನು ನೆನೆದರದೆ ಕೃತಜ್ಞತೆ;
ಪಡೆದುದಕೆ ಅದುವೆ ಗೌರವದ ವಂದನೆಯೊ!
ಧನ್ಯತೆಯ ಅರ್ಪಣೆಗೆ ಇದು ಶುಭದ ಅಭಿವ್ಯಕ್ತಿ;
ಋಣ ನೆನೆದು ತಲೆಬಾಗು – ಮುದ್ದುರಾಮ 634

ಬೆಳಕಿತ್ತವನ ನೆನೆದು ಹಚ್ಚು ನೀ ಸೊಡರೊಂದ;
ತಿಳಿವಿತ್ತವನ ನೆನೆದು ಕಲಿಸು ಅಕ್ಷರವ.
ತಳಿರಿತ್ತ ತರು ನೆನೆದು ತೋರು ಕರುಣೆಯ ನೆರಳ;
ಒಲಿದು ನೀ ಚೆಲುವಾಗು – ಮುದ್ದುರಾಮ 635

ಇಲಿ ಒಮ್ಮೆ ಹುಲಿ ಮೇಲೆ ಓಡಾಡಿ ಮೆರೆದಾಗ
ಮರೆತದನು ಮಾಡಿತ್ತು ಹುಲಿ ಜೀವದಾನ.
ಇಲಿಯು ಬಿಡಿಸಿತು ಹುಲಿಯ ಕಡಿದು ಬಲೆ ಬಳಿಕೊಮ್ಮೆ.
ನೆನೆ ಮಾಡಿದುಪಕಾರ – ಮುದ್ದುರಾಮ 636

ಹಿರಿದು ಯಾವುದೊ ಅದಕೆ ತಲೆಬಾಗು ವಿನಯದಲಿ;
ಚರಿಸು ಸರಿದಾರಿಯಲಿ ಗೌರವಿಸಿ ನಿಜವ.
ಕಿರಿದೆಂದು ತುಳಿಯದಿರು; ಹಳತೆಂದು ಜರಿಯದಿರು;
ಗರಿಮೆಗತಿ ಮಣಿಯುತಿರು – ಮುದ್ದುರಾಮ 637

ಗೌರವಿಸು ಲೋಕವನು; ಘನತೆ ನೂರ್ಮಡಿ ಆಗ.
ತೋರು ನೀ ಅನುಕಂಪ; ನೀ ಶಾಂತ ಆಗ.
ಒರೆಸು ನೀ ಕಣ್ಣೀರ; ನೀನೆ ಹುಣ್ಣಿಮೆ ಆಗ.
ನೀ ಮೌನಿ, ಸುಖಿ ಆಗ – ಮುದ್ದುರಾಮ 638

ಜೇನಾಗಲಿಕೆ ಎಷ್ಟು ಹೂರಸದ ಕಾಣ್ಕೆಯಿದೆ!
ನಾದವಾಗಲಿಕೆಷ್ಟು ದನಿಯ ಕೊಡುಗೆಯಿದೆ!
ಹೂವಾಗಲಿಕೆ ಎಷ್ಟು ದಳದಳದ ಬಿರಿತವಿದೆ!
ಸಹಿಸಿಕೋ ಕಷ್ಟಗಳ! – ಮುದ್ದುರಾಮ 639

□



6

ಬಣ್ಣದೋಕುಳಿ ಮನಸು

ಭೀತಿ ಭಿತ್ತಿಯ ಮೇಲೆ ತಂದು ಭರವಸೆಬಣ್ಣ
ಬಳಸಿ ಸಂತಸ ಕುಂಚ ರಚಿಸು ಚೆಲುಚಿತ್ರ.
ಉಲ್ಲಾಸ ಮನೆಮಾಡಿ ಬರಲಿ ನಗೆಕಾರಂಜಿ;
ಬಣ್ಣದೋಕುಳಿ ಮನಸು – ಮುದ್ದುರಾಮ

ಏಕೆ ಕೊಟ್ಟನೊ ದೇವ ಮನುಜನಿಗೆ ಈ ಮನಸ!
ಎಂಥ ಚಿಂತನಧಾರೆ! ಏನು ನಗೆಮಾಲೆ!
ಅಂತೆ ಕಾತರ ದುಗುಡ ಆತಂಕ ಹೊರೆಭಾರ;
ಮತಿ ವಿಚಿತ್ರಕೆ ತವರು – ಮುದ್ದುರಾಮ 640

ಭಾವಾಂತರಂಗದಲಿ ಬಾಂಧವ್ಯ ಬೀಜವಿದೆ,
ಸೃಷ್ಟಿ ಸೌಂದರ್ಯವಿದೆ, ಅಮಿತ ಶಕ್ತಿಯಿದೆ,
ಪ್ರೀತಿಹೂ ಅರಳಿಕೆಯ ಚೈತನ್ಯ ಶಕ್ತಿಯಿದೆ.
ನೇಹದರ್ಪಣ ಮನಸು – ಮುದ್ದುರಾಮ 641

ಮನಸೇನು ಕಲ್ಲೇನು ಹೆಪ್ಪುಗಟ್ಟಿರುವುದಕೆ?
ಕುಸುಮ ಮೆದುತನ ಅದರ ಸೃಷ್ಟಿಸೌಭಾಗ್ಯ.
ಮುಗಿಲಂತೆ ತೇಲಾಡಿ ನಲಿಯುವುದು ನವಿಲಂತೆ;
ಮನಸು ಚಿಂತನಚಿತ್ರ – ಮುದ್ದುರಾಮ 642

ಮನ ಒಪ್ಪದುದನೇಕೆ ಮಾಡಿ ಜನ ನರಳುವರೊ!
ನಗುವಾಸೆ ಇಲ್ಲದಿರೆ ಹೂವು ಬಿರಿಯುವುದೆ?
ನಿರ್ಬಂಧವಿದ್ದಲ್ಲಿ ಕುದುರುವುದೆ ಸ್ವಾತಂತ್ರ್ಯ?
ಮನಸು ಹಾರುವ ಹಕ್ಕಿ – ಮುದ್ದುರಾಮ 643

ಕನಸ ಕಾಣುವ ಕಣ್ಗೆ ಎಲ್ಲಿ ಕಲ್ಪನೆ ಪರಿಧಿ?
ಕಡಲಿಗಲ್ಲದೆ ಎಲ್ಲೆ ಹರಿವ ತೊರೆಗೆಲ್ಲಿ?
ಸೀಮೆ ಬಣ್ಣಕೆ ಹೊರತು ಇಂದ್ರಚಾಪಕ್ಕೆಲ್ಲಿ?
ಭಾವದಂಬುಧಿ ಮನಸು – ಮುದ್ದುರಾಮ 644

ಚಿಂತನೆಯ ಮಂಥನಕೆ, ಸಂಗೀತದಾಲಿಕೆಗೆ
ಮನಸೆ ಅದ್ಭುತ ತಾಣ ಸಾರಸಂಪದಕೆ.
ತಲ್ಲಣದ ಸುಳಿ ಎಂತೊ ಅಂತೆ ಇದು ಶಾಂತಿವನ;
ಭಾವನೆಲೆ ಈ ಮನಸು – ಮುದ್ದುರಾಮ 645

ಕಟುಕ ಎರಚಿದರೇನು ಪಕ್ಷಿವೃಂದಕೆ ಕಾಳ?
ನಲ್ಮೆ ಮಾತಿಂದೇನು ಕರುಬುವವನಿಂದ?
ಕನಕ ಬಟ್ಟಲ ತೋರಿ ನಂಜುಣಿಸಿ ಬಾತೇನು?
ಮೋಸಮಂಜರಿ ಮನಸು – ಮುದ್ದುರಾಮ 646

ಬಿಲಹೊಕ್ಕ ಸರ್ಪನಡೆಯನ್ನು ಗುರುತಿಸಬಹುದು;
ಪರಮನವ ಅರಿಯುವುದು ಸುಲಭವೇನಲ್ಲ.
ಮನದ ದರ್ಪಣದಲ್ಲಿ ಬಗೆಬಗೆಯ ಚಿತ್ರವಿದೆ;
ಮನದ ಚಿತ್ರ ವಿಚಿತ್ರ – ಮುದ್ದುರಾಮ 647

ಜೀವ ಬೆಂಗಾಡಿನಲಿ ಮನಸು ಭರವಸೆ ಚಿಲುಮೆ,
ಹಕ್ಕಿ ಚಿಲಿಪಿಲಿನಾದ ಬೆಂದ ಬನದಲ್ಲಿ.
ಗೂಬೆಯಾಗಿಸಬೇಡ ಮನಸತ್ವಸಂಪದವ;
ತಿರೆಯ ಅಪ್ಸರೆ ಮನಸು – ಮುದ್ದುರಾಮ 648

ನೆನೆದು ಸಾವಿರ ಚಿಂತೆ ಮನವ ಹಿಂಸಿಸಬೇಡ;
ಮನ ನಿನ್ನ ಸಂಗಾತಿ; ರಿಪುವಲ್ಲ ನಿನಗೆ.
ಬನದ ಸಿರಿ ಸೊಂಪೆಲ್ಲಿ ಕಿಚ್ಚ ಹಚ್ಚಿದರದಕೆ?
ಮನ ದಿವ್ಯಕಾನನವೊ! – ಮುದ್ದುರಾಮ 649

ನೋವಿಗಂಟಿದರಿತ್ತ ನಗೆಗೆ ಜಿಗಿವುದು ಅತ್ತ;
ವಿಷಯಕೆಳಸಿದರಿತ್ತ ತಾರೆ ಕಡೆಗತ್ತ.
ಮಾತು ಕೂಗಿದರಿತ್ತ ಮೌನ ಕರೆವುದು ಅತ್ತ;
ಅದ್ಭುತವೊ ಈ ಚಿತ್ತ! – ಮುದ್ದುರಾಮ 650

ಚಿತ್ತ ಶಾಂತಿಗೆ ಸಾಟಿ ಯಾವುದಿದೆ ಬಾಳಿನಲಿ?
ಉದ್ವೇಗರಾಹಿತ್ಯ ಜೀವನದ ಸೊಬಗು.
ದುಗುಡದಲೆಯಲಿ ಸಿಲುಕಿ ನೆಮ್ಮದಿಯ ನೆಲೆ ಎಲ್ಲಿ?
ಶಾಂತಿ ಸಂತಸತಾಣ – ಮುದ್ದುರಾಮ 651

ದುಡ್ಡಿಲ್ಲದಿರೆ ಭ್ರಾಂತಿ, ಹೊನ್ನಿಲ್ಲದಿರೆ ಭ್ರಾಂತಿ;
ಹೆಣ್ಣು ಮಣ್ಣಿಲ್ಲದಿರೆ ಪರಿಪರಿಯ ಭ್ರಾಂತಿ.
ಒಮ್ಮೆಲೇ ಇದನೆಲ್ಲ ಎಸೆದು ಬಿಟ್ಟರೆ ಶಾಂತಿ!
ಭ್ರಾಂತಳಿದು ಸುಖವೆ ಸುಖ – ಮುದ್ದುರಾಮ 652

ಕಾಂತಸಮ್ಮಿತೆಯಿಂದ ಉಲ್ಲಾಸರ್ಝುರಿ ಉಗಮ;
ಚಿತ್ತಶುದ್ಧತೆ ಎಲ್ಲೊ ಹರುಷ ಹೊನಲಲ್ಲಿ.
ಶಾಂತ ಸಮರಸ ಸಹಜ ಮೌನಪರಿಸರದಲ್ಲಿ;
ಭ್ರಾಂತಮನ ರಣರಂಗ – ಮುದ್ದುರಾಮ 653

ಅರಚಿ ಪರಚಿದರಿಲ್ಲ; ಅತ್ತು ಕರೆದರೆ ಇಲ್ಲ;
ಪರಿಪರಿಯ ತೆರದಿ ಪರಿತಪಿಸಿ ಫಲವಿಲ್ಲ.
ಬೇಸರದ ಗಳಿಗೆಯಲಿ ಕಲಕದಿರು ನೀ ಮನವ;
ಶಾಂತಚಿತ್ತವೆ ಲೇಸು – ಮುದ್ದುರಾಮ 654

ಕೇಳದಿರು ಆತುರದಿ ಸೊಗದ ಪರಿಭಾಷೆಯನು
ತಿರುಕ ಮನೆಮುಂದೆ ತಿರುಪೆ ಬೇಡುವ ತೆರದಿ.
ಸ್ಥಿರತೆ ಮರೆತರೆ ಮನಸು ಅದುವೆ ಸಂಕಟಕೂಪ;
ಶಾಂತತೆಯೆ ಸುಖಬೇರು – ಮುದ್ದುರಾಮ 655

ಬಯಕೆಸಾಗರ ದಾಟಿ ತೃಪ್ತಿತೀರವ ತಲುಪು
ಚಡಪಡಿಕೆ ಮೊಸಳೆಗಳ ಹಿಡಿತವನು ಮೀರಿ.
ಆಗಿಲ್ಲ ಚಿತ್ತದಲಿ ಆಸೆಗಳ ಸರಮಾಲೆ;
ಶಾಂತಮನ ದಿವ್ಯವನ – ಮುದ್ದುರಾಮ 656

ನೆಲದ ಅನುಭವದಿಂದ ಮನುಜನನುಭವ ಪಕ್ವ;
ಬರಿ ಓದಿನಿಂದಷ್ಟೆ ದೊರಕುವುದೆ ಅರಿವು?
ಗಿಳಿಪಾಠ ಪಾಂಡಿತ್ಯ; ತನ್ನರಿವೆ ಸುಜ್ಞಾನ.
ಚಿತ್ತಶಾಂತಿಯೆ ಶ್ರೇಷ್ಠ – ಮುದ್ದುರಾಮ 657

ನೇತ್ರದಂತಿದೆ ನೋಟ, ಯಾತ್ರೆಯಂತಿದೆ ಜಾತ್ರೆ;
ಪಾತ್ರೆಯಂತಿದೆ ಗಾತ್ರ ಈ ಧಾತ್ರಿಯಲ್ಲಿ.
ಪಾತ್ರದಂತಿದೆ ವೇಷ, ರೋಗದಂತಿದೆ ಮಾತ್ರೆ
ಸ್ತೋತ್ರದಂತಿದೆ ಶಾಂತಿ – ಮುದ್ದುರಾಮ 658

ಗವಿಯ ಹೊಕ್ಕುವುದಂತೆ ಸಿಂಹ ಕಡೆಗಾಲದಲಿ;
ಶಾಂತಿ ಉಸಿರೆಳೆದ ಭಾವ ಅಲ್ಲಿದ್ದೀತು!
ಮನುಜಮನ ಸಂಚರಿಸದೇಕೆ ಈ ದಿಕ್ಕಿನಲಿ?
ಚಿತ್ತಶಾಂತಿ ಅಪೂರ್ವ – ಮುದ್ದುರಾಮ 659

ಶಾಂತಿ ಶಿಸ್ತಿನ ಸೂತ್ರ ಕಡಿದು ಹೋದರೆ ಒಮ್ಮೆ
ಪ್ರೀತಪಟ ಹಾರುವುದೆ ಬಾಳ ಆಗಸದಿ?
ಅಬ್ಬರದ ಗೂಡಿನಲಿ ಮನಕೆ ನೆಮ್ಮದಿ ಎಲ್ಲಿ?
ಎದೆ ತಾಪನೆಲೆಯಲ್ಲ – ಮುದ್ದುರಾಮ 660

ಹಾರಾಡಿ ತೂರಾಡಿ ಕೆಳಬಿದ್ದು ಬಂತೇನು?
ಕೂಗಾಡಿ ಕಿರುಚಾಡಿ ದೊರೆತ ಫಲವೇನು?
ಸೌಮ್ಯತೆಗೆ ಶರಣಾದ ಜೀವದಲಿ ಶಾಂತಿಯಿದೆ;
ಮನಸು ಹದಗೆಡದಿರಲಿ – ಮುದ್ದುರಾಮ 661

ಜಾಗಟೆಯ ಬಡಿತದಲಿ, ಸದ್ದುಗದ್ದಲದಲ್ಲಿ
ನೀರವತೆ ಓಂಕಾರ ಆಲಿಸುವೆ ಎಂತು?
ಧ್ಯಾನಸ್ಥ ಸ್ಥಿತಿಯಿದ್ದರದು ದೇವಮಂದಿರವೋ!
ಶಾಂತಿನೆಲೆ ಈಶಗುಡಿ – ಮುದ್ದುರಾಮ 662

ಅನುಗೊಳಿಸು ಚಿತ್ತವನು ಚಿರಶಾಂತ ನೆಲೆಯಲ್ಲಿ;
ಮೌನದೇಕಾಂತ ಪರಮ ಯೋಗಸಮಾಧಿ.
ಸತ್ಯಶಿವಸೌಂದರ್ಯ ಆನಂದದಾಗರವೊ!
ನೀ ಧ್ಯಾನಮೇರುಗಿರಿ – ಮುದ್ದುರಾಮ 663

ಉದ್ವಿಗ್ನ ನೆಲೆಯಲ್ಲಿ ಎಣಿಸು ಒಂದರಿಂದೆಂಟ;
ಶಮನವಾಗಲಿ ತಾಪ, ಬರಲಿ ಮನಶಾಂತಿ.
ದೀರ್ಘ ಉಸಿರೆಳೆದು ಬಿಡು; ಸಡಿಲವಾಗಲಿ ಬಿಗಿತ;
ಧ್ಯಾನಾಭಿಮುಖಿಯಾಗು – ಮುದ್ದುರಾಮ 664

ಮರೆತೆಲ್ಲ ಕಂಬನಿಯ ತೀವ್ರತೆಯ ದಾರುಣತೆ
ಸಾಗರದ ತೀರದಲಿ ತಿರುಗಾಡು ನಗುತ.
ಹಿರಿ ಕಣಿವೆ ಕಾನನದ ನಿಶ್ಶಬ್ದದಲ್ಲಿ ನಡೆ;
ಧ್ಯಾನ ಆ ಏಕಾಂತ – ಮುದ್ದುರಾಮ 665

ಚಿತೆಯತ್ತ ಒಯ್ಯಲಿಕೆ ಚಿಂತೆಯೇ ಕಾರಣವೊ!
ಆತಂಕ ಖಿನ್ನತೆಯೆ ನೆಮ್ಮದಿಯ ರಿಪುವೊ!
ವಿರಸವಿಲ್ಲದ ಸರಸ ಆರೋಗ್ಯಕಾರಕವೊ!
ಧ್ಯಾನ ಜೀವನಸುಖವೊ! – ಮುದ್ದುರಾಮ 666

ನಿಮ್ನೊತ್ತಡದ ದಿನದಿ, ಸಂಕಷ್ಟ ಪರಿಸರದಿ
ಯಾರಿಲ್ಲ ಸಂಗಾತಿ ಸಂತೈಸುವುದಕೆ.
ಒಬ್ಬಂಟಿ ಇರಲು ನೀ ಕಲಿತರಿದೆ ಮನಶಾಂತಿ;
ನೀ ಮಿತ್ರನೋ ನಿನಗೆ! – ಮುದ್ದುರಾಮ 667

ಕಣ್ಗೆ ಕಾಣದುದೆಲ್ಲ ಇಲ್ಲವೆಂದೂಹಿಪುದೆ?
ಇದೆ ಎಷ್ಟೊ ಜನರರಿವಿಗಿನಿತು ಬಾರದುದು.
ಅಂದಿಲ್ಲವೆಂದದ್ದು ನಾಳೆ ಗೋಚರಿಸೀತು!
ವಿಶ್ವ ಮಹತಿಗೆ ಸಾಕ್ಷಿ – ಮುದ್ದುರಾಮ 668

ತಥ್ಯ ಬದಲಾದಂತೆ, ಅರಿತು ಸರಿ ಮಾಹಿತಿಯ
ನಿನ್ನ ಚಿಂತನೆ ಇನಿತು ಬದಲಾದರೇನು?
ವಸ್ತುವಿನ ನಿಜನೋಟ ನಿಖರತೆಗೆ ಸರಿದಾರಿ;
ತೆರೆದ ಮನ ದಿವ್ಯದನಿ – ಮುದ್ದುರಾಮ 669

ಮಂದಹಾಸದ ಬೆಳಕು ಎದೆಯಲಿನಿತಿರುವಾಗ
ಮಾತ್ಸರ್ಯ ಕತ್ತಲೆಯ ಮೊತ್ತ ಅನಿತೇಕೆ?
ಮನ ಶಾಂತಿಗೂಡಾಗಿ ನಗೆಪಕ್ಷಿ ವಾಸಿಸಲಿ;
ತೆರೆ ಎದೆಯ ಸಂತಸಕೆ – ಮುದ್ದುರಾಮ 670

ಸೂತ್ರರೂಪದಿ ಎಂಥ ಚಿಂತನೆಯ ಸಿರಿಸೊಬಗು!
ಪತಂಜಲಿ ಪಾಣಿನಿಗೆ ನಾವು ಚಿರಋಣಿಯೊ!
ಒಪ್ಪ ಓರಣದಿಂದ ಭಾವದನುಪಮ ಬೆಳಕು;
ಹಿರಿದು ಮನದುತ್ಪನ್ನ – ಮುದ್ದುರಾಮ 671

ಭಾವನೆಯ ಬಳುಪಿನಲಿ ಬಂಧುರತೆ ಬಿಂಬವಿದೆ;
ಚಿಂತನೆಯೆ ಹೂಗುಚ್ಛ ಸೌಂದರ್ಯಸಿರಿಗೆ.
ಚಿತ್ತದರಳಿಕೆಯಿಂದ ಅನುಭೂತಿ ಸಂಪ್ರಾಪ್ತಿ;
ಮಹತಿ ತವರು ವಿಚಾರ – ಮುದ್ದುರಾಮ 672

ನಡೆ ತಪ್ಪಿದಡೆ ಎಲ್ಲಿ ದಿವ್ಯತೆಯ ಹೊಂಗಿರಣ?
ಹುಸಿನುಡಿದರೆಲ್ಲಿದೆಯೊ ಗುರುವಚನ ದೀಕ್ಷೆ?
ಆಮಿಷಕೆ ಅಂಟಿದರೆ ನಿತ್ಯನೇಮ ಅದೆಲ್ಲಿ?
ಚಿತ್ತದಂತಿದೆ ಘನತೆ – ಮುದ್ದುರಾಮ 673

ಅಂತರಂಗಕೆ ನುಗ್ಗಿ ಕೇಳು ಆ ಒಳದನಿಯ;
ಆ ನಾದದಲ್ಲೊಂದು ಇದೆ ಶಾಂತಭಾವ.
ಅದರುಪಸ್ಥಿತಿ ನೆಲೆಯ ಹೊರಗೆಡಹದಿರು ಜಗಕೆ;
ಲೇಸು ಆತ್ಮಾರಾಮ – ಮುದ್ದುರಾಮ 674

ರೆಂಬೆಗಂಟಿದ ಹಣ್ಣು ಮೊದಮೊದಲು ಹುಳಿಯಿದ್ದು
ಬರುಬರುತ ಸಿಹಿಯಾಗಿ ಮಾರ್ಪಡುವುದೆಂತೊ!
ಮರದ ಫಲದೋಪಾದಿ ಮನ ಮಾಗಿದರೆ ಚೆಂದ;
ಮಾಗುವಿಕೆ ಪರಮಗುಣ – ಮುದ್ದುರಾಮ 675

ಬಂದವರು ನನ್ನವರು, ಬರದವರು ನನ್ನವರೆ
ಈ ಭಾವದುದಯದಲಿ ಇದೆ ಚಿತ್ತಶಾಂತಿ.
ಮುನಿಸು ಮನೆಮಾಡಿದರೆ ಅದುವೆ ಗಿರಿ ಆಸ್ಫೋಟ;
ಸಂಯಮವೆ ಹಿರಿಯಣ್ಣ – ಮುದ್ದುರಾಮ 676

ಏಕಮುಖದಲ್ಲಿರದು ಉಚ್ಛ್ರಾಯಸ್ಥಿತಿ ಸತತ;
ಅಲೆಯ ನರ್ತನದಂತೆ ಅದರ ಏರಿಳಿತ.
ಮೇಲೇರಿ ಮೆರೆಯದಿರು, ಕೆಳಗಿಳಿದು ಕೊರಗದಿರು;
ಒರಗು ಸಮಚಿತ್ತತೆಗೆ – ಮುದ್ದುರಾಮ 677

ಮನಕೆರೆಗೆ ಕಲ್ಲೆಸೆದು ದುಷ್ಟ ಗಷ್ಟವ ಕೆದಕಿ
ಕುಡಿಯಲಿಕೆ ತಿಳಿವುಜಲ ಏಕೆ ಬಯಸುವರೊ?
ಕಾಲ ಕಳೆದಂತೆಲ್ಲ ಸಮಸ್ಥಿತಿಯೆ ಜಗ ನಿಯಮ;
ಅರಿತರಿದೆ ನಿಜಯೋಗ – ಮುದ್ದುರಾಮ 678

ತಪ್ಪನರಸುವ ಚಾಳಿ ತರದು ಯಾರಿಗು ಶಾಂತಿ;
ಈ ಬುದ್ಧಿ ಹಾಲಿನಲಿ ಹುಳಿಹಿಂಡಿದಂತೆ.
ಯಾವ ಮುತ್ತಿನಲಿಲ್ಲ ದೋಷ ಒಂದಲ್ಲೊಂದು?
ದೃಷ್ಟಿಯಂತಿದೆ ವಸ್ತು – ಮುದ್ದುರಾಮ 679

ಹೂ ಬಯಸಿ ಬಂದವಗೆ ಮಲ್ಲಿಗೆಯ ಬನವಾಗು;
ಹನಿಜಲವ ಕೇಳ್ದವಗೆ ಹರಿವ ನದಿಯಾಗು.
ನೋಡಲಿಕೆ ನವಿಲಾಗು, ಬಾಂದಳದ ಮುಗಿಲಾಗು;
ನೊಂದವಗೆ ನೆರವಾಗು – ಮುದ್ದುರಾಮ 680

ಕೆಟ್ಟ ಕಲ್ಪನೆಯಿಂದ ಇಲ್ಲ ಸುಂದರ ಸೃಷ್ಟಿ;
ಸುಟ್ಟ ನೂಲಿಂದಿಲ್ಲ ವಸ್ತ್ರವಿನ್ಯಾಸ.
ಸೊಟ್ಟ ಕಟ್ಟಿಗೆಯಿಂದ ಇಲ್ಲ ಪ್ರತಿಮೆಯ ರಚನೆ;
ತೊಟ್ಟಂತೆ ಇದೆ ವೇಷ – ಮುದ್ದುರಾಮ 681

ತಾ ಬಯಸಿದಾಕೃತಿಗೆ ಒಲಿದು ನಿಲುವುದು ಮನಸು;
ಹೆಜ್ಜೆ ಇಡುವುದು ಮುಂದೆ ತನ್ನಿಷ್ಟದಂತೆ.
ತೋರ್ಗೊಡದು ಒಂದಿಷ್ಟು ತನ್ನ ಒಳಗಿನ ದನಿಯ;
ಮನಬಣ್ಣ ನೂರಾರು – ಮುದ್ದುರಾಮ 682

ಮನದ ಅತಿ ವಿಚಲತೆಗೆ ಕಪಿವಂಶ ಕಾರಣವೆ?
ಮನವೇಕೆ ಸುತ್ತುವುದೊ ಅದರಿದರ ಹಿಂದೆ?
ಅಪವಾದವೇನಿದಕೆ ನಿಗ್ರಹದ ನಿರ್ವಹಣೆ?
ಚಾರು ಚಂಚಲ ಚಿತ್ತ – ಮುದ್ದುರಾಮ 683

ಮನಸು ಮರ್ಕಟನಂತೆ ಇತ್ತ ಅತ್ತೆತ್ತಲೋ
ನೆಗೆದಾಡುತಿದ್ದರದು ಸ್ವಸ್ಥ ಕುರುಹಲ್ಲ.
ಎಷ್ಟುಚಿತವೋ ಅಷ್ಟು ತುಟಿ ತೆರೆದರದು ಕ್ಷೇಮ;
ಚಂಚಲತೆ ಕಡು ಶಾಪ – ಮುದ್ದುರಾಮ 684

ಇರುವಾಗ ಕಡಿದಾಡಿ ಮಸಣದಲಿ ಕಣ್ಣೀರು;
ಹಿಂದೆ ಒಂದಾಡಿ ಮುಂದೆ ಹೊಗಳಿಕೆ ಮಾಲೆ.
ತೂಗಿ ತೊಟ್ಟಿಲ ಮೆಲ್ಲ ಮಗುವ ಗಿಂಜುವ ಗೀಳು;
ಕಪಿಬುದ್ಧಿ ಮನುಜ ಬಗೆ – ಮುದ್ದುರಾಮ 685

ವಂಚಿಸುವ ಹುನ್ನಾರ ಇಲ್ಲಿ ಸೀಮಿತವಲ್ಲ
ಯಾವುದೇ ಕುಲಜಾತಿ ದೇಶಪಂಗಡಕೆ.
ಮೋಸ ಎಲ್ಲೆಲ್ಲಿದೆಯೊ ಇದೆ ದುಷ್ಟ ಕಿಡಿ ಅಲ್ಲಿ;
ಮನವನರಿವುದು ಕಷ್ಟ – ಮುದ್ದುರಾಮ 686

ಅತಿ ಸುಲಭವಾದುದನೆ ಮನ ಆಯ್ಕೆ ಮಾಡುವುದು;
ಬದಿಗಿಡುವುದೀ ಮನಸು ಕಠಿಣವಾದುದನು.
ಕಪಿಬುದ್ಧಿಯಂತಾಡಬಿಡಬಾರದೀ ಮತಿಯ;
ಬುದ್ಧಿ ಹಿಡಿತದಲಿರಲಿ – ಮುದ್ದುರಾಮ 687

ಎಷ್ಟಾಯಿತೋ ಅಷ್ಟು ಮಾಡುತಿರು ಶ್ರದ್ಧೆಯಲಿ;
ತೋರುತಿರು ಉತ್ಸಾಹ ಎಲ್ಲ ಮಾಟದಲಿ.
ಉಬ್ಬಸಕೆ ಎಡೆಮಾಡಿ ಮುಳುಗದಿರು ಚಿಂತೆಯಲಿ;
ಮನ ಸ್ಥಿಮಿತದಲ್ಲಿರಲಿ – ಮುದ್ದುರಾಮ 688

ನಿನ್ನ ಕೊರಗು ದುಗುಡವ ಹದ್ದುಬಸ್ತಿನಲಿಡದೆ
ಕಾಲುವೆಯ ನೀರಂತೆ ಹರಿಯಬಿಡುವೇಕೆ?
ಕಲಕದಿರು ಜನಮನವ ನುಡಿಯ ಉಬ್ಬರದಿಂದ;
ಮನನಿಯಂತ್ರಣ ಮಿಗಿಲು – ಮುದ್ದುರಾಮ 689

ಓಲೈಸಿ ನೆನೆದದ್ದ ಪಡೆವ ಚಾಕಚಕ್ಯತೆ
ಸಕಲ ಜನರೆದೆಯಲ್ಲಿ ಇದೆ ಸುಪ್ತವಾಗಿ.
ಸಾಧನದ ಬಳಕೆಯಲಿ ಅಷ್ಟೆ ಈ ವ್ಯತ್ಯಾಸ;
ತಳ ಒಂದೆ ಈ ತೃಷೆಗೆ – ಮುದ್ದುರಾಮ 690

ಮನದ ಕಾತರದಂಥ ರೋಗ ಬೇರೊಂದಿಲ್ಲ;
ಉದ್ವಿಗ್ನತೆಯೆ ಕಾಷ್ಠ; ಚಡಪಡಿಕೆ ಬೆಂಕಿ.
ಅಳುಕುಹಾವಿನ ಸಂಗ ನಿಮಿಷನಿಮಿಷದಿ ಸಾವು;
ದುಗುಡ ಚಿಂತೆಯ ಮೂಲ – ಮುದ್ದುರಾಮ 691

ಬಿಗಿತ ಎಲ್ಲೆಲ್ಲಿದೆಯೊ ಇದೆ ತವಕ ಅಲ್ಲೆಲ್ಲ;
ಒತ್ತಡದ ಜೀವಿತಕೆ ಕೊಡು ತಿಲಾಂಜಲಿಯ,
ತಣ್ಣಗಿರುವುದ ಬಿಟ್ಟು ಎಳೆದುಕೊಳದಿರು ತಾಪ;
ನೋವು ಗಾಬರಿಯಿಂದ – ಮುದ್ದುರಾಮ 692

ದುಃಖಕೂಪಕೆ ಎಳೆವ ವಿಷಯ ಯಾವುದೆ ಇರಲಿ
ಎದೆಯಾಳದಿಂದ ಅದ ಎಸೆದು ಹೊರಹಾಕು.
ಮರೆತುಬಿಡು ಅಲ್ಲಲ್ಲೆ ಬಾಧಿಸುವ ಸಂಗತಿಯ;
ಚಿಂತೆಹೊರೆ ಅತಿಭಾರ – ಮುದ್ದುರಾಮ 693

ಯಾರ ಮನದೊಳಗಾವ ಭೂತ ನುಸುಳುವುದೇಕೊ!
ಅಹಮಿಕೆಯೆ ಕರಿಭೂತವಾಗಿ ಬರಬಹುದು.
ಗದ್ದುಗೆಯ ಹಿಡಿವಾಸೆ ಇದ್ದೀತು ಭೂತಕ್ಕೆ!
ಭೂತ ಭೀತಿಯ ಗೊಂಬೆ – ಮುದ್ದುರಾಮ 694

ಮನೆಯ ಬೋದಿಗೆ ಮುರಿದು, ಕುಸಿದು ಬಿದ್ದಿದೆ ಗೋಡೆ;
ನೋಡು ನೋಡುತ ಇದನು ಅತ್ತರದು ವ್ಯರ್ಥ.
ತಂದು ಇಟ್ಟಿಗೆ ಗಾರೆ ರಚಿಸು ಸದನವ ಮತ್ತೆ;
ಅಳು ಬಾಳ ಬನಿಯಲ್ಲ – ಮುದ್ದುರಾಮ 695

ನಮ್ಮೆಷ್ಟೊ ತೊಂದರೆಗೆ ನಮ್ಮನಿಸಿಕೆಯೆ ಮೂಲ;
ನಾವೆಣಿಸಿದಂತಿಹುದು ಮುಂದಿಡುವ ಹೆಜ್ಜೆ.
ಭಾವದಂತಿದೆ ಮಾಲೆ; ಮಾಟದಂತಿದೆ ಮೋದ.
ಎಣಿಸಿದಂತಿದೆ ಲೆಕ್ಕ – ಮುದ್ದುರಾಮ 696

ಯಾರ ಮನ ಯಾರತ್ತ ಎಂದೇಕೆ ವಾಲುವುದೊ!
ರೂಪ ತಳೆವುದದೆಂತೊ ಈ ಕಾಯನಂಟು!
ಒಲವಿಗಿದೆ ಅಸ್ತಿತ್ವ; ಅದರಿಂದ ವ್ಯಕ್ತಿತ್ವ.
ಬೆಸುಗೆಯಿದೆ ಪ್ರೀತಿಯಲಿ – ಮುದ್ದುರಾಮ 697

ಒರಟುತನ ಕಗ್ಗಲ್ಲು; ಕೌಶಲವೆ ಉಳಿಚಾಣ;
ಕಾಯಕದ ಬಲದಿಂದ ರಮಣೀಯ ಮೂರ್ತಿ.
ಲಯಬದ್ಧ ನಡೆಯಿಂದ ಸಂಗೀತ ಸೌಂದರ್ಯ;
ಭಾವಸ್ಫುರಣವೆ ಸರಸ – ಮುದ್ದುರಾಮ 698

ಎಷ್ಟೊ ಪದ ನೆನಪಲ್ಲಿ ಉಳಿದು ಹಾಡಾದಂತೆ
ಇನ್ನೆಷ್ಟೊ ಗಾಳಿಯಲಿ ತೂರಿಹೋಗುವುದೊ!
ಗೆರೆ ಮಿನುಗಿ ಚೆಲುಚಿತ್ರ; ಕರಗಿ ಅದೆ ಬರಿ ನೆನಪು!
ಭಾವತೆರೆ ಸಾಪೇಕ್ಷ – ಮುದ್ದುರಾಮ 699

ಯತಿಯಿರಲಿ ಕವಿಯಿರಲಿ ಇವರಂತರಾಳಕ್ಕೆ
ಯಾವಾವ ರೂಪದಲಿ ನುಗ್ಗುವುದೊ ಮಾಯೆ!
ಬಿಡಿಸಲಾಗದ ಒಗಟು ಈ ಮಾಯೆ ಒಳಹೊರಗು;
ಮಾಯೆ ಮನಮರೀಚಿಕೆ – ಮುದ್ದುರಾಮ 700

ಬಿಟ್ಟೆ ಕಾಮವನೆಂದು ನುಡಿಯುವರು ಬಹುಮಂದಿ;
ಸುಟ್ಟೆನೆಂದರೆ ಅಷ್ಟು ಸುಲಭದಲಿ ಸುಡದು.
ತೊಟ್ಟು ವಿಷ ಕುಡಿದಂತೆ ವಿಷಯದಲಿ ಸಿಲುಕುವಿಕೆ;
ಮಾಯೆ ಈ ವಿಷಯಸುಖ – ಮುದ್ದುರಾಮ 701

ನೀ ಎದ್ದು ಬಿದ್ದರದು ನೀನೊಲಿದ ಆಯ್ಕೆಯದು;
ನೀ ಎಗರಿ ಮುನಿದರದು ನಿನ್ನ ತೀರ್ಮಾನ.
ನೀ ಎದುರು ಕಣಕಿಳಿದರದು ನಿನ್ನ ಮನದಿಷ್ಟ;
ನೀ ಎಳೆದ ರಥ ನಿನದು – ಮುದ್ದುರಾಮ 702

***

ಏಕೆ ದೀಪಾರತಿಯ ನಂದಿಸುತ ನಗುತಿರುವೆ?
ಏಕೆ ಧೂಪವ ಮಿಸುಕಿ ಬುಸುಗುಡಲಿರುವೆ?
ಅರ್ಚನೆಯ ಹೂ ಎಸೆದು ಏಕೆ ಕೆರಳುತಲಿರುವೆ?
ಚಡಪಡಿಸುತಿರುವೇಕೆ? – ಮುದ್ದುರಾಮ 703

ಸಸಿ ದೊಡ್ಡದಾಗದಿರೆ ಹೂವೆಲ್ಲಿ ಹಣ್ಣೆಲ್ಲಿ?
ಮಳೆಹನಿಯೆ ಬೀಳದಿರೆ ಕಡಲ ತೆರೆಯೆಲ್ಲಿ?
ಭಾವ ಹಿರಿದಾಗದಿರೆ ಸಂಪನ್ನಸುಖವೆಲ್ಲಿ?
ಮಧುವಿರದೆ ಸಿಹಿ ಎಲ್ಲಿ? – ಮುದ್ದುರಾಮ 704

ಚಂದನದ ಕೊರಡಲ್ಲಿ ಕೆಟ್ಟ ವಾಸನೆಯಿಲ್ಲ;
ಮಲ್ಲಿಗೆಯ ಹೂವಲ್ಲಿ ಇಲ್ಲ ದುರ್ಗಂಧ.
ವೀಣೆನಾದದಲಿನಿತು ಕರ್ಕಶದ ದನಿಯಿಲ್ಲ;
ಮನಸು ಕಲುಷಿತವೇಕೆ? – ಮುದ್ದುರಾಮ 705

ಕೆಣಕುವುದು ಕುದಿಯುವುದು ತುರಿತಕೆಡೆಮಾಡುವುದು;
ಸುಮ್ಮನಿರದೀ ಮನಸು ಕೋತಿಪ್ರತಿರೂಪ.
ಕೆದಕುತ್ತ ಕೆಸರನ್ನೆ ಚೇಷ್ಟೆಯಲಿ ಏನೊ ಸುಖ!
ಚಿತ್ತನಿಯಂತ್ರಣ ಹೇಗೆ? – ಮುದ್ದುರಾಮ 706

ಮನ ಶುದ್ಧ ಸೋಮಾರಿ; ಬೇಕದಕೆ ವಿಶ್ರಾಂತಿ;
ಬನದ ಮೂಲೆಯಲೆಲ್ಲೊ ಅಡಗಿ ಮಲಗುವುದು.
ಇನದ ಬೆಳಕಿನಲಿದನು ಎಳೆದು ಕೂರಿಸಬೇಕು;
ಕೊನರದಿರೆ ಹೂವೆಲ್ಲಿ? – ಮುದ್ದುರಾಮ 707

ಹಚ್ಚಿ ನೀ ದೀವಿಗೆಯ ಮನೆಯ ಬೆಳಗದೆ ಅಂದ
ಹೊಲದ ಮೆದೆಯನ್ನೇಕೆ ಬೂದಿಮಾಡುವೆಯೊ?
ಮನದ ಈ ಹುಚ್ಚುತನ ಪಡೆಯಿತೆಂತಾಕಾರ?
ಏನೆಂಬೆ? ಎಂತೆಂಬೆ? – ಮುದ್ದುರಾಮ 708

ಮನಸು ಮಿಡಿಯಲಿ ನಿನದು ಕಂಡು ಪರ ಸಂಕಟವ
ನೆನೆದು ರಾಧೆಯ ವಿರಹ ಕೊಳಲು ನುಡಿವಂತೆ.
ಗಡಿಯಿಲ್ಲ ಆರ್ದ್ರತೆಗೆ ಮಾರ್ದವತೆ ಚಿಗುರಿಕೆಗೆ;
ತುಡಿಯದಿರೆ ಅದು ಮನಸೆ? – ಮುದ್ದುರಾಮ 709

ಸರಸಿನಲಿ ವಿಹರಿಸುವ ರಾಜಹಂಸದ ತೆರದಿ
ಮನಸು ವಿಹರಿಸುತ ಇರಲಿ ಸ್ವಚ್ಛಂದದಲ್ಲಿ.
ಅಡೆತಡೆಯ ಪ್ರತಿರೋಧ ಸಂಚಾರ ಕಂಟಕವೊ!
ಮುದುರಿದರೆ ಅದು ಮನಸೆ? – ಮುದ್ದುರಾಮ 710

ಭಾವಸಂವೇದನೆಗೆ ತುಡಿಯದಿರೆ ಅದು ಎದೆಯೆ?
ರಾಗಸುಧೆಗೊಲಿಯದಿರೆ ಅದು ಜೀವದನಿಯೆ?
ಸರಿತಪ್ಪುಗಳ ಎಣಿಸಿ ಅರಿಯದಿರೆ ಅದು ಮತಿಯೆ?
ಮಾಗದಿರೆ ಅದು ಮನಸೆ? – ಮುದ್ದುರಾಮ 711

***

ಈ ಮನುಜಮತಿಯಲ್ಲಿ ಮಿಂಚಿ ಚಿಂತನೆ ಒಮ್ಮೆ
ಮಾಯವಾಗುವುದೇಕೊ ಮರುನಿಮಿಷದಲ್ಲಿ!
ಮತ್ತೆ ಅದೆ ಮರುಕಳಿಸಿ ಮರುಳುಮಾಡುವುದೇಕೊ!
ಏನು ಭಾವಪ್ರಕಾಶ! – ಮುದ್ದುರಾಮ 712

ಕಡಲಿನಾರ್ಭಟ ಮೊರೆತ ಹೇಗೆ ಮನ ಸೆಳೆಯುವುದೊ
ಹಾಗೆ ನಿಲುವುದು ಮೆರೆದು ಮೌನಚಿತ್ತಾರ.
ಏಕಾಂತದಲ್ಲೆಂಥ ಸಂಭ್ರಮದ ಸೊಬಗಿದೆಯೊ!
ಒಳನೋಟ ಚಂದ್ರಿಕೆಯೊ! – ಮುದ್ದುರಾಮ 713

ಚೆಲುಮನದ ತಿಳಿಜಲವ ಬಗ್ಗಡವ ಮಾಡುವುದೆ?
ಎಸೆಯುವುದೆ ಎಡೆಬಿಡದೆ ಕಷ್ಟಕಲ್ಲುಗಳ?
ಕುಳಿತು ಕೆರೆಬದಿಯಲ್ಲಿ ನೋಡು ಸುಂದರ ದೃಶ್ಯ;
ಮನಸು ನಂದನಸಿರಿಯೊ! – ಮುದ್ದುರಾಮ 714

ಕಡಲೆಡೆಗೆ ಹರಿಯಲಿಕೆ ನದಿ ದಾರಿ ಅರಸುವುದು;
ಗಗನ ಚುಂಬನಕಾಗಿ ಹಕ್ಕಿ ಹಾರುವುದು.
ತರುವ ಕಂಗೊಳಿಸಲಿಕೆ ಚಿಗುರು ಸೊಂಪಾಗುವುದು;
ಮನ ಚಿತ್ರವಾಗುವುದೊ! – ಮುದ್ದುರಾಮ 715

ಗೊಂದಲದ ಅಧ್ವಾನ ಇದ್ದದ್ದೆ ದಿನದಿನದಿ;
ಚಡಪಡಿಕೆ ಗಡಿಬಿಡಿಗೆ ಮನಸು ನಿಸ್ತೇಜ.
ತಣ್ಣಗಿರದಿರೆ ಜೀವ ಜಗದಿ ಏನಿದ್ದೇನು?
ಶಾಂತಿಚಿತ್ತತೆ ಸಿರಿಯೊ! – ಮುದ್ದುರಾಮ 716

ಕಪ್ಪೆ ವಟಗುಟ್ಟಿದರೆ ಶಿವಭಕ್ತನಾಗುವುದೆ?
ಕಡಲ ತಡಿ ಕುಳಿತು ಹಕ್ಕಿ ಋಷಿಯಾಗುವುದೆ?
ಹಿಡಿದು ಕೈಯಲಿ ಮಣಿಯ ಎಷ್ಟು ಎಣಿಸಿದರೇನು?
ಶರಣಾಗತಿಯೆ ಧ್ಯಾನ! – ಮುದ್ದುರಾಮ 717

ಏನಿಷ್ಟವೋ ತಮಗೆ ಅದನೆ ಮಾಡುವರೆಲ್ಲ;
ತೋರಿಕೆಗೆ ಕಿವಿಗೊಟ್ಟು ಕೇಳುವರು ಅಷ್ಟೆ.
ತಿರುಚಿ ಮರೆಮಾಚುವುದೆ ಮನುಕುಲದ ಮುಖವಾಡ;
ಮನದ ಬಗೆಯೇ ಹೀಗೆ! – ಮುದ್ದುರಾಮ 718

ಆತುರಕೆ ಹಾತೊರೆದು ಅನುಭವಿಸದಿರು ಕಷ್ಟ;
ಸಾವಧಾನದ ತೋಳ್ಗೆ ಇದೆ ಅಮಿತ ಶಕ್ತಿ.
ದುಗುಡ ತಲ್ಲಣ ಎಲ್ಲೊ ಇಲ್ಲ ಶ್ರೇಯಸ್ಸಲ್ಲಿ;
ಸ್ಥಿರಚಿತ್ತ ಸತ್ಕೃತಿಯೊ! – ಮುದ್ದುರಾಮ 719

ಸಂಪನ್ನ ಜೀವನವ ಆಶಿಪುದು ಮನುಜಗುಣ;
ನೆನೆದ ಮಳೆಸುರಿದು ಹಸನಾಗುವುದೆ ಭೂಮಿ?
ಹಸನಾಗಿ ಬೆಳೆಬೆಳೆದು ತೆನೆ ಕೈಗೆ ದಕ್ಕುವುದೆ?
ಅನುಗೊಳಿಸಿಕೋ ಮನವ! – ಮುದ್ದುರಾಮ 720

ಕಿಟಕಿ ಮೂಲಕ ಕಂಡ ಬಗೆ ಹೀಗೆ ಇಬ್ಬರಿಗೆ:
ಒಬ್ಬ ಕಂಡನು ಬರಿಯ ಕಬ್ಬಿಣದ ಸರಳ.
ಬಾನತಾರೆಯ ಕಂಡ ಇನ್ನೊಬ್ಬ ಹರುಷದಲಿ;
ನೋಟ ಹೇಗೋ ಹಾಗೆ – ಮುದ್ದುರಾಮ 721

***

ಅತ್ತಿತ್ತ ಹರಿದಾಡಿ ಬಟ್ಟೆ ನೆಯ್ಯುವ ಲಾಳಿ
ಮಗ್ಗದಲ್ಲಿ ತಾನುಳಿದ ಏಕಾಂತ ವಸ್ತು.
ನವಬಣ್ಣವೀಯುತ್ತ ಬಣ್ಣವಾಗದು ತಾನು;
ಮನಸು ಹೀಗಿರಬೇಕು – ಮುದ್ದುರಾಮ 722

ಸದ್ದುಗದ್ದಲಮೊತ್ತ ಇದ್ದದ್ದೆ ಜೀವನದಿ;
ನಿನ್ನ ನೀ ಅರಿವುದಕೆ ಇರಲಿ ಏಕಾಂತ.
ಅಂತರ್ಯದರಳಿಕೆಯೆ ಸೌಭಾಗ್ಯಮಂದಾರ;
ಒತ್ತುಕೊಡು ಒಳದನಿಗೆ – ಮುದ್ದುರಾಮ 723

ಕಿಕ್ಕಿರಿದ ಜನರೆಲ್ಲ ಕೂಗಿದರೆ ಜಯಕಾರ
ಉಬ್ಬಿ ನೀ ಹಾರದಿರು ಆಕಾಶದತ್ತ.
ಯಾವ ಕಾಮನಬಿಲ್ಲು ಇದೆ ನಿರತ ಆಗಸದಿ?
ಕೇಳುತಿರು ಒಳದನಿಯ – ಮುದ್ದುರಾಮ 724

ಬೀಜದಂಕುರದಿಂದ ನೆಲದಿ ಪರಿಮಳ ಸೊಂಪು;
ಸಂಕುಚಿತ ನೆಲೆಯಲ್ಲಿ ಎಲ್ಲಿ ಸಂತೋಷ?
ಅರಳಿ ನಿಲ್ಲುವ ಪರಿಯೆ ಸೌರಭಕೆ ಅಡಿಗಲ್ಲು;
ಇರಲಿ ಭಾವ ವಿಶಾಲ – ಮುದ್ದುರಾಮ 725

ಪಲ್ಲವದ ಸೊಂಪಿನಲಿ ಹೊಸತನದ ತೋರ್ಕೆಯಿದೆ;
ಸಂಪಿಗೆಯ ಕಂಪಿನಲಿ ಇದೆ ಮಧುರಭಾವ.
ನಾದಮಯ ಇಂಪಿನಲಿ ಸೌಂದರ್ಯ ಭಾಗ್ಯವಿದೆ;
ಮನ ತೆರೆದರಿದೆ ಕಾಣ್ಕೆ – ಮುದ್ದುರಾಮ 726

ಚಿಂತನೆಯ ಹಾಸಿಗೆಗೆ ವಿವೇಕವೆ ಮೆದುದಿಂಬು;
ಹೊದಿಕೆ–ಕಂಬಳಿ ನೀತಿ ಕೆಡುಗಾಲದಲ್ಲಿ.
ಮೌಲ್ಯಮಂಚದ ಕಾಲು ಮುರಿದಾಗ ಚಿಂತೆಮಳೆ;
ಶಾಂತನಿದ್ರೆಯೊ ಚಿತ್ತ! – ಮುದ್ದುರಾಮ 727

ಮಡಿಲಲ್ಲಿ ಕಿಚ್ಚಿರಲು ಸುಡದೆ ಬಿಡುವುದೆ ನಮ್ಮ?
ಮೊಸಳೆ ಹಿಡಿದಡೆ ಪಾದ ಕರೆ ತಲುಪಬಹುದೆ?
ಪಾಪಕೂಪದಿ ಮುಳುಗಿ ಮಿಂದೆನೆಂದೆನಬಹುದೆ?
'ಮನಕೆ ಮನವೇ ಸಾಕ್ಷಿ' – ಮುದ್ದುರಾಮ 728

ಇದೆ ಪ್ರಶ್ನೆ ನೂರಾರು ಮನದಂತರಾಳದಲಿ;
ಇಲ್ಲ ಉತ್ತರ ಎಲ್ಲ ಗೊಂದಲದ ಸುಳಿಗೆ.
ಅಪರಿಮಿತವಿರೆ ಇಚ್ಛೆ ಪೂರ್ೈಕೆ ಎಲ್ಲಿಂದ?
ಇಷ್ಟ ಗತಿಗೆಡದಿರಲಿ – ಮುದ್ದುರಾಮ 729

ಕದಡುವುದು ಮನದ ಜಲ ದುಗುಡಕಲ್ಲಿಗೆ ಸಿಲುಕಿ;
ಚಿಂತೆ ತೆರೆ ಎದ್ದೆದ್ದು ಬಡಿವುದಬ್ಬರದಿ.
ಕೆಲಕಾಲ ಕಳೆದೊಡನೆ ಶಾಂತ ನೆಲೆ ತಲುಪುವುದು;
ಸರಿಸು ಉದ್ವಿಗ್ನತೆಯ – ಮುದ್ದುರಾಮ 730

ಮೌನವಾಗದೆ ಮನಸು ಸದ್ದು ಗೂಡಾದಾಗ
ಕೂರುವುದೆ ಸುಖಪಕ್ಷಿ ದೇಹತರುವಿನಲಿ?
ಭಯಗಿಡುಗ ಹಾರಾಡಿ ಚಣಚಣದಿ ಕಾತರತೆ;
ದಿಗಿಲಿಗೆಡೆಕೊಡಬೇಡ – ಮುದ್ದುರಾಮ 731

ಧಾತುಗೆಟ್ಟರೆ ಮನಸು ಕಕ್ಕುಲತೆಯಾಗರವೊ!
ಅಂಜಿ ಅಳುಕುವ ಜೀವ ಮಕರಸಾಗರವೊ!
ಧೃತಿಗೆಡದ ಚಿತ್ತದಲಿ ಚೈತನ್ಯ ಚಿತ್ರವಿದೆ;
ಬೆವರದಿರು, ಬೆದರದಿರು – ಮುದ್ದುರಾಮ 732

ಸಿರಿ ಒಲಿದು ಬಂದಾಗ ಬೇಕೆ ದುರಹಂಕಾರ?
ನೋವಡರಿದಾಗ ಏಕೆ ಹಾಹಾಕಾರ?
ಸಿರಿ ಇರಲಿ, ನೋವಿರಲಿ ಸಮಚಿತ್ತ ಪರಿಹಾರ;
ಮನದಂತೆ ಆಕಾರ – ಮುದ್ದುರಾಮ 733

ಅತಿ ಸುಲಭವೆಂದುದನೆ ಆಯ್ದುಕೊಳ್ಳುವುದು ಮನಸು;
ಒಗ್ಗದದು ಇನಿತು ಅತಿ ಕಷ್ಟವಾದುದಕೆ.
ಮನಹಯವ ಪಳಗಿಸುತ ದುಡಿಮೆರಥಕದ ಕಟ್ಟು;
ವಿಜಯಸಾರಥಿಯಾಗು – ಮುದ್ದುರಾಮ 734

ಗರಿಮೆ ನೆನೆಯುವ ಮನಸು ಎಂತು ಕಿರಿದಾದೀತು?
ಹಿರಿದಾದುದರ ನೆನಹು ಪರಮ ಸಂತೋಷ.
ಘನವ ನೆನೆಯುವ ಮನಸು ಹಿರಿದೆಂದರತಿ ಹಿರಿದು;
ಮನ ಲೇಸನೊರಗಿರಲಿ – ಮುದ್ದುರಾಮ 735

ಏನಾಗಬೇಕೊ ಅದ ಕಲ್ಪಿಸಿಕೊ ನೀ ಮೊದಲು;
ಸಾಗು ಅದ ಸಾಧಿಸುವ ದಾರಿಯಲಿ ನಿತ್ಯ.
ಸಂಕಲ್ಪ ಪುಷ್ಪದಲಿ ಸಿದ್ಧಿ ಸೌಂದರ್ಯವಿದೆ;
ನೋಡು ಆಗಸದತ್ತ – ಮುದ್ದುರಾಮ 736

ಹೆಜ್ಜೆ ಹಾಕದೆ ಮುಂದೆ ಬರಿಗನಸ ಕಾಣುವಿಕೆ
ಬಾನಿಗೇಣಿಯ ಹಾಕಿ ತಾರೆ ಹಿಡಿದಂತೆ.
ಕನಸು ನನಸಾಗಲಿಕೆ ಹಿಡಿ ದುಡಿಮೆ ಸರಿದಾರಿ;
ಇರಲಿ ನಿಶ್ಚಿತ ನಕ್ಷೆ – ಮುದ್ದುರಾಮ 737

ಮೀನ ಕಣ್ಣನ್ನಷ್ಟೆ ಕಂಡು ಬಾಣವ ಬಿಟ್ಟ;
ಗುರಿಯೆಂದರದುವೆ ಗುರಿ! ಅದು ಪಾರ್ಥ ದೃಷ್ಟಿ.
ಇಲ್ಲದಿರೆ ದ್ರುಪದಸುತೆ ಒಲಿವಳೇ ಪಾರ್ಥನಿಗೆ?
ಬಿಡದಿರೇಕಾಗ್ರತೆಯ – ಮುದ್ದುರಾಮ 738

ಬಾಣ ಬಿಡುವಾತನಿಗೆ ತರುವಲ್ಲ, ಎಲೆಯಲ್ಲ
ಕಾಣುವುದು ಗುರಿಯಿಟ್ಟ ಹಕ್ಕಿ ಕಣ್ಣೊಂದೆ!
ಏಕಾಗ್ರತೆಗೆ ಒಲಿದ ದೃಷ್ಟಿಯಿಂದಲೆ ಸಿದ್ಧಿ;
ಇರಲಿ ಅರ್ಜುನ ನೋಟ – ಮುದ್ದುರಾಮ 739

ಮುಗಿಲು ಕೆಳಬಿದ್ದಂತೆ ಸಿಲುಕಿ ಸಂಕಟದಲೆಗೆ
ಕಂಗೆಟ್ಟ ನೆಲೆಯಲ್ಲಿ ಸೋತೆನೆನ್ನದಿರು.
ಗಟ್ಟಿಮಾಡಿಕೊ ಮನವ; ಈಜಾಡು ಸಾಹಸದಿ;
ನಗುತ ಗುರಿಕರೆ ತಲುಪು – ಮುದ್ದುರಾಮ 740

ಇಲ್ಲಿದ್ದು ತೆರತೆರದ ವಾಂಛೆಗಳ ಬಾಚುವೆವು;
ಎಲ್ಲಿರಲಿ ಆದಷ್ಟ ದೋಚುವುದು ಮನಸು.
ಕಲ್ಲಿನಂತಾಗಿ ಎದೆ ಮರಟುಗಟ್ಟುವುದೇಕೊ!
ಗೆಲ್ಲು ಜಿತಪ್ರಜ್ಞೆಯಿಂ – ಮುದ್ದುರಾಮ 741

ಇದು ಬೇಕು ಅದು ಬೇಕು ಎಂಬುದೇ ಕಾಯಗುಣ;
ಸಾಕು ಸಾಕೆಂದರದೆ ವೈರಾಗ್ಯಬುದ್ಧಿ.
ಶುದ್ಧಿ ಸಿದ್ಧಿಗೆ ಬೇಕು ಅಂಟಿಕೊಳ್ಳದ ನಂಟು;
ತೊರೆಯೊ ಮನದ ವಿಕಾರ – ಮುದ್ದುರಾಮ 742

ಮುಗ್ಧ ಕಂದನ ಮನಸು ಎಷ್ಟೊಂದು ಪರಿಶುದ್ಧ!
ಏಕಾಗುವುದೊ ನಾಳೆ ಅದೆ ದ್ವೇಷಕೇಂದ್ರ!
ನೆಲದ ಫಲ ಅಂತಿಲ್ಲ; ಮನವೇಕೆ ಇಷ್ಟು ಕಹಿ?
ಅರಸುತಿರು ಉತ್ತರವ – ಮುದ್ದುರಾಮ 743

ಕಣ್ಸನ್ನೆ ಮುಖಭಾವ ಮತಿಗತಿಗೆ ಪ್ರೇರಕವೊ!
ಅರಿತರಿದ ನಯದಿ ಅದೆ ಭಾವಸೂಚಕವೊ!
ನೂರು ಪದ ಹೇಳದುದ ಮೌನ ತೋರ್ಪಡಿಸುವುದೊ!
ಇರಲಿ ಇಂಗಿತಜ್ಞಾನ – ಮುದ್ದುರಾಮ 744

ನೂರು ಪದದರ್ಥವಿದೆ ಚಿತ್ರ ಸಂಕೇತದಲಿ;
ಅಭಿಲಾಷೆ ತಿಳಿಸಲಿಕೆ ಸಾಕು ಕಣ್ಸನ್ನೆ.
ಇಂಗಿತದ ನೆಲೆಯಲ್ಲಿ ಸಂಗೀತ ಸೌಖ್ಯವಿದೆ;
ಸುಗಮವಾಗಲಿ ಭಾವ – ಮುದ್ದುರಾಮ 745

ನಿನ್ನ ಚಿಂತನೆಯಂತೆ ಇದೆ ನಿನ್ನ ಅಸ್ತಿತ್ವ;
ಹೊತ್ತಾರೆ ಎದ್ದೊಡನೆ ಅಂದಿನೊಳಿತ ನೆನೆ.
ಪೂರೈಸು ಇದ ದಿನದಿ; ಇದೆ ಆಗ ಹೂಗಂಪು;
ಬಾಳು ಯೋಚಿಸಿದಂತೆ – ಮುದ್ದುರಾಮ 746

ನಿನ್ನೆಸಕ ಸರಿಯೆಂದು ನಿನಗನಿಸಿದರೆ ಸಾಕು;
ಮಂದಿ ನೂರೆಂಟೆನಲಿ ತಮಗನಿಸಿದಂತೆ.
ಜನ ರಂಪಮಾಡಬಿಡು; ನೀನು ಚಿಂತಿಸಬೇಡ;
ಹಾಡು ನೀನೊಲಿದಂತೆ – ಮುದ್ದುರಾಮ 747

□



7

ಉತ್ಸಾಹ ಪರಮ ಕಲೆ

ಲವಲವಿಕೆ ಒಲಿಯದಿರೆ ಉಲ್ಲಾಸ ಸೆಲೆ ಎಲ್ಲಿ?
ಹಕ್ಕಿ ಕಲರವವೆಲ್ಲಿ ರೆಕ್ಕೆ ಹಾರದಿರೆ?
ಕಡಲುಕ್ಕಿ ನೆರೆಯದಿರೆ ಅಲೆಅಲೆಯ ಚೆಲುವೆಲ್ಲಿ?
ಉತ್ಸಾಹ ಪರಮ ಕಲೆ – ಮುದ್ದುರಾಮ

ಅಳಿದ ದೇಹವ ಹೂತು ಗೋರಿಕಟ್ಟುವೆ ಏಕೆ?
ಪಾರಿಜಾತದ ಸಸಿಯ ನೆಡು ಅದರ ಮೇಲೆ.
ಹೂ ಅರಳಿ ಕೆಳಬಿದ್ದು ಚೆಲುವು ಚಿಮ್ಮಲಿ ಅಲ್ಲಿ;
ಸಮವೆ ಶಿಲೆ ಹೂನಗೆಗೆ? – ಮುದ್ದುರಾಮ 748

ಅಳುತ ದಯೆ ಬೇಡುವರು, ಕೈಕಾಲುಕಟ್ಟುವರು.
ಇಂದ್ರಚಂದ್ರರು ಎನುತ ಹಾಡಿಹೊಗಳುವರು.
ಕುರ್ಚಿಯಿಂದಿಳಿದೊಡನೆ ಬಾಯ್ತುಂಬ ತೆಗಳುವರು;
ಒಳಿತು ಎಚ್ಚರ ನಿತ್ಯ – ಮುದ್ದುರಾಮ 749

ಕಲಿಸು ಪ್ರೀತಿಯ ಪಾಠ ಮಾತ್ಸರ್ಯ ನೆಲೆಯಲ್ಲಿ;
ಅಳಿಸು ಮತಿಸೂತಕವ ಮಂದಿಮನದಿಂದ.
ಬೆಳೆಸು ಮಾರ್ದವತೆ ಸಸಿ, ತೂರು ಕಾಠಿಣ್ಯಕಳೆ;
ನಿಲಿಸು ಕಿಡಿ ಕಾರುವುದ – ಮುದ್ದುರಾಮ 750

ಏಕಮುಖ ಗುರಿಯಿದ್ದರಿದೆ ಅಲ್ಲಿ ನಿಜಗೆಲುವು;
ಆಲಸ್ಯ ಮಡಿಲಲ್ಲಿ ಇದೆ ಸರ್ಪಭೀತಿ.
ಕಾರ್ಯ ಮುಂದೂಡಿದರೆ ಸೋಲು ಇಣುಕುವುದಲ್ಲಿ;
ಏಕಲವ್ಯನ ನೆನೆಯೊ! – ಮುದ್ದುರಾಮ 751

ಬೇಸರಕೆ ಒಲಿದವರ ಚುಂಬಿಸದು ಶ್ರೇಯಸ್ಸು;
ಚಿತ್ರ ರಚಿಸಿದರಾರೊ ಆಲಸ್ಯದಿಂದ?
ಉತ್ಸಾಹದಿಂದಷ್ಟೆ ವಿಜಯ ದುಂದುಭಿನಾದ;
ಎಳೆದು ಗೆರೆ ಕೊಡು ಬಣ್ಣ – ಮುದ್ದುರಾಮ 752

ಆಪ್ತರಾದವರೆಲ್ಲ ದೂರ ನಿಂತಂದು ನೀ
ಕಾತರದ ಕುಳಿಯಲ್ಲಿ ಬಿದ್ದು ಕೊರಗದಿರು.
ಚಿಂತೆಕಂತೆಯ ಬಿಸುಟು ಹರುಷದೋಲಗ ಊದು;
ಉತ್ಸಾಹಕೆಣೆಯಿಲ್ಲ – ಮುದ್ದುರಾಮ 753

ಸಾಯುವುದು ಅತಿ ಸುಲಭ ಬದುಕಿ ನಗುವುದಕಿಂತ;
ಆತ್ಮಹತ್ಯೆಯ ಕುರಿತು ಯೋಚಿಸಲೆ ಬೇಡ.
ಖಿನ್ನತೆಯ ಸುಳಿವಿನಿತು ದೊರೆತೊಡನೆ ಚಿವುಟಿಬಿಡು;
ಬಾಳು ಭರವಸೆಯಿಂದ – ಮುದ್ದುರಾಮ 754

ಭರವಸೆಯ ಕಿರುಬೀಜ ಕಾಣದಿದ್ದರೆ ಮೊಳಕೆ
ಮನುಜಮನ ನೆಲ ಎಂದೊ ಬರಡಾಗುತಿತ್ತು!
ಹೂ ಬಿಡುವ ಲತೆ ಕಾಣ್ವ ನಂಬಿಕೆಯೆ ಜೀವಸ್ವರ;
ಬದುಕು ಭರವಸೆಬೀಡು – ಮುದ್ದುರಾಮ 755

ಭಯದ ರೆಕ್ಕೆಯ ಹೊತ್ತು, ತವಕ ಜಾಲದಿ ಸಿಲುಕಿ
ಮುದದಿ ಹಾರಿದೆ ಮೇಲೆ ಯಾವ ಬಾನಾಡಿ?
ಸ್ವಾತಂತ್ರ್ಯ ಮರೆಯಾದರೆಲ್ಲಿದೆಯೊ ಸಂತೋಷ?
ಸಾಹಸವೆ ಹಾರಾಟ – ಮುದ್ದುರಾಮ 756

ಪರಮ ಸದ್ಗುಣವೆಲ್ಲ ಯಾರದೇ ಸ್ವತ್ತಲ್ಲ;
ಗಿರಿ ಏರಬಲ್ಲೆ ನೀ ಸಾಮರ್ಥ್ಯದಿಂದ.
ಆದ ವಿಶ್ವಾಮಿತ್ರ ಬಲದಿಂದ ಬ್ರಹ್ಮರ್ಷಿ;
ಛಲ ಬೇಕು ಧೀರನಿಗೆ – ಮುದ್ದುರಾಮ 757

ಸಂಸಾರ ಕಾಡಿನಲ್ಲಿ ಇದೆ ಚಿಂತೆಹುಲಿ ನೂರು;
ಬೆದರಿದರೆ ಹೆದರಿದರೆ ಏನ ಸಾಧಿಸಿದೆ?
ಮೆಟ್ಟಿ ನಿಲದಿರೆ ಭಯವ ಶಿಥಿಲವಾಗದೆ ಬದುಕು?
ನಿರ್ಭಯತೆ ಬಾಳಸಿರಿ – ಮುದ್ದುರಾಮ 758

ಏನೆ ಕಾರಣವಿರಲಿ, ಕಷ್ಟ ಎಷ್ಟೇ ಇರಲಿ
ಜನರ ನೋಯಿಸಬೇಡ, ಬಿರುನುಡಿಯಬೇಡ.
ಸಹಿಸಿಕೋ ಆದಷ್ಟು ಮನದಾಳದಳಲುಗಳ;
ತಾಳ್ಮೆ ತಿಂಗಳಕಾಂತಿ – ಮುದ್ದುರಾಮ 759

ಸಾವಿರದ ಮನೆಯಿಂದ ಸಾಸಿವೆಯ ತಂದಂತೆ
ಈ ನಮ್ಮ ದಿನದಿನದ ದುಗುಡ ದುಮ್ಮಾನ.
ಯಾರಿಗಿಲ್ಲವೊ ನೋವು ಜಗದ ಈ ಅಂಗಳದಿ?
ಸಹಿಸಿಕೋ ಬಂದುದನು – ಮುದ್ದುರಾಮ 760

ಇರಲಿ ಎದೆಯಲಿ ಸತತ ಜೀವಿಸುವ ಉತ್ಸಾಹ
ಇದೆ ನಾಳೆ ನನಗಾಗಿ ಎನುವ ಉಲ್ಲಾಸ.
ಭರವಸೆಯ ತೈಲವಿರದಿರೆ ಬಾಳ ಬೆಳಕೆಲ್ಲಿ?
ನಂಬಿಕೆಯೆ ಜೀವಫಲ – ಮುದ್ದುರಾಮ 761

ಸೋಲು ಮೊಗ ರಾಚಿದರೆ ಅದಕೆ ಭಯ ಬೇಕಿಲ್ಲ;
ಮಾರ್ಪಡಿಸು ಅಪಜಯವ ವಿಜಯಪಥದತ್ತ.
ದುಡಿಮೆನಿಷ್ಠೆಯ ಜೊತೆಗೆ ರೂಢಿಸಿಕೊ ನಿರ್ಭಯತೆ;
ಅಪ್ಪು ಆಶಾವಾದ – ಮುದ್ದುರಾಮ 762

ತನುವಿನದೊ ಮನಸಿನದೊ ರೋಗ ಏನೇ ಇರಲಿ
ನೀಗಿ ಮೇಲೇರಲಿಕೆ ಬೇಕಮಿತ ಸ್ಥೈರ್ಯ.
ಕಳೆಗುಂದಿದೆದೆಗೆಲ್ಲಿ ಚೆಂದದಾಶಾವಾದ?
ಬೀಳದಿರು, ಎದ್ದೇಳು – ಮುದ್ದುರಾಮ 763

ನಮ್ಮಾಗುಹೋಗಿನಲಿ ಒಳಿತ ಕಾಣುವ ಬದಲು
ಕೇಡ ಕಾಣುವ ದೃಷ್ಟಿ ತೊಂದರೆಗೆ ಮೂಲ.
ಕರಿಮೋಡದಲ್ಲೊಂದು ಇದೆ ನೋಡು ಬೆಳ್ಳಿಗೆರೆ;
ಇರಲಿ ಆಶಾವಾದ – ಮುದ್ದುರಾಮ 764

ಮುಗ್ಗರಿಸಿ ಬಿದ್ದವನಿಗಾಸರೆಯ ಕೈಚಾಚು;
ನೊಂದವನಿಗನ್ನ ವಸತಿ ವಿದ್ಯೆಯ ನೀಡು.
ಬಸವಳಿದವನ ಮೊಗದಿ ಭರವಸೆಯ ನಗೆ ತಾರೊ;
ತುಂಬಾತ್ಮವಿಶ್ವಾಸ – ಮುದ್ದುರಾಮ 765

ಚಿಂತನೆಯ ಹಾದಿಯಲಿ ಮಾತೆತ್ತಿದರೆ 'ಇಲ್ಲ'
ಎನುವ ಈ ಧೋರಣೆಯೆ ಸೋಲಿಗಡಿಗಲ್ಲು,
'ಆಗದಾಗದು' ಎಂಬ ನುಡಿ ದೂರವಿಡು ಮೊದಲು;
ಗಳಿಸು ಇಚ್ಛಾಶಕ್ತಿ – ಮುದ್ದುರಾಮ 766

ಸಂಕಲ್ಪದಿಂದಷ್ಟೆ ಸಿದ್ಧಿಸಾಧನೆ ಸಾಧ್ಯ;
ಸೋಮಾರಿತನದಿಂದ ಮೇಲೇರಲಾರೆ.
ಸೋಪಾನ ಬಳಸದಿರೆ ಶಿಖರ ಕಾಣುವೆ ಎಂತು?
ಇರಲಿ ಇಚ್ಛಾಶಕ್ತಿ – ಮುದ್ದುರಾಮ 767

ಕನಸ ಕಾಣುವ ಕಣ್ಣು ಒರಳದಿರೆ ವಾಸ್ತವಕೆ
ಗಾಳಿಗೋಪುರ ಬಾಳು ಹಗಲುಗನಸಿಂದ.
ಕರ್ಮ ಪಡೆಯದೆ ರೂಪ ಕಾಮಿತದ ತರು ಬರಡು;
ಫಲಮೂಲ ದುಡಿಮೆಯಲಿ – ಮುದ್ದುರಾಮ 768

ಬರಿ ಹುಟ್ಟಿನಿಂದಷ್ಟೆ ದೊರಕುವುದೆ ಉತ್ತಮಿಕೆ?
ಕ್ಷೀರ ಕಡಲಿನ ನಂಜು ಅಮೃತವಾಗುವುದೆ?
ಸದ್ಭಾವ ಸರಿನಡತೆಯಿಂದಷ್ಟೆ ಗೌರವವೊ!
ಯೋಗ್ಯತೆಯೆ ಸೂಚ್ಯಂಕ – ಮುದ್ದುರಾಮ 769

ನಿನ್ನುದ್ದ ತನುತೂಕ, ಕುಳಿತ ಗದ್ದುಗೆ ಬಣ್ಣ
ಎಂತು ನಿರ್ಧರಿಸುವುದೊ ವ್ಯಕ್ತಿಗೌರವವ?
ಮೌಲ್ಯ ಕುಂದಿದರಿಲ್ಲ ಬಾಳಿನಲಿ ಹೆಗ್ಗಳಿಕೆ;
ಬಾಗು ಸದ್ಗುಣದತ್ತ – ಮುದ್ದುರಾಮ 770

ಅಲೆಗೆ ಅಲೆ ಸೇರದಿರೆ ಸೌಂದರ್ಯ ಸೆಲೆ ಎಲ್ಲಿ?
ಮನಕೆ ಮನ ಕೂಡದಿರೆ ಬಾಂಧವ್ಯವೆಲ್ಲಿ?
ದನಿಗೆ ದನಿ ಸ್ಪಂದಿಸದೆ ಮಾಧುರ್ಯ ಸುಖವೆಲ್ಲಿ?
ಸಮರಸವೆ ಪಾರಮ್ಯ – ಮುದ್ದುರಾಮ 771

ಸಂಪಿಗೆಯ ಕಂಪಿರಲು ನೆನೆಯದಿರು ಬಚ್ಚಲನು;
ಶುದ್ಧವಿರೆ ಈ ಮನಸು ತೂರದಿರು ಹೊಲಸ.
ಶ್ರೀರಾಮ ಧ್ಯಾನವಿರೆ ಶೂರ್ಪನಖಿ ನೆನಪೇಕೆ?
ಮರೆಯೊ ಲಂಕಾದಹನ! – ಮುದ್ದುರಾಮ 772

ಮುಟ್ಟಿದರೆ ಪರುಷಮಣಿ ಹೊನ್ನಾಗದೇ ಲೋಹ?
ಸರಿಸದೇ ಕತ್ತಲೆಯ ಬೆಳಗಿ ತಾ ಜ್ಯೋತಿ?
ಶರಣ ಸಹವಾಸದಲಿ ಉದಿಸದೇ ಅನುಭಾವ?
ಲೇಸು ಸಜ್ಜನಸಂಗ – ಮುದ್ದುರಾಮ 773

ಕಂಪಿಂದ ಹೂ ಚೆಂದ; ಗುಣದಿಂದ ಮನ ಹಿರಿದು;
ಮಾಲ್ಯದಪ್ಪುಗೆಯಿಂದ ಮಹತಿ ಮನುಕುಲಕೆ.
ಪರುಷವಿಲ್ಲದೆ ಎಂತು ಲೋಹ ಹೊನ್ನಾದೀತು?
ಸಂಗದಿಂದಲೆ ಕ್ಷೇಮ – ಮುದ್ದುರಾಮ 774

ನಿನ್ನಾತ್ಮ ಶಕ್ತಿಯಲಿ ನಂಬಿಕೆಯೆ ಇಲ್ಲದಿರೆ
ಇನಿತ ಸಾಧಿಸಲಾರೆ ಜೀವಮಾನದಲಿ.
ಎನಿತುದ್ದ ಚಿಗುರುವುದೊ ಲತೆ ಹೊತ್ತು ವಿಶ್ವಾಸ!
ಕೆನೆ ಬಾಳ್ಗೆ ದೃಢಪ್ರಜ್ಞೆ – ಮುದ್ದುರಾಮ 775

ಬಿದ್ದ ಮಳೆಹನಿ ಬಳಸಿ ಪೈರು ಹೊಲದಲಿ ಹಸಿರು;
ಪೈರಿಂದ ನವಧಾನ್ಯ; ಅದೆ ಅನ್ನಭಾಗ್ಯ.
ತೆನೆ ಕೂಡಿದರೆ ಕಣಜ; ಹನಿಗೂಡಿದರೆ ಸರಿತೆ;
ಉಳಿಸಿ ವಿನಿಯೋಗಿಸೋ! – ಮುದ್ದುರಾಮ 776

ಬೆಳಕಿರುವ ಎಡೆಯಲ್ಲಿ ತಮಸು ಸುಳಿಯದು ನೋಡ!
ಅರಿವಿದ್ದರಲ್ಲಿರದು ಅಜ್ಞಾನ ನೋಡ!
ನಿಜದ ಬದಿಯಲಿ ಸುಳ್ಳು ವಾಸ ಮಾಡದು ನೋಡ!
ಕೆಡಕಿರದು ಒಳಿತೊಡನೆ – ಮುದ್ದುರಾಮ 777

ಅನುಮಾನ ಗದೆ ಹಿಡಿದು ಸಮರಕಿಳಿದರೆ ಹೇಗೆ?
ದೋಣಿ ಏರುವ ಮೊದಲೆ ಹೆದರಿದರೆ ಹೇಗೆ?
ನಿಶ್ಚಯದ ಕದ ತೆರೆದರಿದೆ ಅಲ್ಲಿ ಸೌಭಾಗ್ಯ;
ದೃಢತೆ ಜಯಸೋಪಾನ – ಮುದ್ದುರಾಮ 778

ಎದೆಯಲೇನೋ ಚಿಂತೆ, ತೆರತೆರದ ಆತಂಕ;
ಬೀಸಿ ಭಯಗಾಳಿ ತಲ್ಲಣದ ಛಾಯೆ.
ಆ ಹೊತ್ತಿನಲ್ಲಿನಿತು ಕಳೆಗುಂದಿ ಕೂರದಿರು;
ತೊಡು ಧೈರ್ಯ ಕವಚವನು – ಮುದ್ದುರಾಮ 779

ನೀ ಎಷ್ಟೆ ಸತ್ಪಥದಿ ಸಂಚರಿಸಿ ನಗುತಲಿರು;
ಅರಸಿ ಯಾವುದೊ ತಪ್ಪ ಜರಿಯುವರು ನಿನ್ನ.
ತೆಗಳಿಕೆಗೆ ಮನನೊಂದು ಮರೆಯದಿರು ಒಳಿತನ್ನು;
ಪರನಿಂದೆ ಇದ್ದದ್ದೆ! – ಮುದ್ದುರಾಮ 780

ಕಷ್ಟವೆಷ್ಟೇ ಇರಲಿ ಕರಗಿ ಹೋಗದೆ ನಾಳೆ?
ಕಾತರದ ಗಳಿಗೆಯಲಿ ಹೇಡಿಯಾಗದಿರು.
ಆತ್ಮಹತ್ಯೆಯ ಭಾವ ಬಳಿ ಸುಳಿದು ಬರದಿರಲಿ;
ನೂಕು ಹೊರಗೆ ಹತಾಶೆ – ಮುದ್ದುರಾಮ 781

ಸಾಗರದ ಮುತ್ತೊಂದು ಕರೆಯುವುದೆ ಮಂದಿಯನು
ನೋಡಬನ್ನಿರಿ ನನ್ನ ಕಾಂತಿಯನು ಎಂದು?
ಅಟ್ಟಹಾಸ ಅದೆಲ್ಲೊ ಗಾಂಭೀರ್ಯ ಅಲ್ಲಿರದು;
ತನ್ನ ಬಣ್ಣಿಸುವೇಕೆ? – ಮುದ್ದುರಾಮ 782

ಅಯ್ಯತನದಹಮಿಕೆಯ ಕಾಳಿಕೆಯ ಕಳೆಯದಿರೆ
ಕೀರ್ತಿವಾರ್ತೆಗೆ ಬೆಸೆದು ಮನಸು ಅವಿವೇಕಿ.
ಎಚ್ಚರಿದ್ದರೆ ಒಳಿತು 'ನಾನು' ಕೆಡಿಸುವ ಮುನ್ನ;
ಆರದಿರಲೀ ಬೆಳಕು – ಮುದ್ದುರಾಮ 783

ದೊಡ್ಡವರ ಬಾಳಿನಲಿ ಆಗೊಮ್ಮೆ ಈಗೊಮ್ಮೆ
ಸಣ್ಣತನ ಇನಿತು ಇಲ್ಲವೇನಂದಲ್ಲ.
ಕಂಡು ಒಳಿತನ್ನಷ್ಟೆ ಮರೆತುಬಿಡು ಅವಗುಣವ;
ಜಲ–ಕ್ಷೀರ ನ್ಯಾಯ ಅರಿ – ಮುದ್ದುರಾಮ 784

ಹಿರಿದಾದ ಧ್ಯೇಯದಲಿ ಸುಗುಣ ಸಂಕಲ್ಪವಿದೆ;
ಒಳಿತಿನಾಶಯದಲ್ಲಿ ದೂರದೃಷ್ಟಿಯಿದೆ.
ಕೊಡುವ ಮನಭಾವದಲಿ ದೈವಾಂಶ ಸ್ರೋತವಿದೆ;
ನೆನೆ ದಿವ್ಯ ಸಿರಿನೆಲೆಯ – ಮುದ್ದುರಾಮ 785

ಭರವಸೆಯ ಬಲದಿಂದ ಸಂಪೂರ್ಣ ವ್ಯಕ್ತಿತ್ವ;
ದಿವ್ಯತೆಯ ನಿಟ್ಟಿಂದ ಪರಮಹಂಸತ್ವ.
ಸುವಿವೇಕ ನುಡಿಯಿಂದ ಆನಂದ ಸಂಪ್ರಾಪ್ತಿ;
ಹೂವಿಂದ ನರುಗಂಪು – ಮುದ್ದುರಾಮ 786

***

ಇರಲೆಷ್ಟೆ ಇಂದ್ರಿಯದ ಕಡಿವಾಣ ಬಿಗಿತದಲಿ
ತೀರುವುದೆ ಒಡಲಾಸೆ ಉಸಿರಿರುವತನಕ?
ಸಾಕ್ಷಿ ವಿಶ್ವಾಮಿತ್ರ ಇಂದ್ರಾದಿ ದೈವಗಳೆ!
ತೃಷ್ಣೆ ಮಾಯಾಜಿಂಕೆ – ಮುದ್ದುರಾಮ 787

ಮಾಯಾವಿ ತೆರದಲ್ಲಿ ಬಹುರೂಪಿ ಈ ಮೋಹ;
ಇದು ತನದು, ತನಗಿರಲಿ ಎಂದರರದೆ ಮೋಹ.
ಮೋಹಮೊಸಳೆಗೆ ಸಿಲುಕಿ ಹೊರಬಂದವರು ಯಾರೊ?
ಮನುಜಮನ ಮೋಹಮನೆ – ಮುದ್ದುರಾಮ 788

ನಿನಗಿಂತ ನಾ ಮೇಲು ಎನುವ ಮನಭಾವದಲಿ
ಹೆಪ್ಪುಗಟ್ಟಿದೆ ನೂರು ನಾಗಸರ್ಪವಿಷ.
ಆ ಪಾಡು ಸುರೆ ಕುಡಿಸಿ ಚೇಳು ಕಚ್ಚಿಸಿದಂತೆ;
ಮದದಿಂದ ಮತಿಭ್ರಮಣೆ – ಮುದ್ದುರಾಮ 789

ಜಯಜೇನ ಸವಿಯುಂಡು ಸೋಲಿನನುಭವ ಕಹಿಯೊ!
ಆದ್ಯತೆಗೆ ಹೊರಗಾದ ರಂಗ ಬಿಟ್ಟುಬಿಡು.
ಬಯಕೆ ತುಡಿತಕೆ ಸಿಲುಕಿ ಏಕೆ ನರಳುವೆ ಬಳಿಕ?
ಬೇಡ ಮನ ಒಪ್ಪದುದು – ಮುದ್ದುರಾಮ 790

ಸಾಮ್ರಾಜ್ಯ ವಿಸ್ತರಣೆ ಹಿಂಗದಾಸೆಯ ಕುರುಹು;
ಖಡ್ಗ ಝಳಪಿಸುತ ಭೀಕರತೆ ಆರ್ಭಟವೊ!
ಅರಿವು ಸುಳಿವಷ್ಟರಲಿ ರಕುತದೋಕುಳಿ ನೆಲದಿ;
ಹಿಂಸೆ ಆಸೆಯ ಬೀಜ – ಮುದ್ದುರಾಮ 791

ನಡೆದರ್ಥ ದಾರಿಯನು ನೋಡದಿರು ಹಿಂದಿರುಗಿ;
ಹೊರಟ ನೆಲೆ ಮತ್ತೆ ತಲುಪಬಯಸುವೆಯ?
ಅಂತಾದರರದರಿಂದೆ ಇದ್ದಲ್ಲೆ ಇರುವೆ ನೀ;
ಹೆಜ್ಜೆ ಇಡುತಿರು ಮುಂದೆ – ಮುದ್ದುರಾಮ 792

ಕಣ್ಣೊಂದ ಕಿತ್ತವನ ಕಣ್ಣೆರಡ ತೆಗೆವ ಛಲ;
ಮನೆ ಸುಟ್ಟವನ ವಂಶ ಮುಗಿಸುವಾ ಸಂಚು.
ಹರಡಿ ಸೇಡಿನ ಜ್ವಾಲೆ ಎಲ್ಲವೂ ನಿರ್ನಾಮ;
ದ್ವೇಷ ಕಾಡದೆ ಬಿಡದು – ಮುದ್ದುರಾಮ 793

ನಾನತ್ವ ಮೊಳೆತೊಡನೆ ಕೂಡಿ ಬರುವುದು ಜೊತೆಗೆ
ಗರ್ವದೆಲೆ, ವಿಷದ ರಸ, ವಂಚನೆಯ ಬಣ್ಣ.
ಶಾಂತನಗೆ ಮರೆಯಾಗಿ ಮೊಗ ವಿಕಾರದ ಗೂಡು;
ಕೇಡಿನಾಗರ ದರ್ಪ – ಮುದ್ದುರಾಮ 794

ಆಡಂಬರದ ದಿರುಸು ತರದು ಗೌರವ ಪ್ರೀತಿ;
ಅಮಿತ ಸಿದ್ಧಿಗೆ ಮೂಲ ಸರಳತೆಯ ಸೂತ್ರ.
ಬಡ ಗುಡಿಸಿಲಿನ ಮುಂದೆ ತೋರದಿರು ಅಹಮಿಕೆಯ;
ಗರ್ವ ನಾಚಿಕೆಗೇಡು – ಮುದ್ದುರಾಮ 795

ಮಾತಿನಲಿ ಒಳಮರ್ಮ, ಎಣಿಕೆಯಲಿ ಕಗ್ಗಂಟು;
ನೋಟದಲಿ ಮಾಟದಲಿ ಏನೇನೊ ಸಂಚು!
ಪಗಡೆಯಾಟದ ತೆರದಿ ಎಲ್ಲ ಲೆಕ್ಕಾಚಾರ;
ನೇರನಡೆ ಅಪರೂಪ – ಮುದ್ದುರಾಮ 796

ನವಿರುತನದೊಡಲಲ್ಲಿ ಚೆಂದ ಕಾಣದು ದ್ವೇಷ;
ಧೂರ್ತತನದಭಿವ್ಯಕ್ತಿ ಈ ಹೊಟ್ಟೆಕಿಚ್ಚು.
ಬೂದಿಮಾಡದೆ ಇಹುದೆ ಸುಟ್ಟು ಕಿಚ್ಚಿನ ಜ್ವಾಲೆ?
ಸೇಡುಹೊಗೆ ವಿಷಮಯವೊ! – ಮುದ್ದುರಾಮ 797

ನೋಟ ಸುಂದರವಿದ್ದು, ಮೊಗವಷ್ಟು ಚೆಲುವಿದ್ದು
ವಿಕೃತವಾದರೆ ಹೇಗೆ ಕೈಗೊಂಡ ಮಾಟ?
ಅಂತರಂಗದಲಿರಲಿ ಸದ್ಭಾವ ಸೌಜನ್ಯ;
ಸೋಗು ಅಪಜಯ ಚಿಹ್ನೆ – ಮುದ್ದುರಾಮ 798

ಭೀತಿ ಚಿಂತೆಗೆ ಮೂಲ; ಚಿಂತೆ ನೋವಿಗೆ ಮೂಲ;
ನೋವು ಸಾವಿಗೆ ಮೂಲ; ಭಯಪಡುವೆ ಏಕೆ?
ಹೆದರಿಕೆಯೆ ನಮ್ಮೆಲ್ಲ ಗಾಬರಿಗೆ ಕಾರಣವೊ!
ಭೀತಿಯಿಂದವನತಿಯೊ! – ಮುದ್ದುರಾಮ 799

ಹೀರಿ ಅಂತಃಸತ್ವ ಬಿಸುಟುವುದು ಉದ್ವೇಗ;
ಆತಂಕ ಅಂತಕನ ನಂಬುಗೆಯ ದೂತ.
ಎಲ್ಲೆಲ್ಲಿ ಕಾತರತೆ ಅಲ್ಲೆಲ್ಲ ತೊಳಲಾಟ;
ಭೀತಿ ದುಗುಡದ ತಾಯಿ – ಮುದ್ದುರಾಮ 800

ಗಗನದೆತ್ತರ ಚಿಮ್ಮಿ ನಕ್ಷತ್ರ ಹಿಡಿವಾಸೆ
ಇದೆ ಮನದಿ ಈ ಜಗದ ಮನುಜರೆಲ್ಲರಿಗೆ.
ಬಯಕೆ ಕೈಗೂಡೀತೆ? ಜೀವ ಹಸನಾದೀತೆ?
ಆಸೆಗೊಂದಿರಲಿ ಮಿತಿ – ಮುದ್ದುರಾಮ 801

ತನ್ನಿಷ್ಟದಂತಾಮೆ ಕಾಲೆಳೆದುಕೊಳುವಂತೆ
ಮನುಜನಿಂದ್ರಿಯ ತನ್ನ ವಶದಲಿರಬೇಕು.
ಕಾಮನೆಗೆ ಆಳಾದರರದೆ ಪೂರ್ಣ ಅವನತಿಯೊ!
ವಿಷವೊ ವಿಷಯಾಸಕ್ತಿ! – ಮುದ್ದುರಾಮ 802

ಸರಿಸಿ ಜಡತೆಯನಾರು ಹೆಜ್ಜೆ ಇಡುವರೊ ಮುಂದೆ
ಇದೆ ವಿಜಯ ಸಿರಿಮುಕುಟ ಅವರ ತಲೆಮೇಲೆ.
ದುಡಿಮೆ ಎಲ್ಲೋ ಅಲ್ಲಿ ಸಿದ್ಧಿ ಮೈಗೂಡುವುದು;
ಆಲಸ್ಯವೇ ಸಾವು – ಮುದ್ದುರಾಮ 803

ನೆರೆಹೊರೆಯ ಮನೆಗಷ್ಟೆ ಬೆಂಕಿ ಬಿದ್ದಿದೆ ಎಂದು
ಸುಮ್ಮನಿದ್ದರೆ ನೀನು ಸುಡದಿಹುದೆ ನಿನ್ನ?
ಕಷ್ಟ ಎದುರಾದಾಗ ಮುಂದಾಗು ನಿಲಿಸಲಿಕೆ;
ಆಲಸ್ಯ ಆಪತ್ತು – ಮುದ್ದುರಾಮ 804

ಹೊತ್ತಾರೆ ಎದ್ದವನಿಗಷ್ಟೆ ರವಿದರ್ಶನವೊ!
ಯಾರು ಕಂಡರೊ ಕಿರಣ ದಟ್ಟಿರುಳಿನಲ್ಲಿ?
ಗಿರಿಗುಡಿಯ ಕದ ತೆರೆಯಲಿಕೆ ಏರು ಸೋಪಾನ;
ಆಲಸ್ಯ ಕಡುವೈರಿ – ಮುದ್ದುರಾಮ 805

ಚಿಂತೆ ಕಂಬಳಿ ಹಾಸಿ ಚೆಂದ ನಿದ್ರಿಸಲಾರೆ;
ಹೊದ್ದು ಅದ ಚಳಿಯಿಂದ ಪಾರಾಗಲಾರೆ.
ಸಿಲುಕಿ ಚಿಂತೆಯ ಅಲೆಗೆ ನಗುತ ಹೊರಬರಲಾರೆ;
ಬಿಸುಡುತ್ತ ಕಾತರತೆ – ಮುದ್ದುರಾಮ 806

ದುಗುಡ ಖಿನ್ನತೆಯಿಂದ ಸಾಧಿಸುವುದೇನನ್ನ?
ಚಿಂತೆ ದೆಸೆಯಿಂದ ಬರಿಯ ನಿದ್ರಾಭಂಗ
ಸುಳಿಯೆ ತಲ್ಲಣಭೂತ ಮನದಿ ಹಾಹಾಕಾರ;
ತಳಮಳವೆ ದುಮ್ಮಾನ – ಮುದ್ದುರಾಮ 807

ಇಟ್ಟ ಹೆಜ್ಜೆಗಳೆಲ್ಲ ಗಿರಿತುದಿಯ ತಲುಪುವುವೆ?
ನೆಟ್ಟ ಬೀಜಗಳೆಲ್ಲ ತೆನೆಯ ತುಂಬುವುವೆ?
ತೊಟ್ಟ ಬಾಣಗಳೆಲ್ಲ ಸರಿಗುರಿಯ ಮುಟ್ಟುವುವೆ?
ಕೊರಗದಿರು ವಿಫಲತೆಗೆ – ಮುದ್ದುರಾಮ 808

ಏನಿದ್ದರೇನಯ್ಯ ಶಾಂತಿಯೊಂದಿಲ್ಲದಿರೆ?
ಧನಕನಕ ಪದವಿಯಿಂದೊದಗುವುದೆ ಶಾಂತಿ?
ದುಗುಡ ತಲ್ಲಣವೆಲ್ಲೊ ಇಲ್ಲ ನೆಮ್ಮದಿ ಅಲ್ಲಿ;
ಎಸೆ ಅತ್ತ ಖಿನ್ನತೆಯ – ಮುದ್ದುರಾಮ 809

ಯಾವ ಪೊಟರೆಯಲಾವ ಹಾವು ಮನೆಮಾಡಿದೆಯೊ!
ಯಾವ ಚೇಳು ಅದೆಷ್ಟು ಹೇಗೆ ಕುಟುಕುವುದೊ!
ವಿಷಜಂತುವಿದ್ದಲ್ಲಿ ಜೋಪಾನದಿಂದ ಇರು;
ಬಿಡು ದುಷ್ಟ ಸಹವಾಸ – ಮುದ್ದುರಾಮ 810

ಸೂಜಿಮೊನೆ ತೂತಿಂದ ತೂರಿಬರಬಹುದೊಂಟೆ;
ಕಷ್ಟ ನಿರ್ಗಮನ ದುರ್ಜನರ ಸುಳಿಯಿಂದ.
ಸಂಗ ಎಂತೆಂತಿಹುದೊ ಇದೆ ಅಂತೆ ಸಜ್ಜನಿಕೆ;
ಮಾರಕವೊ ದುಸ್ಸಂಗ! – ಮುದ್ದುರಾಮ 811

ಚಾಡಿಮಾತನು ಯಾರು ಕಿವಿಗೊಟ್ಟು ಕೇಳುವರೊ
ಅವರನಪ್ಪುವುದು ಅಪನಂಬಿಕೆಯ ಭೂತ.
ಹಿತ್ತಾಳೆ ಕಿವಿಯಿಂದ ನೂರೊಂದು ತೊಂದರೆಯೊ!
ಚಾಡಿ ಆಲಿಸುವೇಕೆ? – ಮುದ್ದುರಾಮ 812

ಜಗ ತಿದ್ದುವಿಕೆ ಮರೆತು ನಿನ್ನ ತಿದ್ದಿಕೊ ಮೊದಲು;
ಆಗಿಲ್ಲ ತಳಮಳದ ಕಾತರದ ಮಂಜು.
ನಿನ್ನೂಟದೆಲೆಯಲ್ಲಿ ನೊಣವಿದ್ದರದ ನೋಡು;
ಸಲ್ಲ ದೋಷಾರೋಪ – ಮುದ್ದುರಾಮ 813

ತುತ್ತೂರಿ ಊದಲಿಕೆ ಯಾವುದಾದರೆ ಏನು?
ಶವಯಾತ್ರೆಯೇ ಸಾಕು ಸುದ್ದಿ ಗಳಿಸಲಿಕೆ.
ಸತ್ತವನ ನೆಪದಲ್ಲಿ ಇದ್ದವನ ಹಿಕಮತ್ತು;
ಮನುಜ ಮನ್ನಣೆಪ್ರೇಮಿ – ಮುದ್ದುರಾಮ 814

ಹೊಗಳಿಕೆಯ ಶೂಲಕ್ಕೆ ಸಿಲುಕಿ ತಪತಪಿಸದಿರು;
ಅನಂತವೊ ಪರಿತಾಪ ಈ ಬಗೆಯ ಬಯಕೆ!
ಕೀರ್ತಿಶನಿ ವಕ್ಕರಿಸೆ ಎಲ್ಲ ದಿಕ್ಕಾಪಾಲು;
ಸ್ತುತಿಗೆ ಮರುಳಾಗದಿರು – ಮುದ್ದುರಾಮ 815


ರಾಗಿ ಅಂಬಲಿ ಉಂಡು ಮಲಗಿರುವ ಬಡವನಿಗೆ
ದ್ರಾಕ್ಷಿಗೊಂಚಲ ತೋರಿ ಕೆಡಿಸದಿರು ಸುಖವ.
ಹುಸಿ ನಿರೀಕ್ಷೆಯ ಭಕ್ಷ್ಯ ನಾಳೆ ತೊಂದರೆ ಮೂಲ;
ಸಲ್ಲ ಬಾನಿಗೆ ಏಣಿ – ಮುದ್ದುರಾಮ 816

ಸರ್ವಜ್ಞನಾದವಗೆ ಅಕ್ಷರದ ಹಂಗೇಕೆ?
ಸುಧೆಕೊಡವ ಹಿಡಿದವಗೆ ಬುತ್ತಿ ಹಂಗೇಕೆ?
ಸಾಗರವ ಜಿಗಿವವಗೆ ಹರಿಗೋಲ ಹಂಗೇಕೆ?
ನನೆ ಹಂಗು ಹೂಗೇಕೆ? – ಮುದ್ದುರಾಮ 817

ಯಾರು ಗೆದ್ದರು ಇಲ್ಲಿ ಹಠಮಾರಿತನದಿಂದ?
ಹಠದಿಂದ ಕುರುವಂಶ ಏನ ಸಾಧಿಸಿತು?
ರಾವಣನಿಗೇನಾಯ್ತು ನೀತಿಮಾರ್ಗವ ತೊರೆದು?
ಸಲ್ಲದೋ ಒರಟಾಟ! – ಮುದ್ದುರಾಮ 818

ಹೊಟ್ಟೆಕಿಚ್ಚಿನ ಕಾವು ಪರರ ನೋಯಿಪುದಿರಲಿ
ತನ್ನ ಶಕ್ತಿಯ ಬೇರ ಕಿತ್ತೆಸೆಯದಿಹುದೆ?
ಮತ್ಸರದ ಬಿಲದಲ್ಲಿ ಇವೆ ನೂರು ವಿಷಹಾವು;
ಮರೆ ಮೊದಲು ಮಾತ್ಸರ್ಯ – ಮುದ್ದುರಾಮ 819

□



8

ನಿನಗೆ ನೀನೇ ದಿಕ್ಕು

ಕರೆ ಸೇರುವುದಕಾಗಿ ಕುಳಿತಿರುವೆ ನಾವೆಯಲಿ;
ಹುಟ್ಟು ಹಾಕದೆಯೆ ಸುಮ್ಮನಿದ್ದರೆ ಹೇಗೆ?
ತಂಗಾಳಿ ಬೀಸುತಿದೆ; ತೋರು ನೀ ಉತ್ಸಾಹ;
ನಿನಗೆ ನೀನೇ ದಿಕ್ಕು - ಮುದ್ದುರಾಮ

ಯಾರಿಂದ ಯಾರಿಲ್ಲಿ ಸಫಲತೆಯ ಕಂಡಿಹರೊ!
ಅವರವರ ಮನದಿ ಇದೆ ಸಾಫಲ್ಯ ಬೀಜ.
ಮಣ್ಣತೆರೆ ಕಳಚಿ ತಾ ಮೊಳೆತರದು ಸಸಿಶಕ್ತಿ;
ನೀನೆ ಏಳ್ಗೆಗೆ ಶಿಲ್ಪಿ – ಮುದ್ದುರಾಮ 820

ಕಂಡು ತಿಂಗಳ ತಂಪ ತುಂಬಿಕೋ ಪೂರ್ಣತೆಯ!
ಆತಂಕ ಸಂಕುಲಕೆ ಕೊಡು ತಿಲಾಂಜಲಿಯ.
ಖಿನ್ನತೆಯ ಸುಳಿಯಿಂದ ಹೊರಬಾರೊ ನೀ ಬೇಗ!
ಪೂರ್ಣಚಂದ್ರನೊ ನೀನು! – ಮುದ್ದುರಾಮ 821

ಹಿರಿದೊ ಈ ಆಕಾಶ! ಪಿರಿದೊ ಈ ಸಿರಿಬಯಲು!
ಇಂತಿರಲು ನಿನಗೇಕೆ ಇಂಥ ಕೀಳರಿಮೆ?
ಮುನ್ನುಗ್ಗು ಸಾಹಸದಿ; ತೆರೆಯಲಿದೆ ವಿಜಯಕದ.
ಈ ನೆಲದ ಧೀರ ನೀ – ಮುದ್ದುರಾಮ 822

ಎತ್ತರೆತ್ತರ ಏರು ನಿನ್ನ ಕೈಲಾದಷ್ಟು;
ನಿಂತು ಗಿರಿಶಿಖರದಲಿ ನೋಡು ಚೆಲುಕಣಿವೆ.
ಏರಿದವರಿಗೆ ಅಷ್ಟೆ ಸಾಹಸದ ಮುನ್ನೋಟ;
ನಿಲ್ಲು ನೀ ಮೇಲೇರಿ – ಮುದ್ದುರಾಮ 823

ಅವರಿವರ ಕಾಲ ಬಳಿ ಕುಳಿತೆಷ್ಟು ದಿನ ಇರುವೆ?
ಆತ್ಮಾಭಿಮಾನದಲ್ಲಿ ಇದೆ ವಿಜಯಸೂತ್ರ.
ಯಾವ ಆಸರೆ ಪಡೆದು ತೇಲುವುದೊ ಬಾನ್ಮುಗಿಲು?
ನಿನಗೆ ನೀನೇ ಶಕ್ತಿ! – ಮುದ್ದುರಾಮ 824

ಕುಸಿದು ನೀ ಬಿದ್ದಾಗ ಕಂಬನಿಯ ಕರೆಯದೆಯೆ
ಆಹ್ವಾನಿಸೋ ಸತತ ನಿನ್ನಾತ್ಮಬಲವ.
ಸಂಕಲ್ಪ ಶಕ್ತಿಯಿಂ ದೂಡು ದೌರ್ಬಲ್ಯವನು;
ನೀ ಮಾಡಬಲ್ಲೆ ಇದ! – ಮುದ್ದುರಾಮ 825

ಆಲಸ್ಯ ನಿಶ್ಶಕ್ತಿ, ಚುರುಕುತನವೇ ಶಕ್ತಿ;
ಬಳಸಿ ಕೌಶಲವ ಜಯದ ಮೆಟ್ಟಿಲನೇರು.
ದೌರ್ಬಲ್ಯ ಕಳೆಯುತ್ತ ಸಾಮರ್ಥ್ಯ ಕೂಡಿಸಿಕೊ;
ಶಕ್ತಿಕೇಂದ್ರವೊ ನೀನು! – ಮುದ್ದುರಾಮ 826

ಏನಾದರೊಂದು ನೆಪ ಜೊತೆಯಲಿರಬೇಕೆಮಗೆ
ಆಲಸ್ಯ ದೌರ್ಬಲ್ಯ ಸರಿಸಮರ್ಥನೆಗೆ.
ಶಿಸ್ತುಬದ್ಧರು ಯಾರೊ ನೆಪ ಸುಳಿಯದವರ ಬಳಿ;
ಶಕ್ತಿಸಂಪನ್ನ ನೀ – ಮುದ್ದುರಾಮ 827

ಅತ್ತ ದರಿ, ಇತ್ತ ಪುಲಿ ಎಂದಳುತ ಕೂರುವುದೆ?
ದರಿ ಹಾರಲೇಬೇಕು, ಹುಲಿ ಸೆಣಸಬೇಕು.
ದೌರ್ಬಲ್ಯ ಎಲ್ಲಿದೆಯೊ ವಿಜಯಶ್ರೀ ಅಲ್ಲಿಲ್ಲ;
ಶಕ್ತಿ ಗೆಲುವಿನ ಗುಟ್ಟು – ಮುದ್ದುರಾಮ 828

ನಿನ್ನ ಶಕ್ತಿಯನರಿವ ಮತಿ ಎಷ್ಟು ಮುಖ್ಯವೋ
ಅದಕಿಂತ ಅತಿ ಮುಖ್ಯ ದೌರ್ಬಲ್ಯದರಿವು.
ಈ ತಿಳಿವು ಬಾಳಿನಲಿ ಶ್ರೇಯಸ್ಸಿಗಭಿಮುಖವೊ!
ಮತಿಶಕ್ತಿ ಸತ್ಯ ಅರಿ – ಮುದ್ದುರಾಮ 829

ಎತ್ತರಕೆ ಏರದಿರೆ ಮುಗಿಲಲ್ಲಿ ಹನಿ ಎಲ್ಲಿ?
ನೆತ್ತಿ ಮೇಲೆತ್ತದಿರೆ ರವಿನೋಟವೆಲ್ಲಿ?
ಬಿತ್ತದಿರೆ ಬೆಳೆ ಎಲ್ಲಿ? ಕರೆಯದಿರೆ ಹಾಲೆಲ್ಲಿ?
ಕೆತ್ತದಿರೆ ಶಿಲೆ ಎಲ್ಲಿ? – ಮುದ್ದುರಾಮ 830

ಕಾಲ್ಚೆಂಡು ಇಲ್ಲದೆಯೆ ಯಾರು ಗೆದ್ದರೊ ಪಂದ್ಯ?
ಗಾಳಿ ಇಲ್ಲದೆಯೆ ಯಾರು ಉಸಿರಾಡಿದರೊ?
ನವವೇಷ ಇಲ್ಲದೆಯೆ ಪಾತ್ರವಾಡಿದರಾರೊ?
ದನಿಯಿಲ್ಲ, ಹಾಡಿಲ್ಲ – ಮುದ್ದುರಾಮ 831

ಸೋಲುಗೆಲುವಿನ ಆಟ ಇದ್ದದ್ದೆ ಬಾಳಿನಲಿ;
ತಲೆತಿರುಗದಂತಿರಲಿ ವಿಜಯದಭಿಮಾನ.
ಬಿದ್ದವರನೆತ್ತದಿರೆ ಗೆದ್ದವರು ದೊಡ್ಡವರೆ?
ಗೆಲುವಿನಲಿ ಇದೆ ಹಿರಿಮೆ – ಮುದ್ದುರಾಮ 832

ಗೆದ್ದವರು ಸೋಲುತ್ತ, ಸೋತವರು ಗೆಲ್ಲುವರು;
ಸಹಜಕ್ರಿಯೆ ಜಗದಲ್ಲಿ ಈ ಸೋಲುಗೆಲುವು.
ಮಾಟ ಮುಖ್ಯವೆ ಹೊರತು ಏರುಪೇರುಗಳಲ್ಲ;
ಏಳುಬೀಳೇ ಬಾಳು – ಮುದ್ದುರಾಮ 833

ಸಾಧನೆಯ ಪರ್ವತಕೆ ಸೋಪಾನ ನೂರೆಂಟು;
ಏರಿ ಕೆಲ ಮೆಟ್ಟಿಲನು ಕುಳಿತರರದು ಸೋಲು.
ಸಾಗುತಿರಬೇಕು ನೀ ಶಿಖರ ತಲುಪುವ ತನಕ;
ಸೋತೆನೆಂದರೆ ಕೆಟ್ಟೆ – ಮುದ್ದುರಾಮ 834

ಕೈಗೊಂಡ ಆ ಕಾರ್ಯ ಇಂದಾಗದಿರೆ ಏನು?
ನಾಳೆ ಅದು ನಿಜದಿ ರೂಪ ತಾಳದೆ ಇಹುದೆ?
ಸಾಧಿಸುವ ಛಲವಿದ್ದರದು ಸಾಕು ಸಫಲತೆಗೆ;
ವಿಜಯ ಅವಿರತ ಯಾತ್ರೆ – ಮುದ್ದುರಾಮ 835

ನಡೆವಾಗ ಇದ್ದೆ ಇದೆ ಕಲ್ಲು ಮುಳ್ಳಿನ ದಾರಿ;
ಅದ ನೆನೆದು ಕೈಕಟ್ಟಿ ಕುಳಿತರರದು ಗೆಲುವೆ?
ಮುಗ್ಗರಿಕೆ ಸೋಲಲ್ಲ; ನಿಂತರರದು ಅಪಜಯವೊ!
ಪಯಣವೆಂದರೆ ಚಲನೆ – ಮುದ್ದುರಾಮ 836

ಮುಚ್ಚಿ ಹೋದರೆ ಎಲ್ಲ ನಮ್ಮ ಮುಂದಿನ ದಾರಿ
ಇರುವೊಂದೆ ದಾರಿಯಲಿ ನಡೆಯುತಿರಬೇಕು.
ಆಗದಾಗದು ಎನುತ ಕುಳಿತರೆಲ್ಲಿದೆ ಗೆಲುವು?
ಗೆಜ್ಜೆಯಿಂದಭಿನಯವೊ! – ಮುದ್ದುರಾಮ 837

ಬಾಳಪಯಣದಲೊಮ್ಮೆ ನಿಂತು ಅಲ್ಲಲ್ಲಾಗ
ತಿರುಗಿ ನೋಡುತಿರು ನಡೆದ ಹಿಂದಿನ ಹೆಜ್ಜೆ.
ಚೆಂದ ಮುಂದಿನ ನಡೆಗೆ ಸಹಕಾರಿ ಈ ನೋಟ;
ಗತಿಗೆ ಮತಿ ಶತಧಾತು – ಮುದ್ದುರಾಮ 838

ಇರುಳೊಂದೆ ಇರದೆಂದು; ಹಗಲೊಂದೆ ಇರದೆಂದು;
ಸುಖದುಃಖವೂ ಅಂತೆ ಇರದು ಒಂದೆ ತೆರ.
ಏಳುಬೀಳುಗಳೆಲ್ಲ ಕಡಲಲೆಯ ಋತುಮಾನ;
ಕ್ಷಯದಂತೆ ಇದೆ ವೃದ್ಧಿ – ಮುದ್ದುರಾಮ 839

ಒಡನೆ ಗಿರಿ ಏರುವುದು, ಮತ್ತೆ ಅದ ಮರೆಯುವುದು
ತರುರೆಂಬೆಯಿಂದ ಫಲ ತೊಟ್ಟ ಕಿತ್ತಂತೆ.
ತಡವರಿಸದಿರಲಿನಿತು ಕೈಗೊಂಡ ಅಭ್ಯಾಸ;
ಇರಲಿ ನಿಯಮಿತ ನಿಲುವು – ಮುದ್ದುರಾಮ 840

ಕಡಲೆಡೆಗೆ ಹರಿವ ನದಿ ಮತ್ತೆ ಗಿರಿ ನೆನೆದೀತೆ?
ಹಿಮ್ಮೊಗದ ಸಂಚಾರ ತರದು ಸಂತೃಪ್ತಿ.
ಸಂಪ್ರತಿಯ ದಿಟ ಅರಿತು ಮುನ್ನಡೆದರದೆ ಗೆಲುವು;
ಓಗೊಡುತಲಿರು ಅಲೆಗೆ – ಮುದ್ದುರಾಮ 841

ಉಕ್ಕಿಬಂದರೆ ತಾನೆ ಕ್ಷೀರದಲಿ ನೊರೆನೋಟ?
ರೆಕ್ಕೆಯಿದ್ದರೆ ತಾನೆ ಹಕ್ಕಿಹಾರಾಟ?
ಹೆಕ್ಕಿ ಎಸೆದರೆ ತಾನೆ ಜೊಳ್ಳುಗಳ ತೂರಾಟ?
ದಕ್ಕಿದರೆ ಮೆರೆದಾಟ – ಮುದ್ದುರಾಮ 842

ಹತ್ತು ಜೊಳ್ಳಿನ ಬದಲು ಗಟ್ಟಿ ಕಾಳೊಂದಿರಲಿ;
ಪೊಳ್ಳುನುಡಿಗಿಂತ ಮುತ್ತು ಮಾತೊಂದಿರಲಿ.
ಖಚಿತ ಸಂಪದ ಬೆರೆತ ಅರಿವು ನುಡಿಯಲ್ಲಿರಲಿ;
ತೆನೆತಿರುಳೆ ಐಸಿರಿಯೊ! – ಮುದ್ದುರಾಮ 843

ಕಡೆಗಣಿಸದಿರು ನೀನು ಸೋಲು ಋತುಮಾನವನು;
ಜಯಬೀಜ ಬಿತ್ತಲಿಕೆ ಅದೆ ಪರ್ವಕಾಲ.
ಬಿದ್ದರೇಂ ಅಂಬಾರಿ? ಮರುಕೂರಿಸದ ಮತ್ತೆ.
ಸೋಲು ಜಯಸೋಪಾನ – ಮುದ್ದುರಾಮ 844

ಒಳಿತು ಕೇಡಿಗೆ ದೂರ; ಹಗಲು ಇರುಳಿಗೆ ದೂರ.
ನಲಿವು ನೋವಿಗೆ ದೂರ; ನಗೆ ಹಗೆಗೆ ದೂರ.
ಒಲವು ಮನಸಿಗೆ ದೂರ; ಸತ್ಯ ಸುಳ್ಳಿಗೆ ದೂರ.
ಗೆಲುವು ಸೋಲಿಗೆ ದೂರ – ಮುದ್ದುರಾಮ 845

ಜಯ ಗಳಿಸಿದವರೆಲ್ಲ ಸೋತವರೆ ಹಿಂದೊಮ್ಮೆ;
ಆದರವರಿನಿತು ಭಯದಿ ಕಂಗೆಡಲಿಲ್ಲ.
ಮರಳಿ ಯತ್ನವ ಮಾಡಿ ಏರಿದರು ಗುರಿಶಿಖರ;
ಜಯಕೆ ಮೆಟ್ಟಿಲು ಸೋಲು – ಮುದ್ದುರಾಮ 846

ಸಾಗರವ ದಾಟಲಿಕೆ ನಾವೆಯಿದ್ದರೆ ಸಾಕೆ?
ಗಾಳಿಪಟದಂತೆ ಮಾರುತನ ವರ ಬೇಕು.
ಜೊತೆಗೆ ಕೈಬಲ ಬೇಕು ಹಾಕಲಿಕೆ ಹುಟ್ಟನ್ನು;
ಒಂದೊಂದು ಪೂರಕವೊ! – ಮುದ್ದುರಾಮ 847

***

ಕನಸ ನೀ ಕಾಣದಿರೆ ಹೊಸತು ಸುಳಿವುದು ಹೇಗೆ?
ಸೊನ್ನೆಯಾದರೆ ಹೊಸತು ಬಾಳು ಅತಿ ಬರಡು.
ಬರಡಾದ ಜೀವದಲಿ ರಾಗ ಮಿಡಿವುದು ಹೇಗೆ?
ಕನಸಿನಲ್ಲಿದೆ ಸೊಗಡು – ಮುದ್ದುರಾಮ 848

ಮನದಿ ಮೂಡಿದ ಭಾವ ಘನರೂಪ ತಾಳಲಿಕೆ
ಎಸಗು ನಿಶ್ಚಿತ ಮಾಟ ಏಕಮುಖವಾಗಿ.
ಸಂಕಲ್ಪ ಬೀಜದಲಿ ಹೆಮ್ಮರದ ಶಕ್ತಿಯಿದೆ;
ಕನಸಿಗಾಕಾರ ಕೊಡು – ಮುದ್ದುರಾಮ 849

ಕನಸ ಕಾಣುವುದೊಳಿತು; ಅದು ಚೆಂದವೋ ಚೆಂದ!
ಹಗಲುಗನಸಾದರದು ನಷ್ಟವೋ ನಷ್ಟ!
ನೀ ಕಂಡ ಆ ಕನಸು ನನಸಾಗುವುದು ಮುಖ್ಯ;
ಕನಸೊಂದೆ ಗುರಿಯಲ್ಲ – ಮುದ್ದುರಾಮ 850

ಬಿಲ್ಲು ಬಾಣಗಳಿದ್ದು ಸ್ಪಷ್ಟ ಗುರಿಯಿಲ್ಲದಿರೆ
ಏನಾಯಿತದರಿಂದ? ಕಸರತ್ತಿನಿಂದ?
ಮರದಿ ಹಣ್ಣಿದ್ದೇನು? ಕೆಡವದಿರೆ ರುಚಿ ಎಲ್ಲಿ?
ಗುರಿನಕ್ಷೆಯೊಂದಿರಲಿ – ಮುದ್ದುರಾಮ 851

ನೇರ ನಡೆನುಡಿ ಜೊತೆಗೆ ಇರಲಿ ಸಂಯಮ ಸಹನೆ;
ತರ್ಕಬದ್ಧತೆಯಿರಲಿ ವ್ಯವಹಾರದಲ್ಲಿ.
ಅನುಕಂಪೆ ಕಣ್ಣಿರಲಿ, ಸೂಕ್ಷ್ಮತೆಯ ಕಿವಿಯಿರಲಿ;
ಗುರಿ ಸ್ಪಷ್ಟವಾಗಿರಲಿ – ಮುದ್ದುರಾಮ 852

ಅಭಿಯಾನ ನೂರಿದ್ದು ಗುರಿ ನೆಟ್ಟಗಿಲ್ಲದಿರೆ
ಎತ್ತರದ ಗಿರಿಯತ್ತ ಬಂಡೆ ಹೊತ್ತಂತೆ.
ನೇರನಡೆಯಿಂದಷ್ಟೆ ಆಕಾಂಕ್ಷೆ ಪೂರೈಕೆ;
ಗುರಿಯಂತೆ ನಡೆಯಿರಲಿ – ಮುದ್ದುರಾಮ 853

ಕೈಲಿರುವ ಕಾರ್ಯದಲಿ ಗುರುತಿಸಾದ್ಯತೆ ಮೊದಲು;
ಬಳಿಕ ಕೇಂದ್ರೀಕರಿಸು ಏಕಮನದಿಂದ.
ಪಟ್ಟುಹಿಡಿದದ ನಿರತ ಪೂರೈಸು ಶ್ರದ್ಧೆಯಲಿ;
ಗೆಲುವಿಗಿದೆ ನಿಜಸೂತ್ರ – ಮುದ್ದುರಾಮ 854

ನೇರ ದಾರಿಯ ಮರೆತು ಅಲೆಯದಿರು ಅತ್ತಿತ್ತ;
ಏರಿಳಿತ ಲಯವೊಂದು ಇದೆ ಅಲೆಯ ಹಿಂದೆ.
ಭ್ರಾಂತಿಗೊಳಗಾದರದೆ ಜೀವಿತದ ಕೊನೆಯ ಚಣ;
ಅಲೆತ ದೂರವೊ ಗುರಿಗೆ! – ಮುದ್ದುರಾಮ 855

ಸೋಲಸೆರಗಿನ ಕೆಂಡ ಕಂಡು ಹೌಹಾರದಿರು;
ತಣ್ಣಗಾಗದೆ ಕೆಂಡ ಕೆಲ ಚಣದ ಬಳಿಕ?
ಉಡುಗಿದರೆ ಧೀರತನ ಸುಳಿಗೆ ಅದೆ ಹೆದ್ದಾರಿ;
ಜಯದ ಮೆಟ್ಟಿಲು ಸೋಲು – ಮುದ್ದುರಾಮ 856

ಮೊಂಡು ಕೊಡಲಿಯ ಬಳಸಿ ಸೌದೆ ಕಡಿಯುವೆ ಹೇಗೆ?
ಕಳಪೆ ಕತ್ತರಿಯಿಂದ ಗಿಡ ಸವರುವೆಂತು?
ಸಾಣೆ ಹಿಡಿ ಮೊದಲದಕೆ; ಸುಲಭವಾಗಲಿ ಕೆಲಸ.
ಹಣತೆ ಹಚ್ಚದೆ ಬೆಳಕೆ? – ಮುದ್ದುರಾಮ 857

ಹೊಲದಿ ತೆನೆ ಬಾರದಿರೆ ಕಾಳೆಲ್ಲಿ ಕಣಜದಲಿ?
ಅಡುಗೆ ಮಾಡದಿರೆ ರುಚಿ ಎಲ್ಲಿ ತಟ್ಟೆಯಲಿ?
ಇರುವುದನು ಉಣ್ಣದಿರೆ ಬಲವೆಲ್ಲಿ ದೇಹದಲಿ?
ಕೌಶಲವೆ ಐಸಿರಿಯೊ! – ಮುದ್ದುರಾಮ 858

ಹೆಜ್ಜೆ ಇಡು ಕತ್ತಲಲಿ ನಗುನಗುತ ಶಶಿಯತ್ತ;
ಕಾಣಲಾಗದಿರೇನು ನೀ ಚಂದ್ರಮೊಗವ?
ಸುಖಿಸು ನೀ ಪಯಣದಲಿ ಕಂಡು ತಾರಾನಿವಹ;
ಎತ್ತರದ ಗುರಿ ಇರಲಿ – ಮುದ್ದುರಾಮ 859

***

ಕನಸಿನಲಿ ಹೋಳಿಗೆಯ ಕಂಡು ಅದ ಉಣಬಹುದೆ?
ಗಿರಿಯನೇರದಿರೆ ಗುಡಿಕಲಶ ಕಾಣುವುದೆ?
ಕಡಲ ತಡಿಯಲಿ ನಿಲದೆ ತೆರೆ ಚೆಂದ ಕಾಣುವುದೆ?
ಆರಂಭ ಮಂಗಳವೊ! – ಮುದ್ದುರಾಮ 860

ನಿನ್ನ ಇಚ್ಛಾಶಕ್ತಿ ವಿಜಯ ಸಂಜೀವಿನಿಯೊ!
ಹೆದರದಿರು ಸಂಕಟಕೆ, ಮರೆ ಭೀತಿ ಚಿಂತೆ.
ನಡೆ ಗಟ್ಟಿಗೊಳಿಸುತ್ತ ಸಾಧ್ಯವೆಂಬಾಶಯವ;
ನನಸಾಗಿಸೋ ಕನಸ! – ಮುದ್ದುರಾಮ 861

ಕಡಲ ತೀರದಿ ನಿಂತು ನಾವೆಯನೆ ಏರದಿರೆ
ಆಚೆ ಕೆರೆಯನು ಹೇಗೆ ತಲುಪುವೆಯೊ ಬೇಗ?
ಕುಳಿತುಕೋ ದೋಣಿಯಲಿ; ಹಾಕುತಿರು ಹುಟ್ಟನ್ನು;
ದುಡಿದರಲ್ಲವೆ ಬುತ್ತಿ? – ಮುದ್ದುರಾಮ 862

ನೇಯದಿರೆ ಬಿಡಿ ನೂಲ ಬಟ್ಟೆ ಪಡೆಯುವೆ ಹೇಗೆ?
ಬಿತ್ತದಿರೆ ಬೀಜ ಹೂವ ನೋಡುವೆ ಹೇಗೆ?
ಕೆಸರೆ ಆಗದಿರೆ ಕೈ ಮೊಸರ ಸವಿಯುವೆ ಹೇಗೆ?
ಕಾಯಕವೆ ಸುವಿಲಾಸ – ಮುದ್ದುರಾಮ 863

ದೀಪ ಹಚ್ಚದೆ ಬರಿದೆ ತಮವ ದೂರುವೆ ಏಕೆ?
ಹೆಜ್ಜೆ ಹಾಕದೆ ಮುಂದೆ ಗೊಣಗುತಿರುವೇಕೆ?
ಬೀಜ ಬಿತ್ತದೆ ಇಂದು ತಿರೆಯ ಹಂಗಿಸುವೇಕೆ?
ಸಫಲತೆಗೆ ಶ್ರಮ ಬೇಕು – ಮುದ್ದುರಾಮ 864

ನಿರತ ತೋಡುತಲಿದ್ದರದು ಬಾವಿಯಾಗುವುದು;
ನಿರತ ಬರೆಯುತಲಿದ್ದರದು ಚಾರುಕವಿತೆ.
ನಿರತ ಚಿಂತನೆಯಿಂದ ಏಕಮುಖ ಗುರಿಪ್ರಾಪ್ತಿ;
ಇರಲಿ ಅವಿರತ ದುಡಿಮೆ – ಮುದ್ದುರಾಮ 865

ಭಿತ್ತಿ ನೂರೆಂಟಿರಲಿ, ಬಣ್ಣ ಎಷ್ಟೇ ಇರಲಿ;
ಕುಂಚ ಕೈಯಾಡಿಸದೆ ಚಿತ್ರ ಮೂಡುವುದೆ?
ಸರಿ ದುಡಿಮೆಯಿಂದಷ್ಟೆ ಕಲ್ಪನೆಗೆ ಆಕಾರ;
ಚಲಿಸದಿರೆ ನಡೆ ಎಲ್ಲಿ? – ಮುದ್ದುರಾಮ 866

ಅಡಿಗಲ್ಲ ಹಾಕದಿರೆ ಗೋಡೆ ಕಟ್ಟುವೆ ಹೇಗೆ?
ಗೋಡೆಯಿಲ್ಲದ ಗೃಹದಿ ವಾಸಿಸುವೆ ಹೇಗೆ?
ವಾಸ್ತವ್ಯವಿಲ್ಲದಿರೆ ಸುಖವ ಕಾಣುವೆ ಹೇಗೆ?
ಕೃಷಿ ಹೇಗೊ ಸುಖ ಹಾಗೆ! – ಮುದ್ದುರಾಮ 867

ಕಡಲತ್ತ ಹರಿಯದೆಯೆ ಯಾವ ತೊರೆ ನಿಂತಿದೆಯೊ?
ಕಲಿತು ದನಿಯೆತ್ತದೆಯೆ ಯಾರು ಹಾಡಿದರೊ?
ಗುರಿಯತ್ತ ಸಾಗದೆಯೆ ಯಾರು ಜಯ ಗಳಿಸಿದರೊ?
ಗೆಲುವು ಎಂದರೆ ದುಡಿಮೆ – ಮುದ್ದುರಾಮ 868

ಕಲಿಯದಿರೆ ಅಕ್ಕರದಿ ವಿದ್ಯೆ ತನಗೊದಗುವುದೆ?
ಒರಗದಿರೆ ಸಾಧನೆಗೆ ನಾದ ದಕ್ಕುವುದೆ?
ಆರಾಧಿಸದೆ ಕಲೆಯ ಸಂತೋಷ ದೊರಕುವುದೆ?
ದುಡಿತದಿಂದೈಶ್ವರ್ಯ – ಮುದ್ದುರಾಮ 869

ಇರಬಹುದು ಮನದಲ್ಲಿ ಮಣಗಟ್ಟಲೆಯ ಕಾಂಕ್ಷೆ;
ರೂಪಗೊಳದಿರೆ ಕ್ರಿಯೆಗೆ ಕಿಮ್ಮತ್ತು ಸೊನ್ನೆ.
ತಿರೆಮರೆಯ ಬಂಗಾರ ಹೊರಬರದೆ ಬೆಳಗುವುದೆ?
ದೀಪ ಹಚ್ಚದೆ ಬೆಳಕೆ? – ಮುದ್ದುರಾಮ 870

ಇಷ್ಟವಿಲ್ಲದ ಕೆಲಸ ಸೆರೆಮನೆಯ ಸೇರ್ದಂತೆ;
ಪ್ರೀತಿಸಿದ ಕಾರ್ಯ ಮಲ್ಲಿಗೆಯ ಕಂಪಂತೆ.
ಕೈಗೊಂಡ ಎಸಕದಲಿ ಇರಲಿ ಶ್ರದ್ಧಾನಿಷ್ಠೆ;
ಕಾರ್ಯ ಕಾಲದ ಕುಂಚ – ಮುದ್ದುರಾಮ 871

ಬೇರಿರದ ಲತೆಗೆಷ್ಟು ನೀರನೆರೆದರೆ ಏನು?
ಎಳ್ಳಿರದ ಗಾಣ ಎಷ್ಟು ಸುತ್ತಿದರೇನು?
ನೇಮವಿಲ್ಲದೆ ಬರಿದೆ ಪೂಜೆ ಮಾಡಿದೊಡೇನು?
ಕ್ರಿಯೆ ಹೇಗೊ ಫಲ ಹಾಗೆ – ಮುದ್ದುರಾಮ 872

ಮೊದಲ ಯತ್ನದಿ ನಿನಗೆ ಗೆಲುವು ದೊರೆಕಿತು ಎನ್ನು;
ತೃಪ್ತನಾಗದೆ ಅದಕೆ ತೊಡಗು ದುಡಿಮೆಯಲಿ.
ಇಲ್ಲದಿರೆ ಬಂದೀತು ಅದೃಷ್ಟದಪವಾದ;
ಕ್ರಿಯೆ ವಿಜಯದಡಿಗಲ್ಲು – ಮುದ್ದುರಾಮ 873

ಮೆಟ್ಟಿಲನೆ ಏರದಿರೆ ಮರೆತುಬಿಡು ಗಿರಿಗುರಿಯ;
ಲಿಪಿಯನೇ ಮೂಡಿಸದೆ ಕಾವ್ಯ ಕನಸೇಕೆ?
ಓಡದೆಯೆ ಪಂದ್ಯದಲಿ ಕೊರಳಿಗೊಲಿವುದೆ ಪದಕ?
ಯತ್ನ ಭಾಗ್ಯವಿಧಾತ – ಮುದ್ದುರಾಮ 874

ಹುಲುಸು ಬೆಳೆ ಕಾಣಲಿಕೆ ಬೇಕು ಸರಿ ಆರೈಕೆ;
ನೀರೊಡ್ಡದಿರೆ ಎಲ್ಲಿ ಭೂಮಿಯಲಿ ತಂಪು?
ಕೊಡದೆ ಗೊಬ್ಬರ ಬುಡಕೆ ಫಲವೆಲ್ಲಿ ರೆಂಬೆಯಲಿ?
ಜಯಕೆ ಸಾಧನ ಯತ್ನ – ಮುದ್ದುರಾಮ 875

ಶಿಷ್ಯನಾದರೆ ನೀನು ಏಕಲವ್ಯನ ನೆನೆಯೊ!
ಎಂಥ ಸಾಧನೆ ಶಕ್ತಿ! ಏನು ಗುರುಭಕ್ತಿ!
ಚೈತನ್ಯವೆಲ್ಲಿಹುದೊ ಇದೆ ಅಲ್ಲಿ ಶ್ರೇಯಸ್ಸು;
ಯತ್ನದಿಂದಲೆ ಗೆಲುವು – ಮುದ್ದುರಾಮ 876

ನಿನ್ನ ಗುರಿ ಈ ಮಾರ್ಗ ಮುಚ್ಚಿಹೋದರೆ ಏನು?
ಗುರಿ ಸೇರಲಿಕೆ ಇರದೆ ಇನ್ನೊಂದು ದಾರಿ?
ನಿನ್ನೂರ ತಲುಪಲಿಕೆ ಕಾಣು ನವನವ ತಿರುವ;
ಮರಳಿ ಯತ್ನವ ಮಾಡು – ಮುದ್ದುರಾಮ 877

ಊರದಾರಿಯ ಮರೆತು ಚಲಿಸಿದರೆ ಅತ್ತಿತ್ತ
ಗುರಿಯ ಸೇರುವೆ ಹೇಗೆ ತಪ್ಪು ನಡೆಯಿಂದ?
ನೆಟ್ಟಗಿದ್ದರೆ ಹೆಜ್ಜೆ ಇದೆ ನಾದ ಗೆಜ್ಜೆಯಲಿ;
ನೇರ ನಡೆ ಮಧುರಮಯ – ಮುದ್ದುರಾಮ 878

ನಾಂದಿ ಗೀತೆಯ ಮರೆತು ಮಂಗಳವ ಹಾಡುವುದೆ?
ಓಂಕಾರ ಬರೆಯದೆಯೆ ಕಾವ್ಯ ರಚಿಸುವುದೆ?
ನೀರಿನೊಳಗಿಳಿಯದೆಯೆ ಆ ತೀರ ತಲುಪುವುದೆ?
ಹೊಲಿಯದೆಯೆ ಧರಿಸುವುದೆ? – ಮುದ್ದುರಾಮ 879

ಪ್ರತಿನಿತ್ಯ ಅಗೆ ನೀನು ಒಂದೊಂದೆ ಅಡಿ ನೆಲವ;
ಜಲ ಉಕ್ಕಿ ಬರದಿಹುದೆ ಬಳಿಕ ಬಾವಿಯಲಿ?
ಮರೆಯದೆಯೆ ಹೊತ್ತಾರೆ ಒಂದೊಂದು ಪುಟವ ಬರೆ;
ಅದೆ ನಾಳೆ ಹೊತ್ತಿಗೆಯೊ! – ಮುದ್ದುರಾಮ 880

ಇಡದೆ ಹೆಜ್ಜೆಯ ಮುಂದೆ ಗಿರಿಶಿಖರ ಏರುವೆಯ?
ನೀರಿಗಿಳಿಯದೆಯೆ ನದಿದಡವ ತಲುಪುವೆಯ?
ಕೊಳಲ ನೀ ಊದದೆಯೆ ಮೋಹನವ ನುಡಿಸುವೆಯ?
ಹಾಡಲಿಕೆ ತೆರೆ ತುಟಿಯ – ಮುದ್ದುರಾಮ 881

ತರುವೇರಿ ಫಲ ಕೀಳು; ರುಚಿಯೋ ನೇರಿಳೆ ಆಗ;
ಸೇದು ಬಿಂದಿಗೆ ಬಿಟ್ಟು; ಕೈಗೆ ಜಲ ಆಗ.
ಓದು ಅಕ್ಕರೆಯಿಂದ; ಕಾವ್ಯ ನೇಹಿಗ ಆಗ;
ದಯೆ ತೋರು, ಸುಖ ಆಗ – ಮುದ್ದುರಾಮ 882

ಬರಿ ಪುಸ್ತಕವ ಓದಿ ಈಜು ಕಲಿತವರಿಹರೆ?
ನೀರಿಗಿಳಿಯದೆಯೆ ಈಜಬಲ್ಲೆಯ ನೀನು?
ರಚಿಸಿ ಹಣ್ಣಿನ ಚಿತ್ರ ರುಚಿ ಹೀರಬಲ್ಲೆಯಾ?
ನೆಡು ಬೀಜ; ಉಣು ಫಲವ – ಮುದ್ದುರಾಮ 883

ಒತ್ತಡದ ದೆಸೆಯಿಂದ ಜೀವ ದಿಕ್ಕಾಪಾಲು;
ತತ್ತರಿಕೆಯಿಂದಿಲ್ಲ ತುಸು ಸಮಾಧಾನ.
ಅತ್ತು ಕರೆಯುತ್ತಲಿರೆ ಸಂಭಮದ ಸೊಗಸೆಲ್ಲಿ?
ಬಿತ್ತಿ ಬೆಳೆದರೆ ತೆನೆಯೊ! – ಮುದ್ದುರಾಮ 884

ಆಲಸ್ಯಕೊರಗಿದರೆ ನೂರು ಪರಿಪರಿ ಕೊರಗು;
ಪೂರ್ವಸಿದ್ಧತೆಯಿಂದ ಸಿದ್ಧಿ ಸಾಫಲ್ಯ.
ಕೊನೆಗಳಿಗೆ ಆಚರಣೆ ಗಳಗಳನೆ ಅತ್ತಂತೆ;
ಸಂಯೋಜಿಪುದೆ ಮತಿಯೊ! – ಮುದ್ದುರಾಮ 885

***

ಏರಿದವರಾರೊಮ್ಮೆ ಉತ್ತುಂಗ ಶಿಖರವನು?
ಒಂದೊಂದೆ ಸೋಪಾನ ಏರಿ ಗಿರಿಕಾಣ್ಕೆ.
ಗಿರಿಯ ಎತ್ತರ ಕಂಡು ಬಸವಳಿದು ಕೂರದಿರು;
ಹತ್ತು ಸಾಹಸದಿಂದ – ಮುದ್ದುರಾಮ 886

ಹತ್ತಾರು ಸಂಕೀರ್ಣ ಪ್ರಶ್ನೆ ಎದುರಾದಾಗ
ಅನುಸರಿಸದಿರು ಎಂದು ಪಲಾಯನಸೂತ್ರ.
ಮುಖಹೇಡಿತನದಿಂದ ಏನ ಸಾಧಿಸಲಾರೆ;
ನಿಂತು ನೀ ಹೋರಾಡು – ಮುದ್ದುರಾಮ 887

ತೇವ ಕಡ್ಡಿಯ ಗೀಚಿ ಹಣತೆ ಹಚ್ಚುವೆ ಹೇಗೆ?
ಹೆಜ್ಜೆ ಮುಂದಿಡದೆ ಬೆಟ್ಟ ಹತ್ತುವೆ ಹೇಗೆ?
ಮರೆತ ಸಾಲನೆ ನೆನೆದು ಕವನ ರಚಿಸುವೆ ಹೇಗೆ?
ಮುನ್ನುಗ್ಗು ಧೈರ್ಯದಲಿ – ಮುದ್ದುರಾಮ 888

ಧೀರಪಥ ತನಗಲ್ಲ, ಅದು ಆರದೋ ಸೊತ್ತು
ಎನುತೆನುತ ಅಪ್ಪದಿರು ಹೇಡಿತನವನ್ನ.
ಕೃಷಿ ಎಲ್ಲೊ ಬೆಳೆ ಅಲ್ಲಿ; ಗುರಿ ಎಲ್ಲೊ ಫಲ ಅಲ್ಲಿ;
ಹೋರಾಡು ಗೆಲ್ಲಲಿಕೆ – ಮುದ್ದುರಾಮ 889

ಮನದ ಆಶಯ ಎಷ್ಟೆ ಒಳಿತನೊಡಗೂಡಿರಲಿ
ಸುಳಿಯುವುದು ಒಮ್ಮೊಮ್ಮೆ ವಿಘ್ನ ನೂರೆಂಟು.
ಎದೆಗುಂದಿ ಕಂಗೆಟ್ಟು ನಿಂತರದು ಅವಸಾನ;
ಧೈರ್ಯ ಸೌದಾಮಿನಿಯೊ! – ಮುದ್ದುರಾಮ 890

ಹಿಡಿದು ಧೈರ್ಯಗುರಾಣಿ ಯಾರು ಮುನ್ನುಗ್ಗುವರೊ
ಇದೆ ಅವರ ಕೊರಳಲ್ಲಿ ವಿಜಯಮಣಿಮಾಲೆ.
ಸಾಕಾರ ದನಿಗಿರಲಿ ಆಶಯದ ಆಯಾಮ;
ಧೃತಿಯಿಂದ ಆಕೃತಿಯೊ! – ಮುದ್ದುರಾಮ 891

ಅಳುತಳುತ ಸುರಿಸಿದರೆ ಕಂಬನಿಯ ಪಾತ್ರೆಯಲಿ
ಬಳಸದಿಹ ಜಲ ನೆಲದಿ ಹಿಂಗಿಹೋದಂತೆ.
ಇಳಿಸಿ ಚಿಂತೆಯ ಹೊರೆಯ ಹೋರು ಧೀರತೆಯಿಂದ;
ಗಳಿಸು ಜಯ ಛಲದಿಂದ – ಮುದ್ದುರಾಮ 892

ಧೀರ ಹೋರಾಟದಲಿ ಕೆಚ್ಚೆದೆಯ ತುಡಿತವಿದೆ;
ಸಾಧಿಸುವ ಛಲದ ಜೊತೆ ಗುರಿಯ ಕಾಣ್ಕೆಯಿದೆ.
ಮೋದವಿದೆ, ಮೋಡಿಯಿದೆ ಕೈಗೊಂಡ ಕಾರ್ಯದಲಿ;
ಮಧುರ ಉನ್ನತಿಗೀತೆ – ಮುದ್ದುರಾಮ 893

ಹಗಲಗನಸಿಂದೆಂತು ಸಾಧಿಸುವೆ ಗುರಿ ಸಿರಿಯ?
ಚಿತ್ರಹೋಳಿಗೆ ತಿಂದು ರುಚಿ ತಿಳಿಸಬಹುದೆ?
ಚಾಲನೆಯ ಪ್ರಕ್ರಿಯೆಗೆ ಬೇಕೊಂದು ದೃಢ ಹೆಜ್ಜೆ;
ಈಸಿ ಕರೆ ತಲುಪು ನೀ – ಮುದ್ದುರಾಮ 894

ಮುಂದೇನೊ ಮತ್ತೇನೊ ಎನುತ ಮುನ್ನಡೆ ಮರೆತು
ಮನ ಮುದುರಿ ಮಂಕಾಗಿ ಕಾಲ ಕಳೆಯದಿರೊ!
ಗಾಳಿ ಜೊತೆ ಸರಿಯದಿರೆ ಮುಗಿಲಿನಲಿ ಹನಿಯೆಲ್ಲಿ?
ಅಗೆ ನೆಲವ, ಜಲ ಆಗ – ಮುದ್ದುರಾಮ 895

ಪಾಶುಪತ ಪಡೆಯಲಿಕೆ ಎಂಥ ಪಾರ್ಥ ತಪಸ್ಸು!
ಬೇಕು ಸಾಧನೆ ಛಲಕೆ ಭಗೀರಥ ಯತ್ನ.
ಕಡಲ ದಾಟಲಿಕೆಂಥ ಹನುಮಂತ ನಿಶ್ಚಲತೆ;
ಅಗಸುತೆಗೆ ಶಿವಧ್ಯಾನ – ಮುದ್ದುರಾಮ 896

ತೂತು ಕೊಡವನು ಬಳಸಿ ಜಲವ ಕೂಡಿಡುವೆಂತು?
ನೆಲದಿ ಸಸಿಯನು ನೆಡದೆ ಫಲ ಉಣುವೆ ಎಂತು?
ಅರಿಯದೆಯೆ ಸಪ್ತಸ್ವರ ರಾಗ ಹಾಡುವೆ ಎಂತು?
ದಳವಿರದೆ ಹೂವೆಂತು? – ಮುದ್ದುರಾಮ 897

ರೆಪ್ಪೆಯನೆ ತೆರೆಯದಿರೆ ನೋಟವೆಲ್ಲಿದೆ ಕಣ್ಗೆ?
ರಾಗವೆಲ್ಲಿದೆ ಪದಕೆ ತುಟಿಯ ತೆರೆಯದಿರೆ?
ನಾದವೆಲ್ಲಿದೆ ಕಿವಿಗೆ ಕೇಳದಿರೆ ಕೀರ್ತನೆಯ?
ಹೆಜ್ಜೆಯಿಟ್ಟರೆ ಪಯಣ – ಮುದ್ದುರಾಮ 898

ಕಾರ್ಯದಾಚರಣೆಯಲಿ ತಪ್ಪಾಗುವುದು ಸಹಜ;
ನಡೆವ ಗಳಿಗೆಯಲೊಮ್ಮೆ ಮುಗ್ಗರಿಸಬಹುದು.
ಅರಿತು ತಪ್ಪಿನ ಪರಿಯ ತಿದ್ದಿಕೊಂಡರೆ ಕ್ಷೇಮ;
ಹೆಜ್ಜೆ ಮುಂದಿಡೆ ಹೊಸತು – ಮುದ್ದುರಾಮ 899

ಮುಗ್ಗರಿಸಿ ನಿಂತವಗೆ ಸೂಳ್ನುಡಿಯೆ ಭರವಸೆಯೊ!
ಮುಳುಗುತಿರುವಾತನಿಗೆ ರೆಂಬೆ ಆಸರೆಯೊ!
ಕಾತರದಿ ಬೆಂದವಗೆ ಕರುಣೆದನಿ ಔಷಧವೊ!
ಒತ್ತಾಸೆ ಓರಣವೊ! – ಮುದ್ದುರಾಮ 900

ಅತ್ತಿತ್ತ ಬಾಗದೆಯೆ ಒರಗುತಿರು ಖಚಿತತೆಗೆ;
ಅಡ್ಡಗೋಡೆಯ ಮೇಲೆ ದೀಪವಿಡುವೇಕೆ?
ಸಂದಿಗ್ಧ ಸುಳಿಯಲ್ಲಿ ಸಿಲುಕಿದರೆ ಸಂಕಟವೊ!
ನಿರ್ಧಾರ ಅತಿ ಮುಖ್ಯ – ಮುದ್ದುರಾಮ 901

ವಿಫಲತೆಯ ಎದುರಲ್ಲಿ ಸೆಡ್ಡು ಹೊಡೆಯುತ ನಿಲ್ಲು;
ಓಡೋಡಿ ಹೋಗದಿರು ಹೆದರಿ ನರಿಯಂತೆ.
ಸೋತರದು ಸೋಲಲ್ಲ; ತಲೆಬಾಗಿದರೆ ಸೋಲು.
ಚಿತ್ತಸ್ಥಿರತೆಯೆ ವಿಜಯ – ಮುದ್ದುರಾಮ 902

ತಿರುಳಿರದ ಮಾತೊಂದು ಗೂಬೆ ಮನೆ ಹೊಕ್ಕಂತೆ,
ನೀರಿಗಿಳಿಯದ ದೋಣಿ ಹೂ ಬಾಡಿದಂತೆ.
ಕೃತಿಗಿಳಿಯದಿಹ ಬರಹ ಗಾಳಿಗೋಪುರದಂತೆ;
ಸಫಲತೆಯೆ ಸಾರ್ಥಕವೊ! – ಮುದ್ದುರಾಮ 903

ಸತ್ತು ಹೋದರೆ ಕನಸು ಮುದುಕನಾಗುವೆ ಅಂದೆ;
ಹಾರಿ ಹೋಗದ ತೆರದಿ ಕಾಪಾಡು ಕನಸ.
ಇಂತಾಯಿತೇಕೆಂದು ಅಳುತಳುತ ನಿಲ್ಲದಿರು;
ನಡೆ ಮುಂದೆ ಗುರಿಯತ್ತ – ಮುದ್ದುರಾಮ 904

ಹತ್ತುತಿರೆ ನಿಯಮಿತದಿ ಒಂದೊಂದೆ ಮೆಟ್ಟಿಲನು
ತಲುಪೆ ತೀರುವೆ ಆಗ ನಿನ್ನ ಗುರಿಶಿಖರ.
ಸೋತು ನಿಂತರೆ ಎಲ್ಲಿ ಜಯಪತಾಕೆಯ ಲಾಭ?
ಅಣಿಯಾಗು ವಿಕ್ರಮಕೆ – ಮುದ್ದುರಾಮ 905

***

ನೀರನೆರೆಯದೆ ಗಿಡಕೆ ಹೂವ ಕಾಣುವ ಬಯಕೆ;
ನುಡಿಸಿರಿಯ ಗಳಿಸದೆಯೆ ಭಾಷಣದ ಚಪಲ.
ಕಲಿಯದೆಯೆ ಅಭಿನಯವ ಲಾಸ್ಯವಾಡುವ ಆಸೆ;
ತರವಲ್ಲ ಹುಚ್ಚಾಸೆ – ಮುದ್ದುರಾಮ 906

ಅಭಿಲಾಷೆ ಇದೆ ನೂರು ಒಂದೊಂದು ಎದೆಯಲ್ಲಿ
ಒಲವಿನಲಿ ನಂಟಿನಲಿ ವ್ಯಾಪಾರದಲ್ಲಿ.
ಬೇಕು ಅವಿರತ ದುಡಿಮೆ ಸಾಧಿಸುವ ಛಲಕಾಗಿ;
ಆಸೆಯಿದ್ದರೆ ಸಾಕೆ? – ಮುದ್ದುರಾಮ 907

ಸಾಧಿಸುವ ಛಲದಲ್ಲಿ ಉತ್ಸಾಹ ತುಂಬಿರಲಿ;
ಆಲಸ್ಯಕಿನಿತಲ್ಲಿ ಎಡೆಯಿಲ್ಲದಿರಲಿ.
ಆತಂಕ ಸುಳಿದಲ್ಲಿ ಧೈರ್ಯ ಮನೆ ಮಾಡಿರಲಿ;
ಗುರಿಯೊಂದೆ ಮುಂದಿರಲಿ – ಮುದ್ದುರಾಮ 908

ನೆಟ್ಟಗಿದ್ದರೆ ದೃಷ್ಟಿ ಗುರಿ ತಲುಪುವುದು ಸುಲಭ;
ಅಡ್ಡದಾರಿಯ ಹಿಡಿದು ಬಳಲಿದರೆ ಕಷ್ಟ.
ಪಯಣ ಸುಖವಾಗಲಿಕೆ ಪಥದಾಯ್ಕೆ ಅತಿ ಮುಖ್ಯ;
ಗರಿಗೆದರಿದರೆ ಹಕ್ಕಿ – ಮುದ್ದುರಾಮ 909

ಗೊಣಗುತಿದ್ದರೆ ಬರಿದೆ ಪ್ರಶ್ನೆಗುತ್ತರವೆಲ್ಲಿ?
ಅರಸಿ ಪರಿಹಾರಗಳ ಬಿಡಿಸು ಕಗ್ಗಂಟ.
ಕಡಿಯದಿರೆ ಸೌದೆಯನು ಒಲೆಯ ಉರಿಸುವೆ ಹೇಗೆ?
ಹೆಪ್ಪಿಡದೆ ಮೊಸರಿದೆಯೆ? – ಮುದ್ದುರಾಮ 910

ಎಡವಿ ಬಿದ್ದರೆ ಅದಕೆ ಕೊರಗಿ ಚಿಂತಿಸಬೇಡ;
ನಡೆಯಲಿದ್ದೀತು ಎಲ್ಲೊ ಏನೋ ತಪ್ಪು!
ತಪ್ಪನ್ನೆ ಎಸಗದಿವರಾರಿಹರು ಜಗದಲ್ಲಿ?
ತಿದ್ದಿಕೊಂಡರೆ ಲೇಸು – ಮುದ್ದುರಾಮ 911

ನಾಳೆ ಏನೋ ಎಂತೊ ಎಂದಳುತ ನೀನೀಗ
ಅಂಜಿದರೆ ಅಳುಕಿದರೆ ಅದೆ ಕಟ್ಟಕಡೆಯೊ!
ತೋರದಿರೆ ಸಾಹಸವ ಚಿಂತೆ ಕಚ್ಚದೆ ಇಹುದೆ?
ಕೊರಗದಿರು ಕುಸಿಯದಿರು – ಮುದ್ದುರಾಮ 912

ನಿನ್ನಿಚ್ಛೆ ದಾರಿಯಲಿ ಬಲಪಡಿಸು ಆಶಯವ;
ತಿರುವುಮುರುವಿನಲಿರುವ ಕುಂದ ಪರಿಹರಿಸು.
ಕೈಯ ಬಿಟ್ಟರೆ ನಡುವೆ ಗಿರಿಯನೇರುವೆ ಹೇಗೆ?
ಗುರಿ ಮರೆತು ಅದರದಿರು – ಮುದ್ದುರಾಮ 913

ನಿನ್ನ ನೆನ್ನೆಯ ಸೋಲು ಕಾಲೆಳೆಯದಿರಲಿಂದು;
ಒಮ್ಮೆ ಕುಸಿದರೆ ಮತ್ತೆ ಕುಸಿಯಬೇಕಿಲ್ಲ.
ಅನುಭವದ ಗೆರೆಯಿಂದ ರಚಿಸು ನವ ಚೆಲುಚಿತ್ರ;
ವಿಜಯ ಮೆಟ್ಟಿಲನೇರು – ಮುದ್ದುರಾಮ 914

ಬಾಳಿನಾಟದಲೊಮ್ಮೆ ಬೇಸ್ತು ಬಿದ್ದಿರಬಹುದು;
ಆಟದಲಿ ಎಲೆ ಕೈಗೆ ಬಾರದಿರಬಹುದು.
ಸೋಲು ದಿಟ್ಟಿಸದೆಮ್ಮ ಅನವರತ ಮಾಟದಲಿ;
ಎಲೆ ಅಲೆವುದತ್ತಿತ್ತ – ಮುದ್ದುರಾಮ 915

ಯಾವುದೋ ಕದವೊಂದು ಮುಚ್ಚಿತೆಂದಳಬೇಡ;
ಒಂದಲ್ಲ ನೂರು ಕದ ಇಹುದೊ ಕಣ್ಮುಂದೆ!
ಸಾಗು ತಟ್ಟುತ ಕದವ; ತೆರೆವುದಾವುದೊ ಒಂದು.
ತೂರತ್ತ ಖಿನ್ನತೆಯ – ಮುದ್ದುರಾಮ 916

ಗುರಿಯ ತಲುಪುವ ಗಳಿಗೆ ಹಿಂದೆ ಬಿದ್ದರೆ ಏನು?
ಮರಳುತಿರು ನೀ ಒಲಿದು ಮತ್ತೆ ಅದರತ್ತ.
ಭಂಗವಾಯಿತು ಎನುತ ಅಳುಕಿದರೆ ಗೆಲುವೆಲ್ಲಿ?
ಈಜಿದರೆ ಇದೆ ತೀರ – ಮುದ್ದುರಾಮ 917

ಹೊಸತನವ ತರುವುದಕೆ ಇರಬೇಕು ಆಕಾಂಕ್ಷೆ;
ಅದ ನನಸು ಮಾಡಲಿಕೆ ಬೇಕು ಅಭಿಲಾಷೆ.
ಗೆಲುವ ತಾ ಪಡೆಯಲಿಕೆ ಕಾಯಕವೆ ಪರಿಭಾಷೆ;
ತೊಡು ಸಾಧಿಸುವ ದೀಕ್ಷೆ – ಮುದ್ದುರಾಮ 918

ಬಿಲ್ಲನ್ನೆ ಹಿಡಿಯದಿರೆ ಬಾಣ ಹೂಡುವೆ ಹೇಗೆ?
ಉಳಿಯ ಹಿಡಿಯದಿರೆ ಕಲ್ಲ ಕೆತ್ತುವೆ ಹೇಗೆ?
ಕುಂಚವನೆ ಹಿಡಿಯದಿರೆ ಚಿತ್ರ ರಚಿಸುವೆ ಹೇಗೆ?
ಸಾಧಿಸೋ ಹಿಡಿದದ್ದ! – ಮುದ್ದುರಾಮ 919

ಕರದಿ ಲೇಖನಿ ಹಿಡಿದು ಮೊದಲ ಪದ ಬರೆಯದಿರೆ
ಕವಿತೆ ಮೂಡುವುದೆಂತು ಕಾಗದದ ಮೇಲೆ?
ಒಲೆಯನ್ನೆ ಹಚ್ಚದಿರೆ ರಸಪಾಕ ಬರಿಗನಸು;
ನೆಡು ಮೊದಲು ಸಸಿ ನೆಲದಿ – ಮುದ್ದುರಾಮ 920

ಮಾಡಬೇಕಾದುದನು ಪಟ್ಟಿ ಮಾಡುವುದೊಳಿತು;
ಪಟ್ಟಿಯನೆ ನೋಡುತ್ತ ಕುಳಿತರದು ಬೆಪ್ಪು.
ನೆಟ್ಟ ಬೀಜಕೆ ನೀರನೆರೆದರಲ್ಲವೆ ಮೊಳಕೆ?
ಮಾಡು ಕಾರ್ಯಾರಂಭ – ಮುದ್ದುರಾಮ 921

ಉತ್ಸಾಹ ಕ್ರಿಯೆ ಜೊತೆಗೆ ಮಾಗಿದನುಭವ ಬೆರೆತು
ತೆರೆದೊಂದು ನವದಾರಿ ಭವ್ಯತೆಯ ಕುರುಹು.
ಭರವಸೆಯ ಬಲದಿಂದ ಆಕಾಂಕ್ಷೆ ಸಾಕಾರ;
ಮುರಿ ಅಡ್ಡಗೋಡೆಗಳ – ಮುದ್ದುರಾಮ 922

ಇದೆ ಮೊದಲನೆಯ ಸ್ಥಾನ ಒಬ್ಬನಿಗೆ ಪಂದ್ಯದಲಿ;
ಸಿಗಲಾರದೀ ಪದಕ ಎಲ್ಲರಿಗೆ ಒಮ್ಮೆ.
ಯೋಗ್ಯತೆಯ ತೆಕ್ಕೆಯಲಿ ಆತುಕೊಂಡಿದೆ ವಿಜಯ;
ಹೆಜ್ಜೆ ಇಡುತಿರು ಮುಂದೆ – ಮುದ್ದುರಾಮ 923

ಮರಳು ಗಾರೆಯ ಜೊತೆಗೆ ಕಲ್ಲು ಇಟ್ಟಿಗೆ ಇರಲು
ಮನೆಯ ಕಟ್ಟದೆಯೆ ಕೊಡುವೇಕೆ ಬಾಡಿಗೆಯ?
ಯೋಜನೆಯ ಕೊರತೆಯಲಿ ಎಲ್ಲಿ ದಕ್ಷತೆ ಸ್ಪರ್ಶ?
ರೂಪಿಸಿಕೊ ಚೆಲುನಕ್ಷೆ! – ಮುದ್ದುರಾಮ 924

ಕಣ್ತೆರೆದು ಹಗಲಲ್ಲಿ ಕನಸ ಕಂಡವರುಂಟೆ?
ಕನಸ ಕಾಣುವುದೊಳಿತು ಹಿರಿದು ಸಾಧನೆಗೆ.
ಕ್ರಿಯೆಗೆ ಹೊರಳದ ಕನಸು ಬರಿಗಾಳಿಗೋಪುರವೊ!
ರೂಪಕೊಡು ಚಿಂತನೆಗೆ – ಮುದ್ದುರಾಮ 925

ಅರೆನಿಮಿಷ ನಿಲ್ಲದೆಯೆ ಬರಿದೆ ನೀ ನಡೆಯುತಿರೆ
ಉಂಡು ಸುಖಿಸುವೆ ಹೇಗೆ ಹೊತ್ತ ಬುತ್ತಿಯನು?
ಓದಿದುದ ಅರಗಿಸಿಕೊ; ಅನುಸರಿಸು ಆಮೇಲೆ.
ಕೃತಿಗಿಳಿಸು ಶಾಸ್ತ್ರವನು – ಮುದ್ದುರಾಮ 926

ಬಾಣವಿಲ್ಲದೆ ಬಿಲ್ಲ ಬಳಸಿ ಗೆಲ್ಲುವೆ ಎಂತು?
ಕುದುರೆಯಿಲ್ಲದೆ ರಥವ ಓಡಿಸುವೆ ಎಂತು?
ಸಂಕಲ್ಪವಿಲ್ಲದೆಯೆ ಜಯವ ಗಳಿಸುವೆ ಎಂತು?
ದಕ್ಷ ಸಾರಥಿಯಾಗು – ಮುದ್ದುರಾಮ 927

□



9

ನೆನೆ ಪುಣ್ಯಜೀವಿಗಳ

ಕೊಟ್ಟು ಬೆಳಕನು ಜನಕೆ ತಾ ಕರಗಿ ಹೋಗುವುದೆ
ಮೇಣಬತ್ತಿಯ ರೀತಿ ಸಜ್ಜನರ ತೆರದಿ.
ಇನ್ನೊಂದು ಹೊತ್ತಿಸುತ ತಾ ನಂದುವುದು ಜ್ಯೋತಿ;
ಬೆಳಕು ದಿವ್ಯತೆ ರೂಪ – ಮುದ್ದುರಾಮ

ಮನದ ಮದದಿಂದಾರು ಬಹುದೂರ ನಿಂತಿಹರೊ,
ಯಾರು 'ಭಾವದ ಕೊನೆಯ ಮೊನೆಯ' ಮೇಲಿಹರೊ
ಅವರೆ ನಿಸ್ಸಂಗಿಗಳು, ಆತ್ಮಾನುಸಂಧಿಗಳು.
ನಿಜ ಆಚಾರ್ಯರವರೆ! – ಮುದ್ದುರಾಮ 928

ನಾವು ನಿದ್ರಿಸುವಾಗ ಎಚ್ಚರಿದ್ದರು ಇವರು;
ಬಿಸುಟರೋ ತೂಕಡಿಕೆ ನಮಗಾಗಿ ಇವರು!
ಬರುವ ಪೀಳಿಗೆಗಾಗಿ ಕನಸ ಕಂಡರು ಇವರು;
ತ್ಯಾಗಜೀವಿಗಳಿವರು! – ಮುದ್ದುರಾಮ 929

ಶಾಂತ ಸಂತ ಮಹಂತ ಸತ್ಪುರುಷರಿಹರಿಲ್ಲಿ
ಸಾಗರದ ತಳದ ರತ್ನದೋಪಾದಿಯಲಿ.
ಭೀಮಭವಾರ್ಣವದಿಂ ಜನವ ದಾಟಿಪರವರು;
ಕಾರುಣ್ಯತೊರೆ ಇವರು – ಮುದ್ದುರಾಮ 930

ಯಾರದೋ ನೋವಿನಲಿ ತಾವು ಒಂದಾಗುವರು;
ಅರಿತು ಪರಬೇಗೆ ಕಂಬನಿಯ ಸುರಿಸುವರು.
ಕತ್ತಲೆಯ ತಾಣದಲಿ ಕಿರುಹಣತೆ ಹಚ್ಚುವರು;
ಧನ್ಯರೆಂದರೆ ಇವರೆ! – ಮುದ್ದುರಾಮ 931

ಯಾರೊ ತಿದ್ದಿದರೆಮ್ಮ ಅಕ್ಕರೆಯ ಅಕ್ಷರವ;
ಯಾರೊ ಕಲಿಸಿದರೆಮಗೆ ಭಾಷಾಭಿಮಾನ.
ಮಿಡಿದರೆದೆಯಲಿ ಯಾರೊ ನಾದಸಿರಿ ಮಾಧುರ್ಯ;
ದೀಪಧಾರಿಗಳವರು – ಮುದ್ದುರಾಮ 932

ಯಾರು ಪರಹಿತಕಾಗಿ ಜೋಳಿಗೆಯ ಹಿಡಿಯುವರೊ
ಅವರು ಭಿಕ್ಷುಕರಲ್ಲ, ಮಹನೀಯರವರು.
ತನ್ನೊಡಲನಷ್ಟನ್ನೆ ನೆನೆವವರು ವಂಚಕರು;
ಮನಸು ಹಿರಿದಾಗಿರಲಿ – ಮುದ್ದುರಾಮ 933

ಯಾರ ದರುಶನ ನಮಗೆ ಮಂಗಳದ ಬೆಳಕಾಗಿ
ದಿವ್ಯತೆಯ ತೋರುವುದೊ ವಂದ್ಯರವರಿಲ್ಲಿ!
ಅವರಿರಲು ತೊಡಕಿಲ್ಲ, ಕಷ್ಟಕೋಟಲೆಯಿಲ್ಲ;
ಅವರೆ ಕರುಣಾಸಿಂಧು! – ಮುದ್ದುರಾಮ 934

ಸಮಚಿತ್ತ ಅನುಕಂಪೆ ನಿರ್ಮಮತೆ ಉತ್ತಮತೆ
ಸೌಜನ್ಯ ಔದಾರ್ಯ ಗುಣಭರಿತರವರು.
ಮಹನೀಯರಾದವರ ಬಾಳೆಮಗೆ ಮಾದರಿಯೊ!
ಇವರ ಕತೆ ಚಿರಸ್ಫೂರ್ತಿ – ಮುದ್ದುರಾಮ 935

ಹಿರಿದಾದ ಜೀವದಲಿ ಹಗೆತನದ ಸೋಂಕಿಲ್ಲ;
ವೈಭೋಗವಿನಿತಿಲ್ಲ, ವೈಫಲ್ಯವಿಲ್ಲ.
ಗಂಗೋತ್ರಿಯಂತಲ್ಲಿ ನೈರ್ಮಲ್ಯ ಕಾಣ್ಕೆಯಿದೆ;
ಸಾಧು ಹಿಮಗಿರಿಶಿಖರ – ಮುದ್ದುರಾಮ 936

ಯಾರ ನಡೆ ಸಮರಸವೊ, ಯಾರ ನುಡಿ ಪಾವನವೊ
ಅಲ್ಲಿಲ್ಲ ಇನಿತನಿತು ಬಿಗುಮಾನಬೆರಕೆ.
ವೇದ್ಯವಾಗುವುದರಿವು ಆಚಾರ ಪರಮರಿಗೆ;
ಸಂತ ಶುದ್ಧಿಪ್ರತೀಕ – ಮುದ್ದುರಾಮ 937

ಇರಲಿ ಮಣಗಟ್ಟಲೆಯ ತನ್ನ ನೋವಿನ ಭಾರ;
ಅದ ಮರೆತು ಪರನೋವ ನೆನೆವವನೆ ಸಾಧು.
ಸಿದ್ಧರಾದವರೆಲ್ಲ ಮೌಲ್ಯಪ್ರತಿಪಾದಕರೊ!
ಸಂತ ಗುಣಸಂಪನ್ನ – ಮುದ್ದುರಾಮ 938

ಮೋಹಮದ ಮಾತ್ಸರ್ಯ ತಾವಾಗಿ ಹೊರಗುಳಿದು
ಎಚ್ಚೆತ್ತ ಭಾವವಿದೆ ಸಾಧುತನದಲ್ಲಿ.
ಬಾಳಪರಿಪೇಕ್ಷದಲಿ ಏಕಾಂತ ಚಿತ್ರವಿದೆ;
ಸಂತ ಸಂತಸಮೂರ್ತಿ – ಮುದ್ದುರಾಮ 939

ಯಾರ ಮನದಲ್ಲಿರದೊ ವಿಷಮ ಅಸಮತೆ ಭೇದ
ಮೃಷ್ಟಾನ್ನ ಭಿಕ್ಷಾನ್ನ ಎಲ್ಲವೂ ಒಂದೆ!
ಅಳಲು ನಲಿವುಗಳೊಂದೆ ಯೋಗಿ ಕಣ್ಣಂಚಿನಲಿ;
ಸಹನೆಮಾರ್ದನಿ ಸಾಧು – ಮುದ್ದುರಾಮ 940

ಸರ್ವ ಸಮತಾಭಾವ ಉಳ್ಳಾತ ನಿಜಯೋಗಿ
ರಾಗಮತ್ಸರ ದ್ವೇಷ ಇಲ್ಲ ಈತನಿಗೆ.
ದೀನದಲಿತರ ಪ್ರೇಮಿ, ದಯಾಪೂರ್ಣನೊ ಈತ!
ಚಿತ್ತಶುದ್ಧನೊ ಯೋಗಿ! – ಮುದ್ದುರಾಮ 941

ತನಗೆ ಮುನಿದವರೊಡನೆ ಇನಿತು ಮುನಿಯದ ನಿಲುವು
ಅಂತರಂಗದಲಿ ಇನಿತು ಬಯಸದ ನಿಷ್ಠೆ
ಪರನಾರಿ ಪರಧನಕೆ ಇನಿತು ಒಲಿಯದ ಮನಸು
ಶರಣ ಲಕ್ಷಣ ಗರಿಮೆ – ಮುದ್ದುರಾಮ 942

ಮನದೃಷ್ಟಿಭಾವದಲಿ ಪರುಷಗುಣ ಶರಣನದು;
ಶಂಕೆರಹಿತನು ಯಾರೊ ಆತ ಸಿದ್ಧಪ್ರಸಿದ್ಧ.
ಸುಚರಿತ್ರನಾದವನೆ ಮಹಿಮನೋ ಜಗದಲ್ಲಿ!
ಕರುಣೆಸಾಗರ ಶರಣ – ಮುದ್ದುರಾಮ 943

ಸಂತರಾದವರೆಲ್ಲ ಕಾಮಕ್ರೋಧವನೆಸೆದು
ಸಂಯಮಕೆ ಶರಣಾದ ನೀತಿಪಾಲಕರು.
ಹರಿದ ಬಟ್ಟೆಯ ತೊಟ್ಟ ಜ್ಞಾನದಾಸೋಹಿಗಳು;
ಸಾಧುಜನ ಜಗ ಬೆಳಗು – ಮುದ್ದುರಾಮ 944

ನೀತಿಕತೆ ಹೇಳುತ್ತ ತೋರುವಳು ದಿವ್ಯತೆಯ;
ಜೋಗುಳವ ಹಾಡುವಳು ತಲೆಯ ನೇವರಿಸಿ.
ಮನ್ನಿಸುತ ತಪ್ಪುಗಳ ಭೂದೇವಿಯಾಗುವಳು;
ತಾಯಿ ತಾಳ್ಮೆಯ ಮೂರ್ತಿ – ಮುದ್ದುರಾಮ 945

ಹೆಣ್ಣ ಕಣ್ಸನ್ನೆಯಲಿ ಹೊನ್ನ ಹೊಂಬಣ್ಣದಲಿ
ಮುತ್ತಿ ನಿಂತಿದೆ ಸುತ್ತ ಭವದ ಜಂಜಾಟ.
ಮೆಟ್ಟನಿಂತರೆ ಇದನು ಪರಮ ಸಜ್ಜನ ಆತ;
ಸಾಧುತನ ದೈವಿಕತೆ – ಮುದ್ದುರಾಮ 946

ಒಳಿತೆಸಗಿ ಮರೆಯುತದ ನಿರ್ಲಿಪ್ತರಾಗಿಹರು;
ಹೃದಯವಂತರು ಅವರು ಕಾಯಿಮರೆಯಂತೆ.
ಕರುಣೆ ರಸತೊರೆಯಲ್ಲಿ ಮಿಂದು ನಗುತೇಳುವರು;
ಪುಣ್ಯಾತ್ಮರಿಹರಿಲ್ಲಿ – ಮುದ್ದುರಾಮ 947

ಆಪ್ತಜನ ಬಾಂಧವರ ತೊರೆದವನೆ ಸನ್ಯಾಸಿ;
ಪೂರ್ವಾಶ್ರಮವ ಮರೆತು ನಿಂತವನೆ ಸಾಧು.
ಇಂಥ ಗುರುವರ್ಯನಿಗೆ ಸಕಲ ವಸುಧೆ ಕುಟುಂಬ;
ಸಿದ್ಧರಿಹರಲ್ಲಲ್ಲಿ! – ಮುದ್ದುರಾಮ 948

ರಂಭೆ ಮೇನಕೆ ಬಂದು ನಾಟ್ಯವಾಡಲಿ ಮುಂದೆ
ಮನ ವಿಚಲವಾಗದಿರೆ ಅವ ಸಾಧು ಸಿದ್ಧ.
ಬ್ರಹ್ಮಚರ್ಯೆಯ ವಿಷಯ ಸುಲಭ ಸಂಗತಿಯಲ್ಲ;
ಸಂತ ವಿಷಯಾತೀತ – ಮುದ್ದುರಾಮ 949

ಯಾರಿಂದ ಯಾವ ಬಗೆ ಪ್ರತಿಫಲವ ಆಶಿಸದೆ
ಎಲೆಮರೆಯ ಕಾಯಂತೆ ಇಹರೆಷ್ಟೊ ಮಂದಿ.
ನೀಡಿ ಫಲರುಚಿ ತಾವು ಮೆಲ್ಲ ಸರಿವರು ಹಿಂದೆ;
ಧನ್ಯಾತ್ಮರಿಹರಿಲ್ಲಿ – ಮುದ್ದುರಾಮ 950

ಪರಮನವ ನೋಯಿಸದೆ ಹಿತವ ತರುವವರಿಹರು;
ಕಣ್ಣಂಚಿನಶ್ರುವನು ತೊಡೆವವರು ಇಹರು.
ಬಿಸಿಲಿನಲಿ ಕೊಡೆ ಹಿಡಿದು ನೆರಳ ಬಯಸುವರಿಹರು;
ಪುಣ್ಯಾತ್ಮರಿಲ್ಲಿಹರೊ! – ಮುದ್ದುರಾಮ 951

ತಮ್ಮ ಇತಿಮಿತಿ ಅರಿತು, ಕಲಿತು ಅನುಭವದಿಂದ
ಹಿಡಿದರೋ ಜೋಳಿಗೆಯ ದಿವ್ಯಾತ್ಮನೆದುರು!
ಇರುವುದೆಲ್ಲವ ಕೊಟ್ಟು ಶ್ರೀಪಾದಕೆರಗಿದರೊ!
ಸಿದ್ಧರೆಂದರೆ ಇವರೆ! – ಮುದ್ದುರಾಮ 952

ಉಪದೇಶ ಗೈಯಲಿಕೆ ಇಹರು ಸಾವಿರ ಮಂದಿ;
ನುಡಿದಂತೆ ನಡೆವವರು ಬೆರಳೆಣಿಕೆಯಷ್ಟು.
ಯೋಗನಿರತರು ಅವರು, ಸಿದ್ಧೇಶ್ವರರು ಅವರು;
ಆಚಾರವೇ ಅರಿವು – ಮುದ್ದುರಾಮ 953

ಗೈದು ಸೇವೆಯ ಜಗಕೆ ತೃಪ್ತಿ ಪಡೆದರೆ ಕೆಲರು
ನಕ್ಕು ನಲಿವರು ಕೆಲರು ಕೃತಿರಚನೆಯಿಂದ.
ಕೆಲರಿಗತಿ ಇಷ್ಟ ತಮ್ಮೇಕಾಂತ ಚಿರಮೌನ;
ಜಗದ ಬಗೆ ಅಗಣಿತವೊ! – ಮುದ್ದುರಾಮ 954

ತನ್ನ ಸುಖ ಬದಿಗೊತ್ತಿ ಪರಹಿತವ ನೆನೆಯುವುದು
ಸಜ್ಜನರ ಬಾಳಿನಲಿ ಸರ್ವಸಾಮಾನ್ಯ.
ಪ್ರೀತಿಸ್ಪಂದನದಿಂದ ಪರಿಸರದಿ ಹೊಂಬೆಳಕು;
ಕರುಣೆ ದೇಶಿಕ ಗುಣವೊ! – ಮುದ್ದುರಾಮ 955

ಏಕಾಂತ ಸೂಕ್ಷ್ಮತೆಯ ಪಲ್ಲವದ ಅರಳಿಕೆಗೆ
ಜೀವರಸ ಚೈತನ್ಯ ಸಾಧು ಸತ್ಸಂಗ.
ತಳಮಳದ ಕೊರೆ ಅಳಿದು ಅದು ವಿಮಲ ಸಂಗಾತಿ;
ಸಗ್ಗ ಸಿದ್ಧರ ಸಂಗ – ಮುದ್ದುರಾಮ 956

ಯಾರ ಪದತಳದಲಿ ನಿಂತು ನೀ ನಮ್ರನಾಗುವೆಯೊ
ಅದು ದಿಗಂಬರತೆ, ಎತ್ತರದ ವ್ಯಕ್ತಿತ್ವ
ಮಿತಿಯ ಪರಿಮಿತಿಯಿಲ್ಲ ಆ ಮುಗುಳುನಗೆಯಲ್ಲಿ;
ಗೊಮ್ಮಟನೆ ಹುಣ್ಣಿಮೆಯೊ! – ಮುದ್ದುರಾಮ 957

ತೋಳುಮರವಾಗಷ್ಟೆ ನಿಂತವರು ಬಹುಮಂದಿ;
ನಿನ್ನ ಪಯಣಕೆ ದಾರಿ ಆ ಜಂಗಮತ್ವ.
ಇಂಥ ಗುರುತನದಿಂದ ಕ್ಷೇಮ ನಿನ್ನಯ ಪಯಣ;
ನೆರವಿನಲಿ ಇದೆ ಕರುಣೆ – ಮುದ್ದುರಾಮ 958

ಯಾರ ಸನ್ನಿಧಿ ಸ್ಪರ್ಶ ತರುವುದೋ ಸಂಸ್ಕಾರ
ಅನುಸರಿಸು ಮೆಲ್ಲ ಆ ಮಹಿಮ ಚೇತನರ.
ದಯೆದೀಪ್ತಿಯಿಂದಷ್ಟೆ ಬೆಳಕು ಈ ಸಂಸಾರ;
ಹಿತವಿರಲಿ ಸಂಚಾರ – ಮುದ್ದುರಾಮ 959

ಬಡವ ಎನ್ನಯ ಬಂಧು, ಅವನೊಳಿತೆ ತನ್ನೊಳಿತು
ಎಂದಾರು ಹಲುಬಿದರೊ ವಂದ್ಯರವರೆಮಗೆ.
ಸಣ್ಣತನ ಮರೆತೊಡನೆ ಇದೆ ಉದಾರತೆ ಆಗ;
ಕಾಣು ನರನಲಿ ಹರಿಯ – ಮುದ್ದುರಾಮ 960

***

'ತಾವೇನ ಮಾಡುತಿಹರೆಂಬುದರ ಅರಿವಿಲ್ಲ,
ಕ್ಷಮಿಸವರ ಪ್ರಭುವೆ' ಎನಲಿಲ್ಲವೇ ಏಸು?
ಮೊಳೆ ಜಡಿದು ಕೊಲುವವರ ಕುರಿತೆಂಥ ನುಡಿಮುತ್ತು!
ಏಸು ಕರುಣಾಮೂರ್ತಿ – ಮುದ್ದುರಾಮ 961

ಸರ್ವಗುಣ ಸಂಪನ್ನ ವರದಾನಿ ಪರಶಿವನ
ಶ್ರೀಪಾದಪದ್ಮದಲಿ ದುಂಬಿಯೋ ಬಸವ!
ಭಕುತಿ ಪರಿಮಳ ಹೊತ್ತ ತಂಗಾಳಿಯೋ ಈತ!
ಭಾವವಾಹಕ ಬಸವ – ಮುದ್ದುರಾಮ 962

ಶರಣ ಸನ್ನಿಧಿಯಲ್ಲಿ ದೈವ ಕಂಡವ ಬಸವ;
ದಯೆಯಲ್ಲಿ ನಿಜಧರ್ಮ ಕಂಡಾತ ಬಸವ.
ದಾಸೋಹ ಕಾಯಕದಿ ಸಿದ್ಧಿ ಕಂಡವ ಬಸವ;
ಭಕ್ತಿಭಾಸ್ಕರ ಬಸವ – ಮುದ್ದುರಾಮ 963

ಯಾರಿವನು? ಯಾರಿವನು? ಎನುವ ಅನಿಸಿಕೆ ತೊರೆದು
ಇವನು ನಮ್ಮವನೆಂದ ಈ ದಯಾಮೂರ್ತಿ.
ಗುಡಿಸಿಲಲಿ ಅರಮನೆಯ ಸುಖವ ಕಂಡವನೀತ;
ಇವ ಸಮತೆಭಾಂಡಾರಿ – ಮುದ್ದುರಾಮ 964

ಬಸವದರ್ಶನವೇನು ಊರ ಹೋರಿಯ ಕೊಂಬೆ?
ಸಂತೆ ಗದ್ದಲವೆ? ಆಡಂಬರದ ಬೆಡಗೆ?
ಸತ್ಯಾನುಸಂಧಾನ ಚಿಗುರಿದನುಭಾವ ಅದು;
ಬಸವ ಜೀವನಬೆಳಕು – ಮುದ್ದುರಾಮ 965

ಅಕ್ಕನೆಂದರೆ ಯಾರು? ಬೆತ್ತಲೆ ವಿರಾಗಿಣಿಯೆ?
ಅಲ್ಲಲ್ಲ; ಶರಣ ಬಾನಿನುಜ್ವಲ ಬೆಳಕು.
ಸತ್ಯ ಸಾಕ್ಷಾತ್ಕಾರ ಕಂಡಾಕೆ ಕದಳಿಯಲಿ;
ಅಕ್ಕ ದಿಟ್ಟತೆ ರೂಪ – ಮುದ್ದುರಾಮ 966

ಚಾರಿತ್ರ್ಯ ಚೈತನ್ಯ ಪೌರುಷದ ಬಲದಿಂದ
ನರೇಂದ್ರ ತಾನಾದ ವಿವೇಕಾನಂದ.
ಪರಿಶುದ್ಧಿ ಬದಿಯಲ್ಲಿ ಇದೆ ಶೀಲ ನಿರ್ಮಾಣ;
ಸ್ಫೂರ್ತಿ ಸಾಧನೆ ಕೊಂಡಿ – ಮುದ್ದುರಾಮ 967

ಒಳಿತನ್ನ ನೋಡಲಿಕೆ ಪರಿಶುದ್ಧ ಕನ್ನಡಕ;
ಸರಿದಾರಿ ನಡೆಯಲಿಕೆ ಒಂದೂರೆಗೋಲು.
ಸಮಯ ಪರಿಪಾಲನೆಗೆ ಜೊತೆಗೊಂದು ಗಡಿಯಾರ;
ಆದರ್ಶ ಗುರು ಗಾಂಧಿ – ಮುದ್ದುರಾಮ 968

ಹಿಡಿದು ಸರಳತೆ ಕೋಲ, ನಡೆದು ಶಾಂತಿಯ ಮಾರ್ಗ
ತಂದ ಉನ್ನತಿ–ಕ್ರಾಂತಿ ವೈರ ಹೊರಗಟ್ಟಿ.
ಸ್ವಾತಂತ್ರ್ಯ ಪರಮಾನ್ನ ನಾಡವರ ಸಂಕ್ರಾಂತಿ;
ಪ್ರೀತಿಸಂಪದ ಬಾಪು – ಮುದ್ದುರಾಮ 969

ಕರವಾಲ ಪಿಡಿಯದೆಯೆ ಸತ್ಯಾಗ್ರಹದ ಬಲದಿ
ಸಮರ ಗೆದ್ದವನೀತ ಧೀಮಂತ ಶೂರ.
ಸೆರೆಮನೆಯ ವಾಸದಲಿ ಅರಿತ ಗೀತೆಯ ಸಾರ;
ಇವ ಅಹಿಂಸಾಮೂರ್ತಿ – ಮುದ್ದುರಾಮ 970

ಸೋತವರ ಎದೆಯಲ್ಲಿ ಶೌರ್ಯಬೀಜವ ಬಿತ್ತಿ
ತಂದ ನಾಡಿನ ತುಂಬ ಸ್ವಾತಂತ್ರ್ಯ ಕಣಜ.
ಬಿದ್ದವರ ಮೇಲೆತ್ತಿ ಸಾಂತ್ವನದ ಮಳೆಗರೆದ;
ಗಾಂಧಿ ಛಲಸಂಕೇತ – ಮುದ್ದುರಾಮ 971

ತಿರುಗಿಸುತ ಚರಕವನು ಕಾಯಕದ ನೆಲೆಯಾದ;
ಶಾಂತಿಮಂತ್ರವ ಪಠಿಸಿ ಲೋಕಗುರುವಾದ.
ತನ್ನದೆಲ್ಲವ ಬಿಟ್ಟು ಜನಮನದ ಬೆಳಕಾದ;
ಮಹಾತ್ಮನೇ ಆದ – ಮುದ್ದುರಾಮ 972

ನೈರಾಶ್ಯ ನೆಲೆಯಲ್ಲಿ ಹಚ್ಚಿ ಆಶಾದೀಪ
ವಿಜಯನೇಹಿಗನಾದ ಸಮುದಾಯದಲ್ಲಿ.
ನಿದ್ದೆಯಿಂದೆಚ್ಚರಿಸಿ ನೆರವಾದ ಪೌರುಷಕೆ;
ಗಾಂಧಿ ಗೆಲುವಿಗೆ ನಾಂದಿ – ಮುದ್ದುರಾಮ 973

ಇವನ ನೆನಪೇ ನಮಗೆ ಸನ್ಮತಿಯ ನಿಜದಾರಿ;
ವೈರನಿರ್ಮೂಲನಕೆ ಜಪತಪದ ಮಂತ್ರ.
ಎಲ್ಲಿ ಹುಟ್ಟಿದರೇನು? ಈತ ವಿಶ್ವಕುಟುಂಬಿ;
ಗಾಂಧಿ ಯುಗಯುಗ ಬೆಳಗು – ಮುದ್ದುರಾಮ 974

ನಡೆದಂತೆ ನುಡಿದೆ ನೀ; ನುಡಿದಂತೆ ನಡೆದೆ ನೀ;
ಇನಿತು ಕುಗ್ಗದೆ ನಡೆದೆ ಸತ್ಯಮಾರ್ಗದಲಿ.
ಹೀಗಿಲ್ಲದಿರೆ ನಿನ್ನ ನೆನೆಯುತಿದ್ದರೆ ಮಂದಿ?
ನೀನೆ ಭಾಗ್ಯವಿಧಾತ – ಮುದ್ದುರಾಮ 975

ಪಾಂಚಜನ್ಯವನೂದಿ ತಾ ದಲಿತ ದನಿಯಾದೆ;
ಮಲಿನ ಕಸವನು ಗುಡಿಸಿ ತಂದೆ ಸ್ವಚ್ಛತೆಯ.
ಹಗೆತನವ ಹೊರಹಾಕಿ ಪ್ರೀತಿಧಾರೆಯನೆರೆದೆ;
ಭಾಪುರೆ ಓ ಬಾಪು! – ಮುದ್ದುರಾಮ 976

ಎದ್ದೊಡನೆ ನೆನೆ ಅವನ ಕರುಣೆ ಶಾಂತಿಯ ಸೂತ್ರ;
ತುಂಬಿಕೋ ಕಣ್ಣಲ್ಲಿ ಆ ತ್ಯಾಗಚಿತ್ರ.
ನುಡಿ, ನೋಡು, ಕೇಳು ನೀ ಒಳಿತನ್ನೆ ದಿನನಿತ್ಯ;
ಗಾಂಧಿ ಎಂದರೆ ಸತ್ಯ – ಮುದ್ದುರಾಮ 977

ಬಂದಿತ್ತ ಮೆರೆಯದೆಯೆ ನಡೆದು ಮೌನದಿ ಮೆಲ್ಲ
ಈಕ್ಷಿಸುತ ಹೂಬನವ ಚಲಿಸಿದವರಿವರು.
ಅರಿವು ದಾಸೋಹದಲಿ ತೃಪ್ತಿಕಂಡವರಿವರು;
ಇವರೆ ಸಿದ್ಧೇಶ್ವರರೊ! – ಮುದ್ದುರಾಮ 978

***

ಹೊತ್ತಾರೆ ಎದ್ದೊಡನೆ ಮಿಂದು ಮಡಿಯುಟ್ಟು ನೀ
ನೆನೆಯೊ ದಿವ್ಯಾತ್ಮರನು, ಶುದ್ಧಮನದವರ.
ಅನುಸರಿಸು ಅವರಿಟ್ಟ ಹೆಜ್ಜೆಗುರುತುಗಳ;
ಇದೆ ಪುಣ್ಯ ಬೆಳಕಲ್ಲಿ – ಮುದ್ದುರಾಮ 979

ದುಡಿಮೆ ಮೆಟ್ಟಿಲನೇರಿ, ಜಪಿಸಿ ಕರುಣೆಯ ಮಂತ್ರ
ಪರಹಿತದ ಸೌಧವನು ರಚಿಸಿದವರಿಹರೊ!
ನೆನೆ ಅವರ ಕೈಂಕರ್ಯ; ನಮಿಸು ಆ ಚೇತನಕೆ;
ದೀಪಧಾರಿಗಳವರು – ಮುದ್ದುರಾಮ 980

ಹೊತ್ತಾರೆ ಎದ್ದೊಡನೆ ನೆನೆ ತುತ್ತನಿತ್ತವರ,
ಕೈಹಿಡಿದು ಪ್ರೀತಿಯಲಿ ಮುನ್ನಡೆಸಿದವರ.
ಅಕ್ಕರದಿ ಅಕ್ಷರವ ಕಲಿಸಿದವರನು ನೆನೆಯೊ!
ನೆನೆ ಆಪ್ತರಾದವರ – ಮುದ್ದುರಾಮ 981

ನೆನೆ ತುತ್ತನಿತ್ತವರ, ನೆನೆ ವಸನ ಕೊಟ್ಟವರ
ನೆನೆ ತಿಲಕವಿಟ್ಟವರ ನಿನ್ನ ಅಭ್ಯುದಯಕೆ.
ಪದ ಕಲಿಸಿದವರ ನೆನೆ, ದನಿ ತಿದ್ದಿದವರ ನೆನೆ;
ನೆನೆ ದಾರಿ ತೋರ್ದವರ – ಮುದ್ದುರಾಮ 982

ಹರಿಸಿದರು ರಸಧಾರೆ ಅಮೃತವರ್ಷಿಣಿಯಂತೆ;
ಕೊಟ್ಟೆನೆಂಬರಿವಿರದೆ ಮರೆಯಾದರವರು.
ಅಹಮಿಕೆಯ ಸೋಲ್ಲಿರದ ಗುಣ ಪರಮ ಚೈತನ್ಯ;
ನೆನೆ ಅವರ ಮುಂಜಾನೆ – ಮುದ್ದುರಾಮ 983

ಕತ್ತಲೆಯ ದಾರಿಯಲಿ ಹಚ್ಚಿ ನಂದಾದೀಪ
ಬೆಳಕನಿತ್ತವರೆಮಗೆ ಬಾಳಧ್ರುವತಾರೆ.
ಇಂಥ ಘನ ಸುಚರಿತರ ನೆನಪೊಂದು ಚೈತನ್ಯ;
ನೆನೆ ಪುಣ್ಯಜೀವಿಗಳ – ಮುದ್ದುರಾಮ 984

ಯಾರ ನೆನೆವುದೊ ಮನಸು ಸಂಕಷ್ಟ ಸಮಯದಲಿ
ಅವರ ಪದಧೂಳಿನಲಿ ಧ್ಯಾನಸ್ಥನಾಗು.
ಚೈತನ್ಯ ಚಿಗುರುವುದು ಆ ನೆನಪು ಕುಡಿಯಲ್ಲಿ;
ನಮಿಸು ಆ ಹೂದನಿಗೆ – ಮುದ್ದುರಾಮ 985

ಕಿರಣ ಸಂಚಯದಿಂದ ತೋರಿ ಬೆಳಕಿನ ದಾರಿ
ಮಾರ್ಗದರ್ಶಕನಾದ ಸೂರ್ಯ ನಮಗೆಲ್ಲ.
ಯಾರು ಪರಹಿತಪ್ರೇಮಿ ಆತ ಜನಮನರತ್ನ;
ಮೆರೆ ಉದಾರತೆಯಿಂದ – ಮುದ್ದುರಾಮ 986

ಮಹಾನುಭಾವರಾರೊ ಇರು ಅವರ ಸಂಗದಲಿ;
ನುಚ್ಚುನೂರಾಗುವುದು ಅಧಮಗುಣ ಆಗ.
ಸಜ್ಜನರ ಸದ್ಭಾವ ಮರೆಸುವುದು ಅವಗುಣವ;
ಬಲ್ಲವರ ಬಳಿ ನಿಲ್ಲು – ಮುದ್ದುರಾಮ 987

ಯಾವ ರೂಪದಲಾರು ಬಳಿ ಬಂದು ನಿಲ್ಲುವರೊ!
ಕೈಹಿಡಿದು ನಡೆಸುವರೊ ಕೆಸರದಾರಿಯಲಿ!
ಅದರ ಸುಳಿವೆಮಗಿರದೆ ನಾವು ಬರಿ ಉಪಕೃತರು;
ತಲೆಬಾಗು ಮೌನದಲಿ – ಮುದ್ದುರಾಮ 988

ಬಂದು ಹೋದರು ಎಂಥ ದಿವ್ಯಾತ್ಮರೀ ಇಳೆಗೆ!
ಆ ನೆನಪ ಮೆಲುಕೆಮಗೆ ಪುಣ್ಯದನಿ ಪಲುಕು.
ಭವ್ಯತೆಯ ಮುಂದೊಂದು ಕಿರುಹಣತೆ ಹಚ್ಚು ನೀ;
ನೆನೆದವರ ತಲೆಬಾಗು – ಮುದ್ದುರಾಮ 989

ಒಳಿತೆಲ್ಲ ಲೋಕದಲಿ ಚೈತನ್ಯ ಪ್ರತಿರೂಪ;
ಶರಣಾಗು ತತ್ವಸಿರಿ ಹಿರಿಮೆ ಕಂಡೊಡನೆ.
ಉದ್ಧರಿಪ ಶಕ್ತಿಯಿದೆ ಸ್ಫೂರ್ತಿಯಿದೆ ಮೌಲ್ಯದಲಿ;
ತಲೆಬಾಗು ಹಿರಿತನಕೆ – ಮುದ್ದುರಾಮ 990

***

ದಿವ್ಯಚರಿತರು ಯಾರೊ ನೆನೆ ಅವರ ಹಿತವಚನ;
ಅನುಸರಿಸು ಅವರಿಟ್ಟ ಹೆಜ್ಜೆಗುರುತುಗಳ.
ತೋರುವುದು ನಿಚ್ಚಳದಿ ಶುದ್ಧಸತ್ವದ ಹಾದಿ;
ಕೈಮುಗಿಯೊ ಮಹಿಮರಿಗೆ – ಮುದ್ದುರಾಮ 991

ನೆರವಿತ್ತು ಸಲಹಿದರು ಯಾರೊ ನೀನಳುವಾಗ;
ಕರಪಿಡಿದು ಮೇಲೆತ್ತಿದರು ನಿನ್ನ ಆಗ.
ಅರಿತು ಈ ಆಶಯವ ಎಸಗು ಪ್ರತ್ಯುಪಕಾರ;
ಇರಲಿ ಶಾಶ್ವತ ಸ್ಮರಣೆ – ಮುದ್ದುರಾಮ 992

ಪಡೆದ ಉಪಕಾರವನು ಉಸಿರಿರುವತನಕ ನೆನೆ;
ಎದೆಗಂಟಿರಲಿ ಸತತ ಧನ್ಯತಾಭಾವ,
ನೆನೆದು ಬೇರಿನ ಋಣವ ಗಿಡ ಹೂವ ನೀಡುವುದು;
ಋಣಭಾರ ಇದೆ ಎಷ್ಟೊ! – ಮುದ್ದುರಾಮ 993

ಎಣ್ಣೆ ಬತ್ತಿಗಳಷ್ಟೆ ಸೊಡರಲಿದ್ದರೆ ಸಾಕೆ?
ಬೇಕೊಂದು ಕಡ್ಡಿಕಿಡಿ ದೀಪವಾಗಲಿಕೆ.
ದೀಪದಿಂದಿನ್ನೊಂದು ದೀಪ ಹಚ್ಚಲುಬಹುದು;
ಕಾಂತಿ ಸರದಿ ಅನಂತ – ಮುದ್ದುರಾಮ 994

ಸೂರ್ಯನಂತಾಗಿ ನೀ ಜಗ ಬೆಳಗಲಾರೆ ನಿಜ;
ಕೋಣೆಕತ್ತಲೆ ಕಳೆವ ಮೋಂಬತ್ತಿಯಾಗು.
ಗಾಂಧಿಯಾಗದಿರೇನು? ಸಾಗು ಆ ಮಾರ್ಗದಲಿ;
ನಿನ್ನಂತೆ ನೀನಾಗು – ಮುದ್ದುರಾಮ 995

ಎಷ್ಟೆ ಕೊಡುಗೆಯ ನೀಡು; ಎಷ್ಟೆ ಸೇವೆಯ ಮಾಡು;
ಬಯಸದಿರು ವಂದನೆಯ ಯಾರಿಂದ ನೀನು.
ಫಲವ ಬೇಡುವ ಮನಕೆ ಸುಳಿಯುವುದೆ ಸಂತೋಷ?
ಮಾಡಿ ಮರೆವುದೆ ಲೇಸು – ಮುದ್ದುರಾಮ 996

ಕೇಳು ಪ್ರವಚನಮಾಲೆ ಸಾಧು ಸಜ್ಜನರಿಂದ;
ನಿನಗೊಪ್ಪಿದುದನಷ್ಟೆ ಆಯ್ದುಕೋ ಮೆಲ್ಲ.
ನಿಶಿತಮತಿಯಿಂದದನು ಅಳವಡಿಸಿಕೋ ಅರಿತು!
ಎಲ್ಲ ಎಲ್ಲರಿಗಲ್ಲ – ಮುದ್ದುರಾಮ 997

ಗಾಂಧಿಚಿತ್ರವ ಹೊತ್ತ ನೋಟಿಗದೆಷ್ಟು ಬೆಲೆಯೊ!
ಗಾಂಧಿತತ್ವಕೆ ಅಷ್ಟು ಬೆಲೆಯಿಲ್ಲವಲ್ಲ!
'ಅಮರ' ಪಟ್ಟವ ಕಟ್ಟಿ ನೋಯಿಸುವ ಜನ ನಾವು;
ನಿಧಿ ಅಪ್ಪಿ ಗುರಿಮರೆತ – ಮುದ್ದುರಾಮ 998

ಯಾರದೋ ಬಲಿದಾನ! ಅದರಿಂದ ಭವ್ಯತೆಯೊ!
ಅವರಿಟ್ಟ ಆ ಹೆಜ್ಜೆ ದಾರಿ ಇಂದೆಮಗೆ.
ಇದು ಪರಂಪರೆ ಗಾಥೆ; ಇದು ಜೀವಸಂಸ್ಕಾರ.
ಆರದಿರಲೀ ಹಣತೆ – ಮುದ್ದುರಾಮ 999

□

ಪದ್ಯಗಳ ಅಕಾರಾದಿ

□

ಟಿಪ್ಪಣಿ

ಟಿಪ್ಪಣಿ

ಟಿಪ್ಪಣಿ

ಟಿಪ್ಪಣಿ

ಉಣಬಹುದು ನಗುತ ನೀ ಬಂಗಾರ ತಟ್ಟೆಯಲಿ;
ಉಣಲು ಸಾಧ್ಯವೆ ನಿನಗೆ ಬಂಗಾರವನ್ನ?
ಸಿರಿಯೊಂದು ಸಾಧನವೊ! ಅದೆ ಬಾಳ ಗುರಿಯಲ್ಲ.
ಬರಲಿ ಬದುಕಿಗೆ ಅರಿವು – ಮುದ್ದುರಾಮ.

ಹಣತೆಯಿದೆ, ತೈಲವಿದೆ, ಬತ್ತಿಯಿದೆ, ಕಡ್ಡಿಯಿದೆ;
ಕಡ್ಡಿ ಗೀರದಿರೆ ದೀಪ ಹಚ್ಚುವುದೆಂತು?
…ನ್ನೊಂದು ದೀಪಗಳ ಸರಮಾಲೆ;
…ು ದೀಪ್ತಿ – ಮುದ್ದುರಾಮ

978-81-944761-6-0